ಸಾಹಿತ್ಯ ದಾಸೋಹ – ೨೨೫

ಸಂಚಿಕೆ 49 – ಜೂನ್ 2024

11.05.2024ರ ದಾಸೋಹದ ಬರಹಗಳ ಸಂಕಲನ





ಎಚ್ಚೆಸ್ಕೆ ಬೆಳಕು–9

(26 ಮೇ 2024)





ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸಾಹಿತ್ಯ ದಾಸೋಹ 225ರ ಸಂಚಿಕೆಯನ್ನು ಓದುಗರ ಕೈಗೆ ಇರಿಸಲು ನಮಗೆ ಅತೀವ ಸಂತಸವೆನಿಸುತ್ತದೆ. ಭಿನ್ನ ಭಿನ್ನ ಅಭಿರುಚಿಯ ಲೇಖಕ ಮಿತ್ರರ ವೈವಿಧ್ಯಮಯ ಅಭಿವ್ಯಕ್ತಿಗಳ ಸುಂದರ ಹೂಮಾಲೆ ಇಲ್ಲಿದೆ. ಓದಿ ಆಸ್ವಾದಿಸಿ ಪ್ರತಿಕ್ರಿಯಿಸಲು ಕೋರಿಕೆ.

ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಪೂರ್ಣಿಮಾ ಭಗವಾನ್ ಅವರಿಗೆ, ಎಲ್ಲ ಪ್ರೋತ್ಸಾಹಕರಿಗೆ ಹಾಗೂ ಸಂಚಿಕೆಯನ್ನು ಸುಂದರವಾಗಿ ರೂಪಿಸಿದ ಶ್ರೀ ಶೃಂಗೇಶ್ವರ ಶರ್ಮ ಅವರಿಗೆ ನಮ್ಮ ನಮನಗಳು.

2024ರ ಮೇ ತಿಂಗಳ 26– ವೇದಿಕೆಯಲ್ಲಿ ಒಂದು ಸಂಭ್ರಮಾಚರಣೆಯ ದಿನ .ಅಂದು ಬೆಂಗಳೂರಿನ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕಿನ ಸುಂದರ ಹಾಗೂ ಸುಸಜ್ಜಿತ ಸಭಾಂಗಣದಲ್ಲಿ 'ಎಚ್ಚೆಸ್ಕೆ ಬೆಳಕು–9' ಕಾರ್ಯಕ್ರಮ ದಿನಪೂರ್ತಿ ಸ್ಮರಣೀಯವಾಗಿ ನಡೆಯಿತು. ಭಾರತೀಯ ಸ್ಟೇಟ್ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕಿಶನ್ ಶರ್ಮ ಅವರು ಉದ್ಘಾಟಿಸಿದ ಈ ಸಮಾರಂಭದಲ್ಲಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶಾಂತಾರಾಮ ಶೆಣೈರವರು ಭಾಗವಹಿಸಿ ಶುಭ ಹಾರೈಸಿದರು.

ಪ್ರಸಿದ್ಧ ಸಾಹಿತಿ, ಕವಯಿತ್ರಿ ಹಾಗೂ ಜನಪ್ರಿಯ ಶಿಕ್ಷಕಿ ಶ್ರೀಮತಿ ಲೋಲಾಕ್ಷಿಯವರು ಎಚ್ಚೆಸ್ಕೆಯವರ ಪ್ರಬಂಧ ಸಾಹಿತ್ಯದ ಬಗ್ಗೆ ಸೊಗಸಾದ ಉಪನ್ಯಾಸ ನೀಡಿದರು. ಬ್ಯಾಂಕಿನ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಚ್. ಶ್ರೀಧರರಾವ್ ಅವರ 'ಬ್ಯಾಂಕುಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು' ಕುರಿತ ಭಾಷಣವಂತೂ ಪ್ರೇಕ್ಷಕರಿಗೆ ಜ್ಞಾನಪ್ರದವಾಗಿತ್ತು.

ಶ್ರೀ ಧೀರೇಂದ್ರ ಅವರ ಮುಂದಾಳತ್ವದಲ್ಲಿ ಹಾಗೂ ವೇದಿಕೆಯ ಸದಸ್ಯರ ಅಭಿನಯ ಚಾತುರ್ಯದಲ್ಲಿ ಪ್ರಾ..ಎಚ್ಚೆಸ್ಕೆಯವರ ಎರಡು ಪ್ರಬಂಧಗಳಾದ 'ಮಾವಿನ ಹಣ್ಣೋ ಮಾವನ ಹೆಣ್ಣೋ' ಹಾಗೂ 'ರುಕ್ಕಮ್ಮನ ಸಂಸಾರ ಅಥವಾ ಋಕ್ಕಮ್ಮನ Someಸಾರ'ಗಳ ನಾಟಕ ರೂಪದ ಪ್ರಯೋಗ ಪ್ರೇಕ್ಷಕರನ್ನು ರಂಜಿಸಿತು.

ಖ್ಯಾತ ಚುಟುಕು ಕವಿ ಶ್ರೀ ಪತ್ತಂಗಿ ಮುರಳಿ ಅವರ ಅಧ್ಯಕ್ಷತೆಯಲ್ಲಿ ನಡೆದ ಚುಟುಕು ಕವಿಗೋಷ್ಠಿಯೂ ಅಷ್ಟೇ ಅರ್ಥಪೂರ್ಣವಾಗಿತ್ತು.

ಈ ಕೈಂಕರ್ಯದಲ್ಲಿ ಭಾಗಿಯಾದ ಎಲ್ಲರೂ ಅಭಿನಂದನಾರ್ಹರು.

ನಮ್ಮ ಸಾಹಿತ್ಯ ದಾಸೋಹ ಅಭಿಯಾನಕ್ಕೆ ಇದೇ ಆಗಸ್ಟ್ ತಿಂಗಳಲ್ಲಿ ರಜತಮಹೋತ್ಸವ ವರ್ಷದ ಸಂಭ್ರಮ. ಮತ್ತಷ್ಟು ಸಾಹಿತ್ಯ ಶ್ರೀಮಂತ ಕಾರ್ಯಕ್ರಮ ಹಮ್ಮಿಕೊಳ್ಳಲು ಇದು ಸಕಾಲವೂ ಹೌದು. ಎಂದಿನಂತೆ ವೇದಿಕೆ ಸದಸ್ಯರ ಸಹಕಾರವೂ ಇರುವುದೆಂಬ ದೃಢ ವಿಶ್ವಾಸ ನಮ್ಮದು.

ಶುಭ ಹಾರೈಕೆಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು 08.06.2024

ದಾಸೋಹದ ಪುಟಗಳಲ್ಲಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – ೨೨೫

ಕಾರ್ಯಕ್ರಮ ವರದಿ – ರಾಧಿಕಾ ವಿ. ಗುಜ್ಜರ್

ದಿನಾಂಕ ೧೧ನೆಯ ಮೇ ೨೦೨೪ರಂದು ಶನಿವಾರ ಇಳಿ ಮಧ್ಯಾಹ್ನ ೩.೩೫ಕ್ಕೆ ಸರಿಯಾಗಿ ಮೇ ತಿಂಗಳ ನೋಡಿಯೋ ಸಾಹಿತ್ಯ ದಾಸೋಹ–೨೨೫, ಗೂಗಲ್‌ಮೀಟ್ ಅಂತರಜಾಲ ತಾಣದಲ್ಲಿ ಆರಂಭವಾಯಿತು. ಶ್ರೀ ಕೆ.ಎನ್.ಮಹಾಬಲ ಅವರು ಸಾರಥ್ಯ ನಿರ್ವಹಿಸಿದ್ದು, ಔಪಚಾರಿಕವಾಗಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕು.ಶೀಲಾ ಅರಕಲಗೂಡು ಅವರು ೨೨೫ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷರಾದ ಶ್ರೀಮತಿ. ಪೂರ್ಣಿಮಾ ಭಗವಾನ್ ಅವರನ್ನು ಸ್ವಾಗತಿಸಿ, ಅವರ ಪರಿಚಯ ನೀಡಿದರು.



ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಮುಖ್ಯವಾಗಿ 'ಎಚ್ಚೆಸ್ಕೆ ಬೆಳಕು' ವಾರ್ಷಿಕ ಕಾರ್ಯಕ್ರಮದ ೯ನೆಯ ಆವೃತ್ತಿಯ ಬಗ್ಗೆ ಪ್ರಸ್ತಾಪಿಸಿ, ೨೬, ಮೇ ೨೦೨೪ರಂದು ನಡೆಯಲಿರುವ ಕಾರ್ಯಕ್ರಮದ ಸ್ಥೂಲ ರೂಪುರೇಷೆಗಳನ್ನು ನೀಡಿದರು. ಕಾರ್ಯಕ್ರಮದ ಖರ್ಚುವೆಚ್ಚಗಳಿಗಾಗಿ ಈಗಾಗಲೇ ಮನವಿ ಮಾಡಿರುವಂತೆ ಸದಸ್ಯರು ತಂತಮ್ಮ ದೇಣಿಗೆಯನ್ನು ಸಂದಾಯ ಮಾಡಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದ ಉದ್ಘಾಟನೆ, ಅತಿಥಿಗಳು, ಉಪನ್ಯಾಸಗಳು, ಭೋಜನ ವ್ಯವಸ್ಥೆ, ನಾಟಕ, ಚುಟುಕು ಕವಿಗೋಷ್ಠಿ ಮುಂತಾದ ವಿವರಗಳನ್ನು ತಿಳಿಸಿ, ಶೀಘ್ರದಲ್ಲಿಯೇ ಕರೆಯೋಲೆಯನ್ನು ವೇದಿಕೆಯಲ್ಲಿ ಹಂಚಿಕೊಳ್ಳುವ ಬಗ್ಗೆ ತಿಳಿಸಿದರು.

ಇತ್ತೀಚೆಗೆ ಲೇಖಿಕಾ ಸಾಹಿತ್ಯ ವೇದಿಕೆಯು, ಹಿರಿಯ ಲೇಖಕಿ ವಾಣಿ ಅವರ ಜನ್ಮದಿನದ ನಿಮಿತ್ತ ಏರ್ಪಡಿಸಿದ್ದ ಸಣ್ಣ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀಮತಿ. ರಾಧಿಕಾ ವಿ ಗುಜ್ಜರ್ ಅವರನ್ನು ರವೀಂದ್ರ ಅವರು ವೇದಿಕೆಯ ಪರವಾಗಿ ಅಭಿನಂದಿಸಿದರು.

ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರು ರೂಪಿಸಿದ ಸಾಹಿತ್ಯ ದಾಸೋಹ–೨೨೪ ಮಾಸಿಕ ಸಂಚಿಕೆಯನ್ನು ಅವರ ಅನುಪಸ್ಥಿತಿಯಲ್ಲಿ ಶ್ರೀಮತಿ ರೇಣುಕಾ ದೇಸಾಯಿ ಅವರು ಬಿಡುಗಡೆ ಮಾಡಿ, ಮುಖಪುಟದಲ್ಲಿ ಕಾಣಿಸಿರುವ ಮತದಾನ ಹಾಗೂ ನವದೆಹಲಿಯ ಸಂಸತ್ ಭವನದ ಚಿತ್ರಗಳನ್ನು ರಾಷ್ಟ್ರೀಯ ಚುನಾವಣಾ ಸಂದರ್ಭದ ದಾಖಲೆಯಾಗಿಸಿರುವ ಮಾಡಿರುವ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ನಂತರ ೪.೦೦ ಗಂಟೆಯಿಂದ ದಾಸೋಹದ ಪ್ರಸ್ತುತಿಗಳು ಆರಂಭವಾದವು. ಒಟ್ಟು ೨೨ ಲೇಖಕರು ತಮ್ಮ ಬರಹಗಳ ಪ್ರಸ್ತುತಿಗಾಗಿ ಹೆಸರು ನೋಂದಾಯಿಸಿದ್ದು, ೧೯ ಲೇಖಕರು ಪ್ರಸ್ತುತಿಗಳನ್ನು ವಾಚಿಸಿದರು.

ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಮೊದಲಿಗೆ ತಮ್ಮ ಮುಕ್ತಕಗಳನ್ನು ವಾಚಿಸಿ, ನಂತರ ಎಲ್ಲ ದಾಸೋಹಿಗಳ ಪ್ರಸ್ತುತಿಗಳ ಬಗ್ಗೆ ತಮ್ಮ ಅಧ್ಯಕ್ಷೀಯ ಅನಿಸಿಕೆಗಳನ್ನು ದಾಖಲಿಸಿದರು. ಪ್ರತಿಯೊಂದು ಪ್ರಸ್ತುತಿಯ ವಿಷಯದ ಆಯ್ಕೆ, ಪ್ರಸ್ತುತತೆ ಹಾಗೂ ಗಮನಿಸಿದ ಅಂಶಗಳನ್ನು ವಿವರವಾಗಿ, ಪ್ರೌಢವಾಗಿ ಮಂಡಿಸಿದರು.

ಕೊನೆಯಲ್ಲಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ೨೨೫ನೇ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ. ಎನ್. ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ ಗುಜ್ಜರ್
ವಿಡಿಯೋ ಮುದ್ರಣ : ಶ್ರೀಮತಿ ರೇಣುಕಾ ದೇಸಾಯಿ
ಸಾಹಿತ್ಯ ದಾಸೋಹದ ಮಾಸಿಕ ವಿದ್ಯುನ್ಮಾನ ಸಂಚಿಕೆ ಪಿಡಿಎಫ್ : ಶ್ರೀ ಎಸ್. ಶೃಂಗೇಶ್ವರ ಶರ್ಮ

(ಸಂಪೂರ್ಣ ಕಾರ್ಯಕ್ರಮವನ್ನು ಸಾಹಿತ್ಯ ದಾಸೋಹದ ಯುಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು).

***

ಕವಿ ಮನ

ವಸಂತನ ಮುಂಜಾವು ...

ತಾಯಿ ಪ್ರಕೃತಿ ದೇವಿಗದೆಷ್ಟು ಸಂಭ್ರಮವಿಂದು
ಬರುವನಲ್ಲ ಸುಂದರ, ಸುಕುಮಾರ ವಸಂತನೆಂದು,
ಮುಂಜಾನೆ ನಡೆಯುತಲಿದ್ದೆ ನಾನವನ ಕಾಣಲೆಂದು
ನಗರದ ನಿಯೋಜಿತ ನವ ವಸತಿ ಸಮುಚ್ಛಯದಲಂದು.

ಕಾಲುದಾರಿಯೊ, ಸಾಲು ಹೊಂಗೆ ಭಂಜಿಕೆಗಳೋ
ಸುಮಧುರ, ಸುವಾಸನಾ ಪುಷ್ಪ ವೃಷ್ಟಿಯೋ
ಕೆಂಪು, ಹಳದಿ, ಗುಲಾಬಿ ಹೂಭರಿತ ವಸಂತರಾಣಿಯೋ
ರಶ್ಮೀ, ಕೆಳ ಬಿಡೆನೆಂಬ ಭಾನಾಭಿಮುಖ ವೃಕ್ಷರಾಶಿಯೋ

ದೇವಾದಿ ದೇವತೆಗಳ ಸುಂದರ ಆಗರ ಆ ದೇವಳ
ಭಕ್ತಗಣ ಪೂಜೆ ಪುನಸ್ಕಾರ ಅಣಿ ಆತಂಕವೇ ಬಹಳ,
ಮಡಿಬಟ್ಟೆ, ಗೋಪಿ, ಭಸ್ಮಲೇಪಿತ ವೇದಾಧ್ಯಾಯಿಗಳ
"ಓಂ ಗಣಾನಾಂತ್ವ ಗಣಪತಿಮ್ ಹವಾಮಹೇ.." ಮಂತ್ರಗಳ

ದಾರಿ, ಅಹಾ ಹೆದ್ದಾರಿ, ಓಡುತ್ತಲಿರುವ ಜಾಗಿಂಗ್ ಕ್ಲಬ್
ಅದೋ ಹುಡುಕುತ್ತಲಿದೆ, ಪ್ಲಾಸ್ಟಿಕ್ 'ಗೋ ಗ್ರೀನ್' ಕ್ಲಬ್
ಅಗೋ, ಆ ಬಯಲಲ್ಲಿ ಕೋತಿಯಾಟದ ನಗುವ ಕ್ಲಬ್
ಅರೆ ಇವರೋ ಫಿಟ್, ಏಕೀ ಟೈಟ್ ಫಿಟ್ ಜಿಮ್ ಕ್ಲಬ್.

ಇದೋ, ಅಟಲ ಬಿಹಾರಿ ವಾಜಪೇಯಿ ಕ್ರೀಡಾಂಗಣ
ವಿಶಾಲ ಬಯಲಲ್ಲಿಪ್ಪತ್ತಕ್ಕೂ ಮಿಗಿಲು ಕ್ರಿಕೆಟ್ ಅಂಕಣ,
ಯಾರ ಚೆಂಡು ಯಾರಿಗೋ, ಇನ್ನಾರದೋ ಓಟ ಎತ್ತಣ
ಸಾಮರಸ್ಯದ ಆಟೋಟ, ಸಹಯೋಗ ಕೂಟವೇ ಚಿತ್ರಣ.

ಕಾಲ ಚಕ್ರ ಸ್ಕೇಟಿಂಗ್ ಅಂಗಳದಲ್ಲಿ ಆ ಚಿಣ್ಣರು
ಜಾದು, ಆಟ ಓಟ ಎಲ್ಲೆಲ್ಲೋ ಓಡಾಡುವರು
ಕೊಕ್ ಕೊಕ್ ಕೋಳಿ ಕೂಗಿನ ಕಿಶೋರಿಯರು
ಕಬಡ್ಡಿ ಕಬಡ್ಡಿ, ಬಾಯಿ ತೆರೆಯದ ಯುವಕರು.

ವಾಲಿಬಾಲ್‌ಗೆ ಹೊಡೆವರ ತಂಡ ಎದುರಲ್ಲೇ
ಬಾಸ್ಕೆಟ್ ಬಾಲ್ ಬೇಟೆಯ ಲಂಬೂಗಳು ಅಲ್ಲೇ
ಟೆನಿಸ್ಸಿಗರು ಚೆಂಡನ್ನು ಹಾರಿಸುತಲಿರುವಲ್ಲೆ
ಬ್ಯಾಡ್ಮಿಂಟನ್ನಿಗರು ಪುಟಿದೇಳಿಸುವ ಪುಕ್ಕವಲ್ಲೆ.

ಭಗವಾಧ್ವಜದ ಎದುರಿನ ಶಿಸ್ತಿನ ಸಾಲು ಸಿಪಾಯಿಗಳು,
'ನಮಸ್ತೆ ಸದಾವತ್ಸಲೆ ಮಾತೃಭೂಮೇ.. ' ನಮನಗಳು,
ಎಂದಾಗಲೇ ಮುದ್ರಾ ಅಂಕಿತ ಯೋಗಾಭ್ಯಾಸಿಗಳು
'ಓಂ ಭಾಸ್ಕರಾಯ ನಮಃ ' ಸೂರ್ಯ ನಮಸ್ಕಾರಗಳು.

ಧ್ಯಾನಾಸಕ್ತರಿವರು, ಸಂಯಮಿಗಳು ಶಬ್ದಾತೀತರು
ತಮ್ಮ ಬ್ರೂಹ್ ಮಧ್ಯೆ ದೇವರನ್ನು ಕಾಂಬೆನೆಂಬರು
ಸಂತೆಯೋಪಾದಿಯ ಬಯಲಲ್ಲೇ ಪ್ರವಚನಕಾರರು
ಹಿರಿಜೀವಿ, ಜೀವನ್ಮುಕ್ತಾಕಾಂಕ್ಷಿಗಳು ಸಾಧ್ವಿ-ಸಂತರು.

ಮಾತೆ ಪ್ರಕೃತಿ, ಬದುಕು ಎಷ್ಟೊಂದು ಸುಂದರ
ವಸಂತನಾಗಮನ ಚೇತನವೀ, ಬಾಲ ಬಾಲೆಯರ,
ಯುವಕ ಯುವತಿಯರ, ಮಧ್ಯವಯರ, ವೃದ್ಧರ
ಯೋಗಿ, ತ್ಯಾಗಿ, ಧರ್ಮ ಕರ್ಮ ಕಾರ್ಯಕರ್ತರ.

ಏನಿದೇನಿದು ವೈವಿಧ್ಯ! ಆದರೇಕೆ ಈ ವೈರುಧ್ಯ?

ಮಾತೆಯ ಮಡಿಲಿನ ಮಮತೆಯನರಸದೆ
ಮಂದಿ ಮಲಗಿರುವರೇಕೆ ಅನುಭವಿಸದೇ?
ಜೀವಿತದ ಸುಂದರ ಸುಮಧುರ ಘಟ್ಟವದೇ
ಬಯಲಲ್ಲಿ ಬಯಲಾಗಿ ಸಂಭ್ರಮಿಸುವುದೇ!

ಕಳೆದ ಕ್ಷಣ ಮರಳಲಾರದು, ಕಳೆಯುವಿರೇಕೋ
ಕಲಕಲರವ ದಿನ ವಸಂತಾಗಮನ ಕ್ಷಣವಿದೇಕೋ,
ಮಾಮರಗಳ ಚಿಗುರು ಹೂವು, ಕಾಜಾಣಗಳೇಕೋ
ಕುಹೂ, ಕುಹೂ, ಮತ್ತೀ ಸುಗಂಧ ಭೂದೇವಿಗಿಕೋ .

ಈ ಮುಂಜಾವಿನ ಅಣು,ತೃಣ, ಅನುಕ್ಷಣವೂ ರಮ್ಯ
ಅನುಭವಿಸು, ಆರಾಧಿಸು ಈ ಸೌಂದರ್ಯ ಪಾರಮ್ಯ
ಕಾಯಕ-ಜೀವನ ಸಮತೋಲನವಲ್ಲವೇ ನಿನ್ನ ಗಮ್ಯ
ನೀ ಬಯಸಿದೊಡೆ ನಿರಂತರ ನೂತನ ಚೇತನ ಅದಮ್ಯ.

ಏಳಿ ಎದ್ದೇಳಿ, ಮರುಗದಿರಿ ಅನುಭೂತಿ ಇಲ್ಲೆಂದು
ಪಂಚ ಭೂತಗಳ ಅನುಭವಾಮೃತ ಎಲ್ಲೆಂದು
ಕಳೆಯಲಾಗದ ಚಿಂತನ ಚೇತನಾನುಭವ ಇದೆಂದು
ಮರೆಯಲಾಗದ ಸೃಷ್ಟಿ ಸಮೃದ್ಧಿಯೇ ಇಂದೆಂದು.

ಬಯಲನ್ನು ಸಂತಸದಿ ದಾಟಿಸಲು ಎನಿತೆನಿತೋ
ಸ್ವಾದಿಷ್ಟ ಹಿತ ಮಿತ ಸಂತೃಪ್ತ ಸಿಹಿತಿನಿಸೆನಿತೋ
ಹಾಲು, ಮಜ್ಜಿಗೆ, ಕಷಾಯ, ಕಾಫಿ ಪಾನಕವೆನಿತೋ
ಮುಂಜಾವಿನ ವಸಂತ ಅಪ್ಯಾಯಮಾನ ಎನಿತೆನಿತೋ

– ಹೆಚ್. ಶ್ರೀಧರರಾವ್
01.05.2024

ಕವಿ ಮನ

ನಂದಿದ ದೀಪಗಳು

ತಾರುಣ್ಯದ ಹುಮ್ಮಸ್ಸಿನಲಿ
ಬೆಳಗಿದವು ಬೆಳಕು ಹರಡಿ
ನಾಮುಂದೆ ತಾಮುಂದೆನುತ
ಎಣ್ಣೆ ಮುಗಿದಾಗ ತಣ್ಣಗಾದವು

ಬುಡ್ಡಿದೀಪವೋ ಹಣತೆಯೋ
ಬೆಳ್ಳಿದೀಪವೋ ನಂದಾದೀಪವೋ
ದರ್ಜೆ ಯಾವುದಾದರೇನು,
ಆರಿಹೋಗುವುದೊಂದು ದಿನ

ಅಧಿಕಾರಿಯೋ,ಕಾರಕೂನನೋ
ಅಧ್ಯಕ್ಷನೋ ಕಾರ್ಯಕರ್ತನೋ
ನಿವೃತ್ತಿಯ ನಂತರದ ದಿನದಲಿ
ನಿಲ್ಲುವರೊಂದೇ ಸಾಲಿನಲಿ

ಮೇಲಂತು ಇಲ್ಲ ಕೆಳಗೆ ಯಾರೂ ಇಲ್ಲ
ಒಳಗಂತು ಇಲ್ಲ ಎಲ್ಲರೂ ಹೊರಗೆ
ಎತ್ತರದಲಿ ಮೊದಲಿದ್ದರೇನಂತೆ
ಉತ್ತರದಲಿ ಸಮತಟ್ಟು ನೆಲವೆ undefined

ಚದುರಂಗದಾಟದಲಿ ನಾನೇ ರಾಜ
ವಜೀರನವನು ಹಾರುವ ಕುದುರೆ
ಒಂಟೆ ಕಾಲಾಳು ಆನೆಗಳೆಂತು
ಆಟ ನಡೆಯುವಾಗಲಷ್ಟೆ ಬಲವು

ಆಟ ಮುಗಿಯುತಲೇ ಹೇಳಲೆಂತು
ಕಟ್ಟಿಗೆಯ ಪೆಟ್ಟಿಗೆಯೊಳಗಿಟ್ಟು
ಒಟ್ಟಿಗೆಯೆ ಮಲಗುವ ಪರಿಯು
ಅಟ್ಟದ ಮೇಲಿಡುವುದು ತಪ್ಪುವುದೇ?

ಎಲ್ಲಿದ್ದರೇನ್ ನೀ ಎಂತಿದ್ದರೇನ್
ಗುಟ್ಟನಿದನೀ ಅರಿತೆಯೆಂದರೆ
ಚಟ್ಟವೇರುವವರೆಗೂ ನಿನಗೆ
ಸುಖಶಾಂತಿಯ ರಸದೌತಣವೇ ಸೈ

– ಎಸ್.ಮಂಜುನಾಥ್ (ಹಿಮನಾಥ)
08.05.2024

ಗುರು ಪಂಚಕ

ಕುಂದಿಸದೆ ತನ್ನಿರವ
ಭಂಗಿಸದೆ ಪರರಿರವ
ಹೊಂದಿಸುತೆ ನಿಂತಿರುವ
ಗುರುವೆಮಗೆ ಆಗಸವು

ಬಿರಿದ ಸುಮಗಂಧವೊ
ಕೊಳೆತ ಶವಗಂಧವೊ
ಮೈದಡವೊ ಸಮದರ್ಶಿ
ಗುರುವೆಮಗೆ ಮಾರುತನು

ದೇವ ಯಜನದ ಅನ್ನ
ಗ್ರಾಮ ಮಾರ್ಜನದನ್ನ
ಸ್ವಾಹವೆನುವ ಊರ್ಧ್ವ–
ಸತ್ವದಗ್ನಿ ಗುರುವೆಮಗೆ

ಎತ್ತರದ ಹುಟ್ಟು , ಕೊಚ್ಚಿ
ಹಾಕುವ ಕಸುವು , ಕೆಳ
ಗಿಳಿದು ಹರಿವಂತ ನಮ್ರ
ಸತ್ವದ ಜಲವೆ ಗುರುವೆಮಗೆ

ಎದೆಗೆ ಬಿದ್ದುದನೆಲ್ಲ
ಆತುಕೊಳ್ಳುವ ತಾಳ್ಮೆ
ಕಸಕು ರಸರೂಪ ಕೊಡುವ
ಕುಶಲಿ ಭುವಿ ಗುರುವೆಮಗೆ

ಪಂಚ ಪಂಚಕದ ನೇಯ್ಗೆ
ಜೀವಹೊದ್ದಿಹ ಬಟ್ಟೆ
ಹಾಸುಹೊಕ್ಕನು ನೋಡೆ
ಎಳೆಯ ಸೂಕ್ಷ್ಮಕೆ ಬಟ್ಟೆ

ಬಾಹ್ಯಗುರು ಬೋಧೆಯಲಿ
ಒಳಗಣ್ಣೆನುನ್ಮೇಷ, ಭೂತ
ಪಂಚಕವೆ ಪರಮೇಷ್ಠಿ, ಸಹ
ಬಾಳ್ವೆಗಿದು ಮಂತ್ರೋಪದೇಶ

– ಶಾಂತಾ ನಾಗಮಂಗಲ
15.05.2024

ಕವಿ ಮನ

ಸೃಷ್ಟಿ ಸೌಂದರ್ಯ

ಬಣ್ಣ ಬಣ್ಣ ಈ ಸೊಗದ ಜಗ ಮನೋಹರ
ಬಣ್ಣನೆಗೆ ನಿಲುಕದ ಸೌಂದರ್ಯದ ಸಾಕಾರ

ಸಣ್ಣ ಹಿಮಬಿಂದು ರತುನದಂತೆ ಹೊಳೆಯದೆ?
ಸೂರ್ಯರಶ್ಮಿಯ ಸಮ್ಮಿಲನದಿಂದೆ....

ಬೇಲಿ ಮೇಲಿನ ಜಾಲಿ
ಹೂವಲೂ ಭಗವಂತನ
ಆನಂದ ರೂಪುಗೊಂಡಿದೆ

ಘನವೆಂದೊಂದನು ಮರೆಯಿಸಲಿಲ್ಲ
ತೃಣವೆಂದಿನ್ನೊಂದನು ಕಡೆಗಣಿಸಿಲ್ಲ

ಒಂದೇ ರಸನೆಯಿಂದ
ಎಷ್ಟು ಹೇಳಲಿ ವಂದನೆ?
ಈ ಹುಲುನಾಲಗೆ ನಲಿದು
ಉಲಿದಷ್ಟೂ ಸಾಲದೆನಿಸಿದೆ!

ಬಾ ಸ್ವಾಮಿಯೇ ಈ ಭಾವಗಳ ಪ್ರದೀಪ್ತಗೊಳಸು
ಮರ್ತ್ಯದ ರಸನೆಯೊಂದರಿಂದ
ಅಸದಳವೈ ರಸಲೋಕ ಬಣ್ಣನೆ

ಚಿಟ್ಟೆಗಳ ರೆಕ್ಕೆ,ಹಕ್ಕಿಗಳ ಚಿಲಿಪಿಲಿ,
ಹೂವರಳುವ, ಹೊಳೆ ಹರಿಯುವ
ಒಂದು ನಿಸರ್ಗ ದೃಶ್ಯ ಸಾಕೆನಗೆ
ತಾದಾತ್ಮ್ಯದಿಂದದನೇ ಬಣ್ಣಿಸಿ
ಆನಂದದಿ ಕೈಮುಗಿವೆ ಸುಮ್ಮನೇ...

ಎದೆಯೊಳಗಿನ ಭಾವ ರಾಶಿ
ಸೃಷ್ಟಿಕರ್ತನ ಜಗದಭಿವ್ಯಕ್ತಿಯ
ಬಣ್ಣಿಸಲರಿಯದೆ ಸೋತಿದೆ

ಎಷ್ಟು ಹಾಡಿ ಬಣ್ಣಿಸಿದರೂ ಏನೋ ಕೊರತೆ ಕಾಡಿದೆ
ಬಣ್ಣನೆ ಗಿಣ್ಣನೆಗೆ ಸಿಲುಕದೆ
ಸಾರ್ವಭೌಮನಂತೆ ಮೆರೆದಿದೆ

ಆ ಬೆಟ್ಟ! ಈ ಸಾಗರ! ಓ ಅನಂತ ಆಕಾಶದೆದುರು
ಕುಬ್ಜತೆಯನಾಂತು ನಾಚಿದೆ
ಕುಂಚ ಕೈಯಿಂದ ಜಾರಿದೆ
ಆ ಅಗೋಚರ ಚಿತ್ರಕಾರನ
ಕೌಶಲ್ಯಕೆ ಮನಸು ಶರಣಾಗಿದೆ

ಅಗೋ! ಜೀವ ವಿಕಸನ ಶಿಖರ!
ಉತ್ತುಂಗದಲಿ ಮಾನವ ಶರೀರ

ಎಲ್ಲವನೂ ಕರುಣಿಸಿ ನಗುತಿದೆ ದೈವ!
ಅವನಿತ್ತ ವಿಕಸಿತ ಮೆದುಳ
ಶಕ್ತಿಯ ಅರಿವಿನಿಂದ
ಸೃಷ್ಟಿಯ ಅಂದ ಇಮ್ಮಡಿಗೊಳಿಸಿದ,
ಕಾಣದ ಸಕಲ ವೈಭೋಗ ಎದುರಿಗೆ ತಂದ

ಮಾನವರ ನಡುವೆ ಪ್ರೀತಿಯ ಸರಪಳಿ ಕಡೆದ,
ಹೇಗೋ ಎಂತೋ ಅಹಂಕೃತಿಯ ಕೋಡು ಮೂಡಿ
ಕೋಡಗನಂತಾಡಿಸಿತು ಮನವ

ಮಡಿಲಲಿ ಇಟ್ಟು, ಮಮತೆಯ ಕೊಟ್ಟು
ಬೆಳೆಸಿದ ತಾಯ ಉದರಕೆ
ಬೆಂಕಿ ಇಟ್ಟ, ಉಸಿರಾದ ಹಸಿರ ಸುಟ್ಟ

ಕಾಲುಗಳ ಕೆಳಗೆ ನಿಂತ ಭೂಮಿಯೆ
ಬಿರಿಯುತಿಹ ಪರಿಯ ಅರಿಯಲಿಲ್ಲ
ಮಾನವ ಕೈಯಿಟ್ಟ ಕಡೆ
ನಂದನ ಬೆಂಗಾಡಾಯಿತು
ನಗೆ ರೋದನವಾಯಿತು
ಹಗೆ ಗಹಗಹಿಸಿ ನಕ್ಕಿತು

– ಗಿರಿಜಾ ರಾಜ್ ಎಲ್.
22.05.2024

ಕವಿ ಮನ

ಕಾಣಾಕ ಬೇಕಾತು

ಹೊತ್ತಿತ್ತು ಗೊತ್ತಿತ್ತು
ಒಳತೀನ ಮತ್ತಿತ್ತು
ಕೇಡೀಗ ಕುತ್ತಿತ್ತು
ಸಂತರ ಸುತ್ತಿತ್ತು
ಆ ಕಾಲ ಏನಾತೋ ಪರಮೇಸುರಾ
ನಿನ್ನ ಕಾಣಾಕ ಬೇಕಾತು ಪರಮೇಸುರಾ

ತಂಪಾದ ಸೂರಿತ್ತು
ಊರಾಕ ಬೇರಿತ್ತು
ಕುಡಿದಷ್ಟು ನೀರಿತ್ತು
ಬಾಳೊಂದು ತೇರಿತ್ತು
ತೇರೊಳಗ ನೀನಿಲ್ಲ ಪರಮೇಸುರಾ
ನಿನ್ನ ಕಾಣಾಕ ಬೇಕಾತು ಪರಮೇಸುರಾ

ಹೊಲದಾಗ ಬೆಳಿ ಇಲ್ಲ
ಭೂಮಿಗ ಮಳಿ ಇಲ್ಲ
ಬದಕೀಗ ಕಳಿ ಇಲ್ಲ
ಹರಿವಿರೋ ಹೊಳಿ ಇಲ್ಲ
ಏನಂಥ ತಪ್ಪಾತೋ ಪರಮೇಸುರಾ
ನಿನ್ನ ಕಾಣಾಕ ಬೇಕಾತು ಪರಮೇಸುರಾ

ಮನಸೀಗ ಮಿತಿ ಇಲ್ಲ
ಅಳುವಿರದ ಕತಿ ಇಲ್ಲ
ತಿಳುವಳಕಿ ಮತಿ ಇಲ್ಲ
ಹೆಣಕೊಂದು ಚಿತಿ ಇಲ್ಲ
ಹೆಂಗಿತ್ತು ಹೆಂಗಾತೋ ಪರಮೇಸುರಾ
ನಿನ್ನ ಕಾಣಾಕ ಬೇಕಾತು ಪರಮೇಸುರಾ

ಬಳಗದ ಜೋತಿ ಇಲ್ಲ
ಕವಳಕ್ಕ ಗತಿ ಇಲ್ಲ
ಸತಿಗೊಬ್ಬ ಪತಿಯಿಲ್ಲ
ಕೆಡಕೀಗ ಹತಿ ಇಲ್ಲ
ಕಲಿಗಾಲ ತಲಿಮ್ಯಾಲ ಪರಮೇಸುರಾ
ನಿನ್ನ ಕಾಣಾಕ ಬೇಕಾತು ಪರಮೇಸುರಾ

– ಸೀತಾರಾಂ ಕಟ್ಟಿ
29.05.2024

ಎಚ್ಚೆಸ್ಕೆ ಬೆಳಕು ~ 9

೨೬ ಮೇ ೨೦೨೪

ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣ, ಸಂತ ಮಾರ್ಕರ ರಸ್ತೆ, ಬೆಂಗಳೂರು


ಬೆಳಗ್ಗೆ 10.30ರಿಂದ ಸಂಜೆ 5.30ರವರೆಗೆ



ಪ್ರಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ)

(26.08.1920 – 29.08.2008)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ಬೆಂಗಳೂರು



ಎಚ್ಚೆಸ್ಕೆ ಬೆಳಕು
ಒಂಭತ್ತನೆಯ ಆವೃತ್ತಿ

ದಿನಾಂಕ:
೨೬-೦೫-೨೦೨೪, ಭಾನುವಾರ

ಸ್ಥಳ: ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣ
ಸಂತ ಮಾರ್ಕರ ರಸ್ತೆ, ಬೆಂಗಳೂರು ೫೬೦೦೦೧

ಉದ್ಘಾಟನೆ
೧೦.೦೦ ರಿಂದ ೧೧.೦೦

ಶ್ರೀ. **ಕ್ರಿಶನ್ ಶರ್ಮ**
ಮುಖ್ಯ ಪ್ರಧಾನ ವ್ಯವಸ್ಥಾಪಕರು,
ಭಾರತೀಯ ಸ್ಟೇಟ್ ಬ್ಯಾಂಕ್
ಬೆಂಗಳೂರು ವೃತ್ತ

ವೆಬ್ ಸೈಟ್ ಉದ್ಘಾಟನೆ

ಶ್ರೀ. **ಶಾಂತರಾಂ ಪೈ. ಕೆ**
ಪ್ರಧಾನ ವ್ಯವಸ್ಥಾಪಕರು,
ಭಾರತೀಯ ಸ್ಟೇಟ್ ಬ್ಯಾಂಕ್

ಸನ್ಮಾನ

ಶ್ರೀ. **ಹೆಚ್.ಎಲ್. ಗುರುಪ್ರಸಾದ್**
ಎಚ್ಚೆಸ್ಕೆ ಅವರ ಸಾಹಿತ್ಯಗಳ ಡಿಜಿಟಲ್
ರೂಪಾಂತರದ ರುವಾರಿ

ಸಾಹಿತ್ಯ ಗೋಷ್ಠಿ
೧೧.೦೦ ರಿಂದ ೧೨.೦೦

ಶ್ರೀಮತಿ. **ಕೆರೋಡಿ ಎಂ ಲೋಲಾಕ್ಷಿ**
ಹಿರಿಯ ಸಾಹಿತಿಗಳು,
ಮೈಸೂರು

ವಿಷಯ
ಪ್ರಾಚಾರ್ಯ ಎಚ್ಚೆಸ್ಕೆ ಅವರ ಸಮಗ್ರ ಪ್ರಬಂಧಗಳು

ಬ್ಯಾಂಕಿಂಗ್ ಗೋಷ್ಠಿ
೧೨.೦೦ ರಿಂದ ೧.೦೦

ಶ್ರೀ. **ಎಚ್. ಶ್ರೀಧರ ರಾವ್**
ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರು
ಭಾರತೀಯ ಸ್ಟೇಟ್ ಬ್ಯಾಂಕ್

ವಿಷಯ
ಭಾರತೀಯ ಬ್ಯಾಂಕಿಂಗ್; ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು

ಸಾಂಸ್ಕೃತಿಕ ಗೋಷ್ಠಿ
೦೨.೦೦ ರಿಂದ ೦೩.೧೫

ನಾಟಕಗಳು

೦೧. ಮಾವಿನ ಹಣ್ಣೋ ಅಥವಾ ಮಾವನ ಹೆಣ್ಣೋ

೦೨. ಋುಕ್ಕಮ್ಮನ ಸಂಸಾರ! ರುಕ್ಕಮ್ಮನ someಸಾರ

ಎಚ್ಚೆಸ್ಕೆಯವರ ಪ್ರಬಂಧಗಳ ನಾಟಕ ರೂಪಾಂತರ ಮತ್ತು ನಿರ್ದೇಶನ
ಶ್ರೀ. **ಎಸ್. ಧೀರೇಂದ್ರ**

ಭೋಜನದ ವ್ಯವಸ್ಥೆಯಿದೆ

ಎಚ್ಚೆಸ್ಕೆ ಬೆಳಕು
ಒಂಭತ್ತನೆಯ ಆವೃತ್ತಿ

ಚುಟುಕು ಕವಿಗೋಷ್ಠಿ
೦೩.೩೦ ರಿಂದ ೦೫.೦೦

ಅಧ್ಯಕ್ಷತೆ
ಶ್ರೀ. **ಪತ್ತಂಗಿ ಮುರುಳಿ**
ಖ್ಯಾತ ಚುಟುಕು ಕವಿ

೦೫.೦೦ ರಿಂದ ೦೫.೧೫
ಸಮಾರೋಪ ಮತ್ತು ವಂದನಾರ್ಪಣೆ

ಎಲ್ಲರಿಗೂ ಆದರದ ಸ್ವಾಗತ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ಎಚ್ಚೆಸ್ಕೆ ಬೆಳಕು-೨

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಭಾನುವಾರ ದಿನಾಂಕ 26ನೇ ಮೇ 2024ರಂದು ಬೆಂಗಳೂರಿನ ಸಂತ ಮಾರ್ಕ್‌ನ ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣದಲ್ಲಿ 'ಎಚ್ಚೆಸ್ಕೆ ಬೆಳಕು – 9ನೇ ಆವೃತ್ತಿ' ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಮೊದಲ ಗೋಷ್ಠಿ: ಉದ್ಘಾಟನಾ ಸಮಾರಂಭ:

ಶ್ರೀಮತಿ ಸುಮಾ ಪ್ರಸಾದ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ರವಿ ಕುಸುಬಿಯವರು ಎಲ್ಲರನ್ನೂ ಸ್ವಾಗತಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕಿನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕಿಶನ್ ಶರ್ಮರವರು ದೀಪ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡದಲ್ಲಿ ಮಾತನಾಡಿದ ಅವರು ಖ್ಯಾತ ವಾಗ್ಮಿ, ಅರ್ಥಶಾಸ್ತ್ರಜ್ಞ ಮತ್ತು ಬರಹಗಾರ ಪ್ರಾ. ಎಚ್ಚೆಸ್ಕೆಯವರ ಸ್ಮರಣೆಯಲ್ಲಿ ಪ್ರತಿ ವರ್ಷವೂ 'ಎಚ್ಚೆಸ್ಕೆ ಬೆಳಕು' ಬೆಳಗುತ್ತಿರುವುದನ್ನು ಶ್ಲಾಘಿಸಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಚಟುವಟಿಕೆಗಳನ್ನು ಪ್ರಶಂಸಿಸಿ ಕಾರ್ಯಕ್ರಮಕ್ಕೆ ಶುಭಕೋರಿದರು.





ಪ್ರತಿಷ್ಠಾನದ ಜಾಲತಾಣದ ಉದ್ಘಾಟನೆ:

ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ. ಶಾಂತಾರಾಂ ಪೈಯವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಜಾಲತಾಣವನ್ನು ಉದ್ಘಾಟಿಸಿ, ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಬೇಕೆಂದರು. ಬ್ಯಾಂಕು ಹಾಗೂ ಕನ್ನಡದ ಅವಿನಾಭಾವ ಸಂಬಂಧದ ಪ್ರತೀಕವೇ ಇಂತಹ ಕಾರ್ಯಕ್ರಮಗಳು ಎಂದ ಅವರು, ಬ್ಯಾಂಕಿಂಗ್ ಪ್ರಪಂಚದೊಂದಿಗೆ ಎಚ್ಚೆಸ್ಕೆಯವರೊಡನೆ ಆರಂಭವಾದ ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತ ಕಾರ್ಯಗಳು ಬ್ಯಾಂಕಿಂಗ್ ಕಮ್ಮಟಗಳೇ ಮೊದಲಾದ ಹಲವಾರು ಚಟುವಟಿಕೆಗಳಿಗೆ ವಿಸ್ತರಿಸಿತು. ಇಂತಹ ಕಾರ್ಯಕ್ರಮಗಳಲ್ಲಿ ನವ ತರುಣ ಉದ್ಯೋಗಿಗಳು ಭಾಗವಹಿಸುವಂತಾಗಬೇಕು. ಆಗ ಮಾತ್ರವೇ ಬ್ಯಾಂಕುಗಳಲ್ಲಿ ಕನ್ನಡಪರ ಚಟುವಟಿಕೆಗಳು ಮುಂದುವರೆಯಲು ಸಾಧ್ಯ. ಕನ್ನಡ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಬೇಕು ಎಂದರು.

ಎಚ್ಚೆಸ್ಕೆ ಅವರ ಸಾಹಿತ್ಯದ ಡಿಜಿಟಲ್ ರೂಪಾಂತರ ಮಾಡಿದ ಶ್ರೀ ಎಚ್.ಎಲ್. ಗುರುಪ್ರಸಾದ್ ಅವರನ್ನು ಪ್ರತಿಷ್ಠಾನದ ಪರವಾಗಿ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ಸನ್ಮಾನಿಸಿದರು. ಶ್ರೀಮತಿ ರೇಣುಕಾ ದೇಸಾಯಿ ಅವರು ಗುರುಪ್ರಸಾದ್‌ರನ್ನು ಪರಿಚಯಿಸಿದರು.





ವೇದಿಕೆಯಲ್ಲಿ ಉಪಸ್ಥಿತರಿದ್ದ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶ್ರೀ ಗಿರಿರಾಜ್ ಅವರನ್ನು ಸಮಾರಂಭದಲ್ಲಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬೆಂ.ಶ್ರೀ. ರವೀಂದ್ರರವರು, ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ ನಡೆಸಿದ ಚಟುವಟಿಕೆಗಳು ಹಾಗೂ ಕರ್ನಾಟಕ ವೃತ್ತ ರಚನೆಯ ಹೋರಾಟದ ಹಿನ್ನೋಟ ನೀಡಿ ಈಗ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವಾಗಿ ಮುನ್ನಡೆಯುತ್ತಿರುವ ಬಗ್ಗೆ ತಿಳಿಸಿದರು.

ಕೊನೆಯಲ್ಲಿ ಶ್ರೀ ಪಾ.ರಾಜಗೋಪಾಲ ಅವರು ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ.ರವೀಂದ್ರ ಮತ್ತು ಕಾರ್ಯದರ್ಶಿ ಶ್ರೀ ಕೆ.ಎನ್. ಮಹಾಬಲ ಅವರನ್ನು ಸನ್ಮಾನಿಸಿದರು. ಶ್ರೀ ಹು.ವಾ.ಶ್ರೀಪ್ರಕಾಶ್ ವಂದನಾರ್ಪಣೆ ಮಾಡಿದರು.

ಎರಡನೆಯ ಗೋಷ್ಠಿ – ಸಾಹಿತ್ಯ ಗೋಷ್ಠಿ

ಶ್ರೀಮತಿ ಲೋಲಾಕ್ಷಿ ಕೆರೋಡಿ ಅವರಿಂದ 'ಎಚ್ಚೆಸ್ಕೆಯವರ ಸಮಗ್ರ ಪ್ರಬಂಧಗಳು' ಕುರಿತು ಉಪನ್ಯಾಸ:



ಗೋಷ್ಠಿಯ ಆರಂಭದಲ್ಲಿ ಶ್ರೀ ಕೆ.ಎನ್.ಮಹಾಬಲ ಅವರು ಶ್ರೀಮತಿ ಲೊಲಾಕ್ಷಿ ಕೆರೋಡಿಯವರನ್ನು ಸ್ವಾಗತಿಸಿ ಪರಿಚಯಿಸಿದರು

ಎಚ್ಚೆಸ್ಕೆಯವರ ಸುಮಾರು 157 ಪ್ರಬಂಧಗಳ ಬಗ್ಗೆ ಕೇವಲ 45 ನಿಮಿಷಗಳಲ್ಲಿ ಮಾತನಾಡುವುದು ಬಹಳ ಕಷ್ಟದ ಕೆಲಸ ಎಂದು ತಮ್ಮ ಮಾತುಗಳನ್ನು ಆರಂಭಿಸಿದ ಶ್ರೀಮತಿ ಲೋಲಾಕ್ಷಿಯವರು, ಎಚ್ಚೆಸ್ಕೆಯವರು 'ವಾರದ ವ್ಯಕ್ತಿ' ಎಂಬ ಅಂಕಣದಲ್ಲಿ ಒಂದೇ ಪುಟದಲ್ಲಿ ವ್ಯಕ್ತಿ ಪೂರ್ಣ ಚಿತ್ರಣ ಕಟ್ಟಿಕೊಡುತ್ತಿದ್ದರು. ಆಮೇಲೆ 'ವ್ಯಕ್ತಿ ವಿಶೇಷ' ಎಂಬ ಅಂಕಣದಲ್ಲಿ ಒಂದು ಪುಟದಲ್ಲಿ ಇಬ್ಬರ ಪರಿಚಯ ಮಾಡುತ್ತಿದ್ದರು. ಎಚ್ಚೆಸ್ಕೆಯವರ ಸಮಗ್ರ ಪ್ರಬಂಧಗಳ ಕರಡು ಪ್ರತಿ ತಿದ್ದುವ ಕೆಲಸವನ್ನು ಶ್ರೀ ದೇ. ಜವರೇಗೌಡ ಅವರು ನನಗೆ ವಹಿಸಿದ ಕಾರಣದಿಂದಾಗಿ ನನಗೆ ಅವರ ಎಲ್ಲ ಪ್ರಬಂಧಗಳನ್ನು ಓದುವ ಅವಕಾಶ ಲಭಿಸಿತು. ಆ ಪುಸ್ತಕದ ಬಿಡುಗಡೆ ಸಂದರ್ಭದಲ್ಲಿ ಎಚ್ಚೆಸ್ಕೆಯವರು



ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದರು. ಕೃತಿ ಬಿಡುಗಡೆಯ ದಿನ ಅವರನ್ನು ಆಸ್ಪತ್ರೆಯಿಂದ ನೇರವಾಗಿ ಸಮಾರಂಭಕ್ಕೆ ಕರೆತರಲಾಯಿತು. ಅವರು ಪುಸ್ತಕವನ್ನು ತಡವಿ, 'ಇನ್ನು ನಾನು ಹೋದರೂ ಪರವಾಗಿಲ್ಲ, ಇದರಲ್ಲಿ ನಾನು ಉಳಿದಿದ್ದೇನೆ' ಎನ್ನುತ್ತಾ, ಒಂದು ಪುಸ್ತಕಕ್ಕೆ ತಮ್ಮ ಹಸ್ತಾಕ್ಷರ ಹಾಕಿ ನನಗೆ ನೀಡಿದರು. ಅದೇ ಅವರ ಕೊನೆಯ ಹಸ್ತಾಕ್ಷರ. ಆ ಪುಸ್ತಕವನ್ನು ನಾನು ಭದ್ರವಾಗಿ ಇಟ್ಟುಕೊಂಡಿದ್ದೇನೆ. ಅದನ್ನು ಎಲ್ಲಿಗೂ ತೆಗೆದುಕೊಂಡು ಹೋಗುವುದಿಲ್ಲ ಎಂದು ಭಾವಪೂರ್ಣವಾಗಿ ನುಡಿದರು.
ಮೊಗೆದಷ್ಟು ಬಗೆದಷ್ಟು ಮತ್ತಷ್ಟು ಇರುವ ವಿಚಾರ ಎಚ್ಚೆಸ್ಕೆ ಅವರದ್ದು. ಅವರು ಚಲಿಸುವ ವಿಶ್ವಕೋಶ ಎಂದು ಹೆಸರಾಗಿದ್ದರು. ಅವರ ಪ್ರಬಂಧಗಳಲ್ಲಿ ಬದುಕಿನ ಮೌಲ್ಯಗಳಿವೆ, ಗಾಂಭೀರ್ಯವಿದೆ, ಹಾಸ್ಯವಿದೆ, ನೀತಿ, ಸಿದ್ಧಾಂತ ಲೋಕಾನುಭವ, ವ್ಯಂಗ್ಯ, ವಿಡಂಬನೆ, ಬದುಕಿನ ಮೌಲ್ಯಗಳು ಎಲ್ಲವೂ ಇವೆ. ಅವರ ಪ್ರಬಂಧಗಳಲ್ಲಿ ಏನಿದೆ ಎಂದು ಕೇಳಬೇಡಿ, ಏನಿಲ್ಲವೆಂದು ಹೇಳಿಬಿಡಿ ಎನ್ನುವಂತಿದೆ.

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಎಚ್ಚೆಸ್ಕೆ ಬರೆಯದ ವಿಷಯಗಳೇ ಇಲ್ಲ. ಚುಟುಕು ಸಾಹಿತ್ಯಕ್ಕೂ ಅವರು ಕೊಡುಗೆ ನೀಡಿದ್ದಾರೆ. ಅವರ ನಿರೂಪಣಾ ಶೈಲಿ ಕುಳಿತು ಹೇಳಿದಂತೆ. ಕೆಲವೇ ಪದಗಳಲ್ಲಿ ಹೇಳುವ ಪದ ಗಾರುಡಿಗರು ಅವರು (ಉದಾ: ಹಾರಿದರೆ ಪಾತಾಳ ಯಮನ ಸದನ). ತಂತ್ರಗಾರಿಕೆ, ಪದಗಳನ್ನು ಹಣೆಯುತ್ತ ಹೋಗುವ ರೀತಿ, ವಿಷಯಾಂತರವಾದರೆ ಎಚ್ಚರಿಕೆವಹಿಸಿ ಮೂಲ ವಿಷಯಕ್ಕೆ ಬರುವ ಪರಿ, ವಿಷಯಗಳನ್ನು ಸಮನ್ವಯಗೊಳಿಸುವ ರೀತಿ, ಸ್ವಾರಸ್ಯಕರ ಆರಂಭ, ತಿರುವಿನ ಅಂತ್ಯ ಇವು ಅವರ ಪ್ರಬಂಧಗಳ ವೈಶಿಷ್ಟ್ಯ ಎಂದು ಹೇಳಿದ ಲೋಲಾಕ್ಷಿಯವರು, ತಂಜಾವೂರಿನ ಪೈಲ್ವಾನ ಮತ್ತಿತರ ಕೆಲವು ಪ್ರಬಂಧಗಳ ಸ್ವಾರಸ್ಯಕರ ಅಂಶಗಳನ್ನು ತೆರೆದಿಟ್ಟರು. ಎಚ್ಚೆಸ್ಕೆಯವರು ಬಹಳ ಸರಳವಾಗಿ ಬದುಕಿದವರು, ಅವರು ಹಚ್ಚಿದ ಹಣತೆಗೆ ನೀವು ಬತ್ತಿಯಾಗಿದ್ದೀರಿ, ಎಣ್ಣೆಯಾಗಿದ್ದೀರಿ. ಈ ಬೆಳಕು ನಿರಂತರ ಇರಲಿ ಎಂದು ಹಾರೈಸಿ, ತಮ್ಮ ಮಾತುಗಳನ್ನು ಮುಗಿಸಿದರು.



ಕೊನೆಯಲ್ಲಿ ಶ್ರೀಮತಿ ಮಾಲತಿ ಶ್ರೀನಿವಾಸನ್‌ರವರು ಶ್ರೀಮತಿ ಲೋಲಾಕ್ಷಿಯವರನ್ನು ಸನ್ಮಾನಿಸಿದರು. ಶ್ರೀ ಟಿ.ಎನ್.ನಾಗಾನಂದ ವಂದನಾರ್ಪಣೆ ಮಾಡಿದರು.

ಮೂರನೆಯ ಗೋಷ್ಠಿ – ಬ್ಯಾಂಕಿಂಗ್ ಗೋಷ್ಠಿ

ಶ್ರೀ ಹೆಚ್.ಶ್ರೀಧರ ರಾವ್ ಅವರಿಂದ ಉಪನ್ಯಾಸ – 'ಬ್ಯಾಂಕುಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು':



ಗೋಷ್ಠಿಯ ಆರಂಭದಲ್ಲಿ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರು ಶ್ರೀ ಹೆಚ್. ಶ್ರೀಧರ ರಾವ್ ಅವರನ್ನು ಸ್ವಾಗತಿಸಿ, ಸಭೆಗೆ ಪರಿಚಯಿಸಿದರು.

ಭಾರತದಲ್ಲಿ ಬ್ಯಾಂಕುಗಳ ಆರಂಭ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹಂತಹಂತವಾಗಿ ಆದ ಬದಲಾವಣೆಗಳ ಬಗಗಿನ ಪೀಠಿಕೆ ಯೊಂದಿಗೆ ಶ್ರೀ ಶ್ರೀಧರ ರಾವ್ ಅವರು ತಮ್ಮ ಉಪನ್ಯಾಸ ಆರಂಭಿಸಿದರು. 1786ರಲ್ಲಿ ಲಂಡನ್ನಿನಲ್ಲಿ ಸೆಂಟ್ರಲ್ ಬ್ಯಾಂಕ್ ಸ್ಥಾಪನೆಯ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಸ್ಥಾಪಿತವಾದ ಬ್ಯಾಂಕ್ ಆಫ್ ಕಲ್ಕತ್ತಾ, ಬ್ಯಾಂಕ್ ಆಫ್ ಬಾಂಬೆ, ಬ್ಯಾಂಕ್ ಆಫ್ ಮದ್ರಾಸ್‌ಗಳು ಕ್ರಮೇಣ ಇಂಪೀರಿಯಲ್ ಬ್ಯಾಂಕ್ ಆಗಿ, ತದನಂತರ ಭಾರತೀಯ ಸ್ಟೇಟ್ ಬ್ಯಾಂಕ್ ಆಗಿ ಪರಿವರ್ತನೆ ಗೊಂಡ ಕಾಲಘಟ್ಟದಿಂದ ಆರಂಭಿಸಿ, 1969 ಮತ್ತು 1980ರ ಬ್ಯಾಂಕ್ ರಾಷ್ಟ್ರೀಕರಣದಿಂದಾಗಿ, ಬ್ಯಾಂಕು ಕೇವಲ ಶ್ರೀಮಂತರಿಗೆ ಮಾತ್ರ ಎಂಬ ಪರಿಕಲ್ಪನೆ ಹೋಗಲಾಡಿಸಿ ಜನಸಾಮಾನ್ಯರಿಗೂ ತಲುಪಿದ ಬ್ಯಾಂಕಿಂಗ್ ವ್ಯವಸ್ಥೆ, ದೇಶದ ಅಭಿವೃದ್ಧಿಯ ಕಾರ್ಯದಲ್ಲಿ ಬ್ಯಾಂಕುಗಳ ಕೊಡುಗೆ, ಜಾಗತೀಕರಣದ ಪ್ರಭಾವದಿಂದ ಭಾರತದಲ್ಲಿ ಹೊಸ ಖಾಸಗಿ ಬ್ಯಾಂಕುಗಳ ಸ್ಥಾಪನೆ, ಭಾರತಕ್ಕೆ ವಿದೇಶೀ ಬ್ಯಾಂಕುಗಳ ಆಗಮನ, ಬ್ಯಾಂಕುಗಳ ನಡುವೆ ಅನಿವಾರ್ಯವಾದ ಸ್ಪರ್ಧೆ, ಎಲ್ಲ ಬಗೆಯ ಬ್ಯಾಂಕುಗಳಲ್ಲೂ ತಂತ್ರಜ್ಞಾನದ ಅಳವಡಿಕೆ, ಸಂಪೂರ್ಣ ಗಣಕೀಕರಣ, ಮೊಬೈಲ್ ಬ್ಯಾಂಕಿಂಗ್, ಅಂತರಜಾಲ ಬ್ಯಾಂಕಿಂಗ್, ಡಿಜಿಟಲ್ ಪಾವತಿ ವ್ಯವಸ್ಥೆ – ಹೀಗೆ ಭಾರತೀಯ ಬ್ಯಾಂಕಿಂಗ್ ಕ್ಷೇತ್ರ ಬೆಳೆದು ಬಂದ ವಿವಿಧ ಮಜಲುಗಳನ್ನು ಸವಿಸ್ತಾರವಾಗಿ ವಿವರಿಸಿದರು.

2020ರ ಸುಮಾರಿಗೆ ಕೃತಕ ಬುದ್ಧಿಮತ್ತೆಯ ಪರಿಕಲ್ಪನೆಯು ಭಾರತೀಯ ಬ್ಯಾಂಕಿಂಗ್ ಕ್ಷೇತ್ರವನ್ನು ಪ್ರವೇಶಿಸಿತು. ಕೃತಕ ಬುದ್ಧಿಮತ್ತೆಯಲ್ಲಿ ಮಾನವನಿಗೆ ಸರಿಸಮಾನವಾದ ಬುದ್ಧಿಮತ್ತೆಯನ್ನು ಗಣಕದ ಮುಖಾಂತರ ಚಾಲನೆ ಕೊಡಲಾಗುತ್ತದೆ. ತಂತ್ರಾಂಶಕ್ಕೆ ದತ್ತಾಂಶ ಕೊಡಬೇಕು. ವಿಶ್ಲೇಷಣಾ ಸಾಮರ್ಥ್ಯವನ್ನು ಅಳವಡಿಸಬೇಕು. ಗಣಕವು ಸ್ವಯಂಪ್ರಜ್ಞೆಯಿಂದ ತಿಳಿದು ಕೆಲವು ಸಮಸ್ಯೆಗಳನ್ನು ಪರಿಹರಿಸುವುದಲ್ಲದೆ, ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸುತ್ತದೆ, ವ್ಯವಹಾರ ಜ್ಞಾನ ಕ್ರೋಢಿಕರಿಸಿ ದತ್ತಾಂಶ ನೀಡುವುದರಿಂದ ಖಾತೆ ತೆರೆಯುವ, ಹಣ ಸ್ವೀಕರಿಸುವ ಕೆಲಸ ಮತ್ತು ಸಾಮಾನ್ಯ ಪರಿಶೀಲನೆಯನ್ನೂ ಇದು ಮಾಡುತ್ತದೆ ಎಂದು ಹಲವು ಉದಾಹರಣೆಗಳ ಸಹಿತ ವಿವರಿಸಿದರು.

ಗಣಕಕ್ಕೆ ದತ್ತಾಂಶವನ್ನು ಡಿಜಿಟಲೈಸೇಶನ್ ಫಾರಂನಲ್ಲಿ ಕೊಡಲಾಗಿರುತ್ತದೆ. ಒಂದರ ಮುಂದೆ ಹದಿನೈದು ಸೊನ್ನೆ ಹಾಕಿದರೆ ಒಂದು ಟೆಟಾಬೈಟ್ ಆಗುತ್ತದೆ. ಅಂತಹ ನೂರಾರು ಟೆಟಾಬೈಟ್‌ಗಳಲ್ಲಿ ದತ್ತಾಂಶ ಶೇಖರಿಸಿ ಸುರಕ್ಷಿತವಾಗಿ ಇರಿಸಲಾಗುತ್ತದೆ. ಇದಕ್ಕಾಗಿ ಕೃತಕ ಬುದ್ದಿಮತ್ತೆ ಬಳಸಿ ಮಾಡಬೇಕಾದ ಕೆಲಸ ಬ್ಯಾಂಕುಗಳಲ್ಲಿ ಬಹಳಷ್ಟಿದೆ. ಈ ನಿಟ್ಟಿನಲ್ಲಿ ಹೊಂದಾಣಿಕೆ ಬುದ್ಧಿಮತ್ತೆ (ಅಡಾಪ್ಟಿವ್ ಇಂಟೆಲಿಜೆನ್ಸ್). ವಿಶ್ಲೇಷಣಾ ಬುದ್ಧಿಮತ್ತೆ (ಅನಾಲಿಟಿಕಲ್ ಇಂಟಲಿಜೆನ್ಸ್), ಮುನ್ಸೂಚಕ ವಿಶ್ಲೇಷಣೆ (ಪ್ರಿಡಿಕ್ಟಿವ್ ಅನಾಲಿಸಿಸ್) ಮುಂತಾದುವುಗಳ ಬಳಕೆಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಬ್ಯಾಂಕುಗಳು ಹಣಕಾಸಿನ ವ್ಯವಹಾರ ಮಾಡುವುದರಿಂದ ಕೃತಕ ಬುದ್ಧಿಮತ್ತೆಯ ವ್ಯಾಪಕ ಬಳಕೆಯು ಹಲವು ಅನುಕೂಲಗಳ ಜೊತೆಗೇ ಅನಾನುಕೂಲಗಳಿಗೂ ಕಾರಣೀಭೂತವಾಗಬಹುದು. ಯಾವುದೋ ಮೂಲದಿಂದಾದ ದತ್ತಾಂಶ ಸೋರಿಕೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸೈಬರ್ ಕ್ರೈಂ ಹೆಚ್ಚುತ್ತಿದ್ದು, ಬ್ಯಾಂಕ್ ಗ್ರಾಹಕರನ್ನು ಅವರ ಅರಿವಿಗೆ ಬಾರದಂತೆ ನಾನಾ ರೀತಿಯಲ್ಲಿ ವಂಚಿಸಲಾಗುತ್ತಿದೆ. ಇವೆಲ್ಲ ಕೃತಕ ಬುದ್ಧಿಮತ್ತೆಯ ಮತ್ತೊಂದು ಮುಖ ಎಂದು ಉದಾಹರಣೆಗಳ ಸಹಿತ ವಿವರಿಸಿದ ಅವರು, ವಿವಿಧ ಬಗೆಯ ಬ್ಯಾಂಕ್ ವಂಚನೆಗಳ ಬಗ್ಗೆ ಸಭಿಕರಲ್ಲಿ ಜಾಗೃತಿ ಮೂಡಿಸಿದರು.

ಮುಂಬರುವ ದಿನಗಳಲ್ಲಿ ಬ್ಯಾಂಕುಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಹೆಚ್ಚಿಸಬಹುದಾದರೂ ನಿಖರತೆ ಮತ್ತು ಸುರಕ್ಷತೆಯ ಪರಿಶೀಲನೆ ಅತೀ ಅಗತ್ಯ. ಆದ್ದರಿಂದ ಈ ದಿಸೆಯಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಬಹಳ ಎಚ್ಚರಿಕೆಯಿಂದ ಮುಂದುವರೆಯಬೇಕು ಎಂದ ಅವರು, 2035ರ ವೇಳೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತು ಜನಸಾಮಾನ್ಯರ ಬದುಕಿನಲ್ಲಿ ಕೃತಕ ಬುದ್ಧಿಮತ್ತೆಯು ಬಹಳಷ್ಟು ಪರಿಣಾಮ ಬೀರಲಿದೆ ಎಂದು ಅದರ ಪರಿಣಾಮಗಳು ಹಾಗೂ ದುಷ್ಪರಿಣಾಮಗಳ ಬಗ್ಗೆ ಕೆಲವು ಉದಾಹರಣೆಗಳನ್ನು ನೀಡಿದರು.



ಉಪನ್ಯಾಸದ ನಂತರ ಶ್ರೀ ಜನಾರ್ದನ ತುಂಗ ಅವರು ಶ್ರೀ ಶ್ರೀಧರ ರಾವ್ ಅವರನ್ನು ಸನ್ಮಾನಿಸಿದರು. ಶ್ರೀ ಎಸ್.ಧೀರೇಂದ್ರ ಅವರ ವಂದನಾರ್ಪಣೆಯೊಂದಿಗೆ ಮೂರನೇ ಗೋಷ್ಠಿ ಮುಕ್ತಾಯವಾಯಿತು.

ಎಲ್ಲರಿಗೂ ಉತ್ತಮ ಭೋಜನ ವ್ಯವಸ್ಥೆ ಏರ್ಪಡಿಸಲಾಗಿತ್ತು.

(ಶ್ರೀ ಶ್ರೀಧರ ರಾವ್ ಅವರ ಪೂರ್ಣ ಉಪನ್ಯಾಸವನ್ನು ಲೇಖನ ರೂಪದಲ್ಲಿ ಈ ಸಂಚಿಕೆಯಲ್ಲಿ ನೀಡಲಾಗಿದೆ)

ನಾಲ್ಕನೆಯ ಗೋಷ್ಠಿ – ಪ್ರಾ.ಎಚ್ಚೆಸ್ಕೆಯವರ ಪ್ರಬಂಧ ಆಧಾರಿತ ನಾಟಕಗಳ ಪ್ರದರ್ಶನ

'ಮಾವಿನ ಹಣ್ಣೋ, ಮಾವನ ಹೆಣ್ಣೋ' ಮತ್ತು 'ಋಕ್ಕಮ್ಮನ ಸಂಸಾರ' – ಎರಡು ಪ್ರಹಸನಗಳು



ಊಟದ ವಿರಾಮದ ನಂತರ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾದ ಪ್ರಾಚಾರ್ಯ ಎಚ್ಚೆಸ್ಕೆಯವರ ಪ್ರಬಂಧಗಳನ್ನು ಆಧರಿಸಿದ 'ಮಾವಿನಹಣ್ಣೋ ಮಾವನ ಹೆಣ್ಣೋ' ಮತ್ತು 'ಋಕ್ಕಮ್ಮನ ಸಂಸಾರ/ರುಕ್ಕಮ್ಮನ Someಸಾರ' ಎಂಬ ಎರಡು ನಾಟಕಗಳು ಪ್ರದರ್ಶಿತವಾದವು. ಶ್ರೀ ಧೀರೇಂದ್ರರವರು ಪ್ರಬಂಧಗಳನ್ನು ರೂಪಾಂತರಿಸಿ ನಿರ್ದೇಶಿಸಿದ ಈ ನಾಟಕಗಳಲ್ಲಿ ವೇದಿಕೆಯ ಸದಸ್ಯರಾದ ಶಾಂತಾ ನಾಗಮಂಗಲ, ಧೀರೇಂದ್ರ, ಶ್ರೀಪ್ರಕಾಶ್, ಶ್ರೀರಂಗರಾಜನ್, ಪದ್ಮಾ ಧೀರೇಂದ್ರ, ಸತೀಶ್ ತುಂಗ, ಗುರುರಾಜ ಶಾಸ್ತ್ರಿ, ರೇಣುಕಾ ದೇಸಾಯಿ, ವಿಠಲ್ ಇಜೇರಿ ಹಾಗೂ ರಾಧಿಕಾ ಗುಜ್ಜರ್‌ರವರು ಪಾತ್ರವಹಿಸಿ ಮನೋಜ್ಞ ಅಭಿನಯ ನೀಡಿದರು. ಎಲ್ಲ ಹಿರಿಯ ನಾಗರಿಕರೇ ಪಾತ್ರವಹಿಸಿದ ಎರಡೂ ನಾಟಕಗಳಿಗೆ ವೀಕ್ಷಕರಿಂದ ಅಪಾರ ಮೆಚ್ಚುಗೆ ದೊರೆಯಿತು.

ಐದನೆಯ ಗೋಷ್ಠಿ – ಚುಟುಕು ಕವಿಗೋಷ್ಠಿ – ಅಧ್ಯಕ್ಷತೆ: ಶ್ರೀ ಪತ್ತಂಗಿ ಮುರಳಿ



ಚುಟುಕು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಪತ್ತಂಗಿ ಮುರಳಿಯವರನ್ನು ಶ್ರೀ ಶ್ರೀರಂಗರಾಜನ್‌ರವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಸುಮಾರು 20ಕ್ಕೂ ಹೆಚ್ಚು ಕವಿಗಳು ತಮ್ಮ ಎರಡೆರಡು ಹನಿಗವನಗಳನ್ನು

ಓದಿದರು. ನಂತರ ಶ್ರೀ ಪತ್ತಂಗಿ ಮುರಳಿಯವರು ಹಲವು ಖ್ಯಾತ ಕವಿಗಳ ಚುಟುಕುಗಳನ್ನು ಉದಾಹರಿಸಿ, ಕಾರ್ಯಕ್ರಮದಲ್ಲಿ ಪ್ರಸ್ತುತವಾದ ಚುಟುಕುಗಳನ್ನು ವಿಶ್ಲೇಷಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಶ್ರೀನಿವಾಸನ್‌ರವರು ಪತ್ತಂಗಿ ಮುರಳಿಯವರನ್ನು ಸನ್ಮಾನಿಸಿದರು. ಶ್ರೀ ಗುರುರಾಜ ಶಾಸ್ತ್ರಿಯವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು



ಸಮಾರೋಪ ಸಮಾರಂಭ

ದಿನವಿಡೀ ನಡೆದ ವಿವಿಧ ಗೋಷ್ಠಿಗಳ ನಂತರ ಜರುಗಿದ ಸಮಾರೋಪ ಸಮಾರಂಭದಲ್ಲಿ ಸಭಿಕರ ಪರವಾಗಿ ಶ್ರೀ ಜಿ.ವಿ.ಅರುಣ, ಶ್ರೀ ಸಂಮೋದ ವಾಡಪ್ಪಿ, ಶ್ರೀ ಪೋಲೇನಹಳ್ಳಿ ರಮೇಶ್, ಡಾ.ಸತ್ಯವತಿ ಮೂರ್ತಿ, ಶ್ರೀಮತಿ ಮಾಲತಿ ಶ್ರೀನಿವಾಸನ್, ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ಮಾತನಾಡಿ ಎಚ್ಚೆಸ್ಕೆ ಬೆಳಕು-9 ಕಾರ್ಯಕ್ರಮ ಹಾಗೂ ವೇದಿಕೆಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಶ್ರೀ ಜಿ.ವಿ. ಅರುಣ



ಡಾ. ಸತ್ಯವತಿ ಮೂರ್ತಿ



ಶ್ರೀ ಎಂ.ಎಸ್. ನರಸಿಂಹ ಮೂರ್ತಿ



ಶ್ರೀ ಸಮ್ಮೋದ ವಾಡಪ್ಪಿ



ಶ್ರೀಮತಿ ಮಾಲತಿ ಶ್ರೀನಿವಾಸನ್




ಶ್ರೀ ಪೋಲೇನಹಳ್ಳಿ ರಮೇಶ್

ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಬೆಂ.ಶ್ರೀ. ರವೀಂದ್ರರವರು ಮಾತನಾಡಿ, ಇಂದು ಪ್ರದರ್ಶಿತವಾದ ನಾಟಕಗಳ ಹಿಂದೆ ಅಪಾರ ಶ್ರಮವಿದೆ. ಸುಮಾರು 20 ದಿನಗಳ ಕಾಲ ಕಲಾವಿದರೆಲ್ಲ ಧೀರೇಂದ್ರರವರ ಮನೆಯಲ್ಲಿ ಸೇರಿ ಅಭ್ಯಾಸ ಮಾಡಿದ್ದಾರೆ. ಈಗ ನಮ್ಮ ಸಸಕಸ ವೇದಿಕೆಯಲ್ಲಿ ಎಲ್ಲ ಚಟುವಟಿಕೆಗಳೂ ತಂತಾನೇ ನಡೆಯುತ್ತಿದ್ದು,

ಇದರ ಹಿಂದೆ ಹಲವರ ಪರಿಶ್ರಮ ಇದೆ. ವೇದಿಕೆಯ ಪ್ರತ್ಯೇಕ ಜಾಲತಾಣ / ವೆಬ್ ಸೈಟ್ ನಿರ್ಮಾಣ ಮಾಡಿ, ಎಲ್ಲ ಬಗೆಯ ತಾಂತ್ರಿಕ ಸಹಾಯ ನೀಡುವಲ್ಲಿ ನೆರವಾಗುತ್ತಿರುವ ಗುರುರಾಜ ಶಾಸ್ತ್ರಿ, ಪ್ರತಿ ತಿಂಗಳು ತಿಂಗಳ ಬೆಳಕು ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವ ರವಿ ಕುಸುಬಿ, ದಾಸೋಹ ನಡೆಸುತ್ತಿರುವ ಕೆ.ಎನ್.ಮಹಾಬಲ, ವೇದಿಕೆಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಶ್ರೀರಂಗರಾಜನ್, ರಾಧಿಕಾ ಗುಜ್ಜರ್, ರೇಣುಕಾ ದೇಸಾಯಿ ಮುಂತಾದವರ ಸಹಕಾರವನ್ನು ಮೆಚ್ಚಿ ನುಡಿದರು. ಕಾರ್ಯಕ್ರಮ ನಡೆಸಲು ಧನಸಹಾಯ ಕೋರಿ ಮನವಿ ಸಲ್ಲಿಸಿದಾಗ ಸದಸ್ಯರು ತುಂಬಿದ ಮನದಿಂದ ಸಹಕರಿಸಿದ್ದಾರೆ. ಎಲ್ಲರ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯಿಂದ ಇಡೀ ಕಾರ್ಯಕ್ರಮ ಯಶಸ್ವಿಯಾಗಿದೆ. ಹೆಚ್ಚಿನ ಜನ ಬಹಳ ದೂರದಿಂದ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸದ ಸಂಗತಿ ಎಂದರು.



ಶ್ರೀಮತಿ ಪೂರ್ಣಿಮಾ ಭಗವಾನ್ (ಚುಟುಕು ಕವನ ವಾಚನ)



ಮನೋಹರ ಗೋಖಲೆ (ಚುಟುಕು ಕವನ ವಾಚನ)



ಶ್ರೀಮತಿ ಶೀಲಾ ಅರಕಲಗೂಡು (ವಂದನಾರ್ಪಣೆ)

ಶ್ರೀಮತಿ ಶೀಲಾ ಅರಕಲಗೂಡುರವರು ಕೊನೆಯಲ್ಲಿ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. ಶ್ರೀ ಶ್ರೀರಂಗರಾಜನ್ ರವರು ಇಡೀ ದಿನದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.


ಸುಮಾರು 120ಕ್ಕೂ ಹೆಚ್ಚು ಜನ ಇಡೀ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಜಾಯ್ಸ್ ಪ್ರಕಾಶ್ ಅವರು 'ಎಚ್ಚೆಸ್ಕೆ ಬೆಳಕು-9' ಕಾರ್ಯಕ್ರಮಕ್ಕೆಂದೇ ತಯಾರಿಸಿದ ಸುಂದರವಾದ ಕೈಚೀಲಗಳನ್ನು ಎಲ್ಲ ಸಭಿಕರಿಗೂ ಹಂಚಲಾಯಿತು.

(ಎಚ್ಚೆಸ್ಕೆ ಬೆಳಕು-9ರ ಪೂರ್ತಿ ಕಾರ್ಯಕ್ರಮ ಸಾಹಿತ್ಯ ದಾಸೋಹ ಯುಟ್ಯೂಬ್‌ನಲ್ಲಿ ಲಭ್ಯವಿದೆ)

***




ಉದ್ಘಾಟನಾ ಭಾಷಣ : ಶ್ರೀ ಕಿಶನ್ ಶರ್ಮ


ಶ್ರೀ ಕಿಶನ್ ಶರ್ಮ ಅವರಿಗೆ ಗೌರವಾರ್ಪಣೆ


ಶ್ರೀ ಶಾಂತಾರಾಂ ಪೈ ಅವರಿಗೆ ಗೌರವಾರ್ಪಣೆ


ಶ್ರೀ ಗಿರಿರಾಜ್ ಅವರಿಗೆ ಗೌರವಾರ್ಪಣೆ


ಶ್ರೀ ಬೆಂ.ಶ್ರೀ.ರವೀಂದ್ರ ಅವರಿಗೆ ಗೌರವಾರ್ಪಣೆ



ಶ್ರೀ ಕೆ.ಎನ್. ಮಹಾಬಲ ಅವರಿಗೆ ಗೌರವಾರ್ಪಣೆ



ಶ್ರೀಮತಿ ಸುಮಾ ಪ್ರಸಾದ್ – ಪ್ರಾರ್ಥನೆ



ಶ್ರೀ ಶ್ರೀರಂಗರಾಜನ್ – ನಿರೂಪಣೆ



ಶ್ರೀ ರವಿ ಕುಸಬಿ – ಸ್ವಾಗತ – ಗೋಷ್ಠಿ ೧



ಶ್ರೀ ಹು.ವಾ. ಶ್ರೀಪ್ರಕಾಶ್ – ವಂದನಾರ್ಪಣೆ ಗೋಷ್ಠಿ ೧



ಶ್ರೀ ಕೆ.ಎನ್. ಮಹಾಬಲ – ಸ್ವಾಗತ – ಗೋಷ್ಠಿ ೨



ಶ್ರೀಮತಿ ರೇಣುಕಾ ದೇಸಾಯಿ – ಪರಿಚಯ ಭಾಷಣ



ಶ್ರೀ ಎಸ್. ಶೃಂಗೇಶ್ವರ ಶರ್ಮ – ಸ್ವಾಗತ – ಗೋಷ್ಠಿ ೩



ಶ್ರೀ ಎಸ್. ಧೀರೇಂದ್ರ – ವಂದನಾರ್ಪಣೆ ಗೋಷ್ಠಿ ೩

ಎರಡು ನಾಟಕಗಳು : 'ಮಾವಿನ ಹಣ್ಣೇ ಮಾವನ ಹೆಣ್ಣೇ' ಮತ್ತು ಖುಕ್ಕಮ್ಮನ ಸಂಸಾರ

















ಎಚ್‌ಎಸ್‌ಕೆ ನೆನಪಿನೋತ್ಸವ ಕಾರ್ಯಕ್ರಮ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಭಾರತೀಯ ಸ್ಟೇಟ್ ಬ್ಯಾಂಕ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕಿಶನ್ ಶರ್ಮಾ, ಪ್ರಧಾನ ವ್ಯವಸ್ಥಾಪಕ ಕೆ.ಶಾಂತಾರಾಮ ಪೈ, ಬ್ಯಾಂಕ್‌ನ ನಿವೃತ್ತ ಉಪ ಪ್ರಧಾನವ್ಯವಸ್ಥಾಪಕ ಎಚ್. ಶ್ರೀಧರ ರಾವ್ ಇದ್ದರು.

ಬೆಂಗಳೂರು: ಕನ್ನಡದಲ್ಲಿ ಬ್ಯಾಂಕಿಂಗ್ ಮತ್ತು ಬ್ಯಾಂಕಿಂಗ್‌ನಲ್ಲಿ ಕನ್ನಡ ತರಲು ಹಲವು ದಶಕಗಳು, ಸಮನ್ವಯ ಸಮಿತಿ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಗೆ ಮಾರ್ಗದರ್ಶನ ನೀಡಿದ ಎಚ್‌ಎಸ್‌ಕೆ ಅವರ ನೆನಪಿನ ಉತ್ಸವವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಭಾರತೀಯ ಸ್ಟೇಟ್ ಬ್ಯಾಂಕ್‌ನ ಸ್ಥಳೀಯ ಪ್ರಧಾನ ಕಚೇರಿಯ ಸಭಾಂಗಣದಲ್ಲಿ ಆಚರಿಸಿತು.

ಉದ್ಘಾಟನಾ ಸಮಾರಂಭದಲ್ಲಿ ಭಾರತೀಯ ಸ್ಟೇಟ್‌ಬ್ಯಾಂಕ್ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕಿಶನ್ ಶರ್ಮಾ, ಪ್ರಧಾನ ವ್ಯವಸ್ಥಾಪಕ ಕೆ.ಶಾಂತಾರಾಮ ಪೈ ಅವರು ಭಾಗವಹಿಸಿ ಪ್ರತಿಷ್ಠಾನದ ಜಾಲತಾಣ https//:sahityadasoha.comಗೆ ಚಾಲನೆ ನೀಡಿದರು.

ಎಚ್‌ಸ್‌ಕೆ ಅವರ ಸಮಗ್ರ ಪ್ರಬಂಧಗಳು, ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳು ಕೃತಿಗಳ ಕೇಳು ಪುಸ್ತಕ ಆವೃತ್ತಿಯನ್ನು ರೂಪಿಸಿ ಯು-ಟ್ಯೂಬ್ ನಲ್ಲಿ ಪ್ರಚುರಪಡಿಸಿದ ಎಚ್. ಎಲ್.ಗುರುಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ರವೀಂದ್ರ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬ್ಯಾಂಕಿಂಗ್ ಕನ್ನಡಕ್ಕೆ ಎಚ್‌ಎಸ್‌ಕೆ ಅವರ ಕೊಡುಗೆಯನ್ನು ಪರಿಚಯಿಸಿ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರ ವರ್ಗಕ್ಕೆ ಅವರ ಸಹಾಯ ಹಾಗೂ ಪ್ರೋತ್ಸಾಹಕ್ಕೆ ವಂದನೆಗಳನ್ನು ಸಲ್ಲಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್‌ನ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಎಚ್. ಶ್ರೀಧರ ರಾವ್ ಅವರು ಭಾರತೀಯ ಬ್ಯಾಂಕಿಂಗ್: ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿ ಸಭಿಕರ ಜ್ಞಾನ ಭಂಡಾರವನ್ನು ವಿಸ್ತರಿಸುವುದರ ಜತೆಗೆ, ಸಾಮಾನ್ಯ ಜನರಿಗೆ ಅದರ ಬಗ್ಗೆ ಇರುವ ಆತಂಕವನ್ನು ಕಡಿಮೆ ಮಾಡಿದರು. ಎಚ್‌ಎಸ್‌ಕೆ ಅವರ 'ಮಾವಿನ ಹಣ್ಣೋ ಮಾವನ ಹೆಣ್ಣೋ ಹಾಗೂ ಋಕ್ಕಮ್ಮನ ಸಂಸಾರ-ರುಕ್ಕಮ್ಮನ ಸೋಮೆಸಾರ ಪ್ರಬಂಧಗಳ ನಾಟಕ ರೂಪವನ್ನು ಪ್ರದರ್ಶಿಸಿದರು.



ಕಾರ್ಯಕ್ರಮದಲ್ಲಿ ಶಾಂತಾರಾಮ್ ಪೈ, ಕಿಶನ್ ಶರ್ಮಾ ಹಾಗೂ ಬಿ.ಎಸ್. ರವೀಂದ್ರ ಉಪಸ್ಥಿತರಿದ್ದರು

ನಿಘಂಟು ತಜ್ಞ ಎಚ್ಚೆಸ್ಕೆ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಎಚ್ಚೆಸ್ಕೆ ಬೆಳಕು ಒಂಬತ್ತನೆ ಆವೃತ್ತಿ' ಕಾರ್ಯ-ಕ್ರಮದಲ್ಲಿ 'ಕನ್ನಡದಲ್ಲಿ ಬ್ಯಾಂಕಿಂಗ್' ಮತ್ತು 'ಬ್ಯಾಂಕಿಂಗ್‌ನಲ್ಲಿ ಕನ್ನಡ'ವನ್ನು ತರಲು ಶ್ರಮಿಸಿದ್ದ ಅಂಕಣಕಾರ ಹಾಗೂ ನಿಘಂಟು ತಜ್ಞ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರನ್ನು ಸ್ಮರಿಸಲಾಯಿತು.

ಕಾರ್ಯಕ್ರಮಕ್ಕೆ ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕಿಶನ್ ಶರ್ಮಾ ಚಾಲನೆ ನೀಡಿ, ಕನ್ನಡದಲ್ಲಿ ಶುಭ ಹಾರೈಸಿದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಕೆ. ಶಾಂತಾರಾಮ ಪೈ ಪ್ರತಿಷ್ಠಾನದ ಜಾಲತಾಣಕ್ಕೆ ಚಾಲನೆಗೆ ನೀಡಿದರು.

ಎಚ್ಚೆಸ್ಕೆ ಅವರ 'ಸಮಗ್ರ ಪ್ರಬಂಧಗಳು', 'ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳು' ಕೃತಿಯ 'ಕೇಳು ಪುಸ್ತಕ' ಆವೃತ್ತಿಯನ್ನು ರೂಪಿಸಿ, ಯೂಟ್ಯೂಬ್‌ನಲ್ಲಿ ಪ್ರಚುರಪಡಿಸಿದ ಎಚ್.ಎಲ್. ಗುರುಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಸ್. ರವೀಂದ್ರ ಅವರು ಬ್ಯಾಂಕಿಂಗ್ ಕನ್ನಡಕ್ಕೆ ಎಚ್ಚೆಸ್ಕೆ ಅವರ ಕೊಡುಗೆಯ ಬಗ್ಗೆ ವಿವರಿಸಿದರು.

'ಎಚ್ಚೆಸ್ಕೆ ಅವರ ಸಮಗ್ರ ಲಲಿತ ಪ್ರಬಂಧಗಳ ವೈಶಿಷ್ಟ್ಯ'ದ ಬಗ್ಗೆ ಲೋಲಾಕ್ಷಿ ಕೆರೊಡಿ, 'ಭಾರತೀಯ ಬ್ಯಾಂಕಿಂಗ್: ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು' ವಿಷಯದ ಬಗ್ಗೆ ಎಚ್. ಶ್ರೀಧರ ರಾವ್ ಮಾತನಾಡಿದರು.

ಎಚ್ಚೆಸ್ಕೆ ಬೆಳಕು-9 ಕಾರ್ಯಕ್ರಮದಲ್ಲಿ ಕಿಶೋರ್ ಶರ್ಮ ಬಣ್ಣನೆ

ಪ್ರೊ. ಎಚ್ಚೆಸ್ಕೆ ಮಹಾನ್ ವಾಗ್ಮಿ, ಅರ್ಥಶಾಸ್ತ್ರಜ್ಞ



ಬೆಂಗಳೂರು: ಕನ್ನಡ ಸಾರಸ್ವತ ಲೋಕದ ದಿಗ್ಗಜರಲ್ಲಿ ಒಬ್ಬರಾದ ಪ್ರೊ. ಎಚ್ಚೆಸ್ಕೆ ಮಹಾನ್ ವಾಗ್ಮಿ, ಬರಹಗಾರ ಹಾಗೂ ಆರ್ಥಿಕ ತಜ್ಞ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಪ್ರಧಾನವ್ಯವಸ್ಥಾಪಕ ಕಿಶೋರ್ ಶರ್ಮ ನುಡಿದರು.

ಬೆಂಗಳೂರಿನ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪ್ರಧಾನ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರೊ. ಎಚ್ಚೆಸ್ಕೆ ಬೆಳಕು-9 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಲೇಖಕರಾಗಿ, ಅಂಕಣಕಾರರಾಗಿ, ಅರ್ಥಿಟಕ್ಷಿ ತಜ್ಞರಾಗಿ ಕನ್ನಡ ಭಾಷೆಗೆ ಅವರ ಕೊಡುಗೆ ಅಪಾರ ಎಂದು ತಿಳಿಸಿದರು.

ಕನ್ನಡ ಭಾಷೆಯಲ್ಲಿ ಪರಿಣತಿ ಇರದಿದ್ದರೂ ಕನ್ನಡದಲ್ಲಿಯೇ ಮಾತನಾಡುವ ಮೂಲಕ ಕನ್ನಡ ಪ್ರೀತಿ ಮೆರೆದು ನೆರೆದ ಶ್ರೋತೃಗಳ ಮನಗೆದ್ದರು.

ಸಮನ್ವಯ ಸಮಿತಿ ವೆಬ್‌ಸೈಟ್ ಉದ್ಘಾಟಿಸಿ ಮಾತನಾಡಿದ ಎಸ್‌ಬಿಐ ಪ್ರಧಾನ ವ್ಯವಸ್ಥಾಪಕ ಶಾಂತಾರಾಂ ಪೈ ಮಾತನಾಡಿ ಎಸ್‌ಬಿಐಗೂ, ಕನ್ನಡಕ್ಕೂ ಹಾಗೂ ಪ್ರೊ. ಎಚ್ಚೆಸ್ಕೆ ಅವರಿಗೂ ಅವಿನಾಭಾವ ಸಂಬಂಧ. ಹಾಗಾಗಿಯೇ ಪ್ರೊ. ಎಚ್ಚೆಸ್ಕೆ ಅವರನ್ನು ಕುರಿತಂತೆ 9 ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಬಳಸುವ ರೀತಿಯನ್ನು ತಿಳಿಸಿಕೊಟ್ಟವರು ಪ್ರೊ. ಎಚ್ಚೆಸ್ಕೆ ಎಂದರಲ್ಲದೆ ಇಂತಹ ಕಾರ್ಯಕ್ರಮಗಳಲ್ಲಿ ಮುಂದಿನ ದಿನಗಳಲ್ಲಿ ಯುವ ಪೀಳಿಗೆಯೂ ಪಾಲ್ಗೊಳ್ಳುವಂತಾಗಬೇಕು ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಮನ್ವಯ ಸಮಿತಿ ಅಧ್ಯಕ್ಷ ಬೆಂ.ಶ್ರೀ. ರವೀಂದ್ರ ಮಾತನಾಡಿ, 50 ವರ್ಷಗಳಿಂದಲೂ ಕನ್ನಡ ಭಾಷೆ, ಸಂಸ್ಕೃತಿ ಬೆಳೆಸಲು ಎಸ್‌ಬಿಐ ನೀಡಿರುವ ಕೊಡುಗೆ ಗಮನಾರ್ಹ. 1972ರಲ್ಲಿ ಸ್ಥಾಪನೆಗೊಂಡ ಕನ್ನಡ ಸಂಘ ನಿರಂತರವಾಗಿ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ಲೇಖಕಿ ಕೆರೋಡಿ ಲೋಲಾಕ್ಷಿ ಅವರು ಪ್ರೊ. ಎಚ್ಚೆಸ್ಕೆ ಸಮಗ್ರ ಪ್ರಬಂಧಗಳು ಕುರಿತಂತೆ ವಿಶೇಷ ಉಪನ್ಯಾಸ ನೀಡಿದರು. ಭಾರತೀಯ ಬ್ಯಾಂಕಿಂಗ್ ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು ಕುರಿತಂತೆ ಮತ್ತೊಂದು ಉಪನ್ಯಾಸವನ್ನು ಎಚ್. ಶ್ರೀಧರ್‌ರಾವ್ ನೀಡಿದರು.

ಇದೇ ಸಂದರ್ಭದಲ್ಲಿ ಸಮನ್ವಯ ಸಮಿತಿಗೆ ವೆಬ್‌ಸೈಟ್ ರೂಪಿಸಿಕೊಟ್ಟ ಎಚ್.ಎಲ್. ಗುರುಪ್ರಸಾದ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಗಿರಿರಾಜ್, ಹಾಸ್ಯ ಲೇಖಕ ಎಂ.ಎಸ್. ನರಸಿಂಹಮೂರ್ತಿ, ಕಲಾವಿದ ವೆಂಕಟರಾವ್, ಧೀರೇಂದ್ರ, ಕೆ.ಎನ್. ಮಹಾಬಲ, ಮೈಸೂರು ಸಾಹಿತ್ಯ ದಾಸೋಹದ ಪದ್ಮಾ ಆನಂದ್ ದಂಪತಿ , ಪತ್ರಕರ್ತ ರಂಗನಾಥ್ ಮೈಸೂರು ಸೇರಿದಂತೆ ಎಸ್‌ಬಿಐ ಸಿಬ್ಬಂದಿ, ಸಾಹಿತಿಗಳು, ಕಲಾವಿದರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ನಂತರ ಪ್ರೊ. ಎಚ್ಚೆಸ್ಕೆ ಅವರ ಪ್ರಬಂಧಗಳ ಆಧಾರಿತ ಎರಡು ಕಿರು ಪ್ರಹಸನಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದವು. ಪತ್ತಂಗಿ ಮುರಳಿ ಅಧ್ಯಕ್ಷತೆಯಲ್ಲಿ ಚುಟುಕು ಕವಿಗೋಷ್ಠಿ ನಡೆಯಿತು.

ಸುಮಾ ಪ್ರಸಾದ್ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ರವಿ ಕುಸುಬಿ ಸ್ವಾಗತಿಸಿದರು. ಶಿವಪ್ರಕಾಶ್ ವಂದಿಸಿದರು.

ಎಚ್ಚೆಸ್ಕೆ ಬೆಳಕು–9 : ಬ್ಯಾಂಕಿಂಗ್ ಗೋಷ್ಠಿ – ಉಪನ್ಯಾಸ

ಭಾರತೀಯ ಬ್ಯಾಂಕಿಂಗ್: ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು

– ಹೆಚ್ ಶ್ರೀಧರರಾವ್

2035 –ಸುಸ್ವಾಗತ

2035ರ ಮೇ ತಿಂಗಳ ಒಂದು ದಿನ. ಸ್ವಸ್ತಿ ಎಂಬ ಯುವತಿಯು ಬ್ಯಾಂಕಿನ ಶಾಖೆಯೊಂದಕ್ಕೆ ಭೇಟಿ ನೀಡುತ್ತಾಳೆ. ಬ್ಯಾಂಕಿನಲ್ಲಿ ಮೂರು ಟೇಬಲ್ಲುಗಳು. ಹಿಂಭಾಗದಲ್ಲಿ ಒಂದೇ ರೂಪದಲ್ಲಿ ಕಾಣುತ್ತಿರುವ, ತ್ರಿವಳಿಯಂತಿರುವ ಮೂರು ಮುದ್ದು ಮುಖಗಳು. ಅವುಗಳಿಗೆ ಸ್ವಸ್ತಿಯ ಬ್ಯಾಂಕು ಗಣಕ ಭಾಷೆಯನ್ನೇ ಸಂಕ್ಷೇಪಿಸಿ ಇಟ್ಟ ಹೆಸರು 'ಸ್ರೋಬಿ' ಎಂದು. ಬೇರೆ ಬ್ಯಾಂಕುಗಳಲ್ಲಿ ಬೇರೆ ಹೆಸರಿನಿಂದ ಕರೆಯಬಹುದು. ಇತ್ತೀಚಿನ ದಿನಗಳಲ್ಲಿ ಗ್ರಾಹಕರನ್ನು ಎದುರುಗೊಳ್ಳಲು, ಅವರ ಪ್ರಶ್ನೆಗಳಿಗೆ ಉತ್ತರಿಸಲು, ಸಾಮಾನ್ಯ ಬ್ಯಾಂಕಿಂಗ್‌ನ ಎಲ್ಲ ಆಗುಹೋಗುಗಳನ್ನು ನಿಯಂತ್ರಿಸಲು ಮುದ್ದು ಮುಖದ ಸ್ರೋಬಿಗಳನ್ನೇ ಸ್ವಸ್ತಿಯ ಬ್ಯಾಂಕು ಬಳಸಿಕೊಳ್ಳುತ್ತಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 10000ಕ್ಕೂ ಹೆಚ್ಚಿನ ಈ ಸುಂದರಿಯರನ್ನು ಬ್ಯಾಂಕು ತನ್ನ ಹಲವಾರು ಶಾಖೆಗಳಲ್ಲಿ ನೇಮಿಸಿದೆ.

ಹಾಗಾದರೆ ಯಾರು ಈ ಸುಂದರಿಯರು?

ಇವರೆಲ್ಲ ಮಾನವರನ್ನು ಹೋಲುವ ರೊಬೊಟ್‌ಗಳು. ನೂತನ ಆವಿಷ್ಕಾರದಿಂದ ವಿವಿಧ ಭಾವನೆಗಳಿಗೆ ಸ್ಪಂದಿಸುವ, ಮುಖಭಾವವನ್ನು ವ್ಯಕ್ತಪಡಿಸುವ. ಕೃತಕ ದೇಹದ ಭಾಗಗಳನ್ನು ಹೊಂದಿರುವ, ಈ ಸುಂದರಿಯರನ್ನು ಕೃತಕ ಬುದ್ಧಿಮತ್ತೆಯನ್ನು (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ಅಳವಡಿಸಿಕೊಂಡು ರಚಿಸಲಾಗಿದೆ.

ಈ ಸುಂದರಿಯರಲ್ಲಿ ಒಬ್ಬಳು ಅಂದರೆ 'ಸ್ರೋಬಿ' ಸ್ವಸ್ತಿಯನ್ನು ಉದ್ದೇಶಿಸಿ ಆಕೆಗೆ ಶುಭದಿನವನ್ನು ಕೋರಿದಳು ಮತ್ತು ಕುರ್ಚಿಯಲ್ಲಿ ಕುಳಿತುಕೊಂಡು ಅವಳ ಕಣ್ಣನ್ನೇ ದಿಟ್ಟಿಸುವಂತೆ ಆಜ್ಞಾಪಿಸಿದಳು. ಸ್ವಸ್ತಿಯ ಕಣ್ಣು ಅವಳ ಕಣ್ಣಿನೊಂದಿಗೆ ಮಿಳಿತವಾದಾಗ ಸ್ವಸ್ತಿಯ ಖಾತೆಯ ವಿವರಗಳು ಈ ಕೃತಕ ಸುಂದರಿಗೆ ಲಭ್ಯವಾಯಿತು. ಮತ್ತೊಮ್ಮೆ ಸ್ವಸ್ತಿಯನ್ನು ಸ್ವಾಗತಿಸಿ, ನಾನು ಸೇವೆಗೆ ಸಿದ್ದ ಎಂದಳು ಸ್ರೋಬಿ. ತನಗೆ ಬೇಕಾದ ಖಾತೆಯ ವಿವರಗಳನ್ನು ಸ್ರೋಬಿಯಿಂದ ಸ್ವಸ್ತಿ ಪಡೆದುಕೊಂಡಳು.

ಇದು ಶಾಖೆಯೊಳಗಿನ ವಿಚಾರವಾದರೆ, ಕೃತಕ ಬುದ್ಧಿಮತ್ತೆ ಸಹಾಯಕನು (ಎಐ ಅಸಿಸ್ಟೆಂಟ್) ಸ್ವಸ್ತಿಗೆ ಆಕೆಯ ಸ್ಮಾರ್ಟ್ ಡಿವೈಸ್ ಮುಖಾಂತರ ಶುಭದಿನವನ್ನು ಕೋರಿ, ಆಕೆಯ ಹಣಕಾಸಿನ ಲೆಕ್ಕಾಚಾರವನ್ನು, ಆಕೆಯ ಖರ್ಚು ವೆಚ್ಚಗಳನ್ನು ಅಂದಾಜಿಸಿ ನೀಡುತ್ತಾನೆ.

ಶ್ರೀ ಹೆಚ್. ಶ್ರೀಧರ ರಾವ್

ಶ್ರೀ ಹೆಚ್. ಶ್ರೀಧರ ರಾವ್ ಅವರು ಮೂಲತಃ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನವರು. ಶಿವಮೊಗ್ಗದಲ್ಲಿ ಕಾಲೇಜು ವಿದ್ಯಾಭ್ಯಾಸ ಮುಗಿಸಿದ ನಂತರ 1972ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ನೌಕರರಾಗಿ ಸೇರಿದರು. 80ರ ದಶಕದ ಆರಂಭದಲ್ಲಿ ಮೈಸೂರು ಬ್ಯಾಂಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಗಣಕ ವಿಭಾಗವನ್ನು ಆರಂಭಿಸಿದಾಗ ಅದಕ್ಕೆ ವಿಶೇಷವಾಗಿ ಆಯ್ಕೆಯಾದ ಇವರು, ಬ್ಯಾಂಕುಗಳಲ್ಲಿ ತಂತ್ರಜ್ಞಾನದ ಅಳವಡಿಕೆಯ ಬಗ್ಗೆ ಆರಂಭದಿಂದಲೂ ವಿಶೇಷ ಪರಿಣಿತಿ ಪಡೆದಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎರಡು ದಶಕಗಳ ಹಿಂದೆ ಬ್ಯಾಂಕಿಂಗ್ ವ್ಯವಹಾರ ಪ್ರಕ್ರಿಯೆಗಳ ಮರುವಿನ್ಯಾಸ (ಬಿಸಿನೆಸ್ ಪ್ರೊಸೆಸ್ ರಿ-ಇಂಜಿನಿಯರಿಂಗ್) ಪ್ರಕ್ರಿಯೆ ಆರಂಭವಾದಾಗ ಸ್ಟೇಟ್ ಬ್ಯಾಂಕ್ ಇಂದೂರಿನಲ್ಲಿ ಆ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ ಅನುಭವ ಇವರದು.

ಶ್ರೀಧರ ರಾವ್ ಅವರಿಗೆ ಕನ್ನಡ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮತ್ತು ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತಂತೆ ಮೊದಲಿನಿಂದಲೂ ಬಹಳ ಆಸಕ್ತಿ. 1980ರಲ್ಲಿ ಮೈಸೂರು ಬ್ಯಾಂಕ್ ಕನ್ನಡ ಬಳಗ ಆರಂಭವಾದಾಗ ಅವರು ಅದರ ಪ್ರಪ್ರಥಮ ಖಜಾಂಚಿ. ಕನ್ನಡ ಬಳಗದ ನಾಟಕ ತಂಡದಲ್ಲೂ ಪಾತ್ರವಹಿಸಿದ್ದಾರೆ.

ಬ್ಯಾಂಕ್ ಉದ್ಯೋಗದಿಂದ 2011ರಲ್ಲಿ ನಿವೃತ್ತರಾದ ನಂತರವೂ ಸಕ್ರಿಯವಾಗಿರುವ ಶ್ರೀಧರ ರಾವ್ ಅವರು ಕಳೆದ 13 ವರ್ಷಗಳಿಂದ ಮಾನವ ಸಂಪನ್ಮೂಲ ಸಲಹೆಗಾರರಾಗಿ ಹಲವು ಭಾರತೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಿಗಾಗಿ ಸೇವೆ ಸಲ್ಲಿಸಿ, ಅಲ್ಲಿನ ಉದ್ಯೋಗಿಗಳ ಸಾಮರ್ಥ್ಯದ ಮೌಲ್ಯಮಾಪನ ಮಾಡಿ ಸೂಕ್ತ ಮಾರ್ಗದರ್ಶನ ನೀಡುವ ಕಾಯಕದಲ್ಲಿ ನಿರತರಾಗಿದ್ದಾರೆ. ಇದಕ್ಕಾಗಿ ಆಗಿಂದಾಗ್ಗೆ ವಿದೇಶ ಪರ್ಯಟನೆಯನ್ನೂ ಮಾಡುತ್ತಿರುತ್ತಾರೆ. ಅವರ ಪತ್ನಿ ಶ್ರೀಮತಿ ಶೋಭಾ ಅವರು ಭಾರತೀಯ ಸ್ಟೇಟ್ ಬ್ಯಾಂಕಿನ ಉದ್ಯೋಗಿಯಾಗಿ ನಿವೃತ್ತರಾದವರು.

ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಧರ ರಾವ್ ಅವರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು ಕೋವಿಡ್-19ರ ಬಿಡುವಿನ ಕಾಲಘಟ್ಟದಲ್ಲಿ. ಇವರು ರಚಿಸಿದ '70ರಲ್ಲಿ 20ರ ಕಥೆಗಳು' (ಸಣ್ಣ ಕಥಾ ಸಂಕಲನ) 'ಪ್ರಾಜೆಕ್ಟ್ ಸರ್ಕೋಮಾ' (ಸ್ವಾನುಭವ ಕಥನ) ಹಾಗೂ 'ಏಳು ಸಹೋದರಿಯರು ಮತ್ತು ಇಪ್ಪತ್ತೊಂದು ದಿನಗಳು' (ಈಶಾನ್ಯ ರಾಜ್ಯಗಳ ಪ್ರವಾಸ ಕಥನ) ಪ್ರಕಟವಾಗಿವೆ.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬಹಳಷ್ಟು ಮುಂದುವರಿದಿದ್ದು, 'ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್') ಇದೀಗ ಬ್ಯಾಂಕಿಂಗ್ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡುತ್ತಿದೆ. ಎಚ್ಚೆಸ್ವೆ ಬೆಳಕು-9 ಕಾರ್ಯಕ್ರಮದ ಬ್ಯಾಂಕಿಂಗ್ ಗೋಷ್ಠಿಯಲ್ಲಿ 'ಭಾರತೀಯ ಬ್ಯಾಂಕುಗಳು – ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು' ಎಂಬ ವಿಷಯದ ಬಗ್ಗೆ ಶ್ರೀ ಹೆಚ್. ಶ್ರೀಧರರಾವ್ ಅವರು ಮಾಡಿದ ಉಪನ್ಯಾಸವನ್ನು ಬರಹ ರೂಪದಲ್ಲಿ ಇಲ್ಲಿ ನೀಡಲಾಗಿದೆ.

ಮತ್ತೊಂದು ದಿನ ಸ್ವಸ್ತಿ ಶಾಪಿಂಗ್‌ಗೆ ಹೋಗಿರುತ್ತಾಳೆ. ಬಹಳಷ್ಟು ಖರ್ಚು ಮಾಡುತ್ತಾಳೆ. ಕೃಬು ಸಹಾಯಕ ಆಕೆಗೆ ಎಚ್ಚರಿಕೆ ನೀಡುತ್ತಾನೆ, 'ನಿಮ್ಮ ಖಾತೆಯಲ್ಲಿ ಓವರ್‌ಡ್ರಾಫ್ಟ್ ಆಗಬಹುದು. ಖರ್ಚಿನಲ್ಲಿ ಸ್ವಲ್ಪ ನಿಯಂತ್ರಣವಿರಲಿ' ಎಂದು.

ಹೊಸದಾಗಿ ಮಾರುಕಟ್ಟೆಗೆ ಬಂದಿರುವ ಸ್ಕೀಮ್, ಅದರಿಂದ ಆಗುವ ಲಾಭಗಳು, ಷೇರು ಮಾರುಕಟ್ಟೆಯಲ್ಲಿ ಆದಿನ ಯಾವ ಷೇರಿನಲ್ಲಿ ವ್ಯವಹರಿಸಬಹುದು. ಇನ್ನಿತರ ಹಣಕಾಸು ಮಾರುಕಟ್ಟೆಯ (ಫೈನಾನ್ಸಿಯಲ್ ಮಾರ್ಕೆಟ್) ಸಂಪೂರ್ಣ ಮಾಹಿತಿ ಮುಂತಾದುವುಗಳನ್ನು ಕೃಬು ಸಹಾಯಕ ಸ್ವಸ್ತಿಗೆ ನೀಡುತ್ತಾನೆ.

ಸ್ವಸ್ತಿ ತನ್ನ ಹೂಡಿಕೆಯನ್ನು ಪುನರ್ ಪರಿಶೀಲಿಸಲು ಇಚ್ಛಿಸಿದರೆ, ತಕ್ಷಣ ಕೃಬು ಸಹಾಯಕ ಆಕೆಗೆ ಅವಕಾಶಗಳ ಪಟ್ಟಿಯನ್ನೇ ಮುಂದಿಡುತ್ತಾನೆ. ಷೇರುಗಳು, ಬಾಂಡುಗಳು, ಮ್ಯೂಚುಯಲ್ ಫಂಡ್‌ಗಳು ಹಾಗೂ ಅವುಗಳ ವಿಪತ್ತು ಅಂಶಗಳನ್ನು, ಲಾಭಾಂಶವನ್ನು ವಿಶ್ಲೇಷಿಸಿ ತಿಳಿಸುತ್ತಾನೆ.

ಸ್ವಸ್ತಿಯ ಇನ್ನೂ ಹಲವಾರು ಈ-ಕಾಮರ್ಸ್, ಆರೋಗ್ಯ ವಿಮೆ, ಜೀವವಿಮೆ, ಮತ್ತಿತರ ಸೇವಾ ಪಾವತಿಗಳ ಸಂಪೂರ್ಣ ಜವಾಬ್ದಾರಿಯನ್ನು ಕೃಬು ಸಹಾಯಕ ವಹಿಸಿಕೊಳ್ಳುತ್ತಾನೆ.

ಸ್ವಸ್ತಿಯ ಖಾತೆಯಲ್ಲಿ ಸುರಕ್ಷತೆಯ ಉಲ್ಲಂಘನೆಯಾಗಿದೆ ಎಂಬ ಬಗ್ಗೆ ಕೃಬು ಸಹಾಯಕನಿಗೆ ಗುಮಾನಿ ಬಂದಾಕ್ಷಣ, ಆತನು ಸ್ವಸ್ತಿಗೆ ಎಚ್ಚರಿಕೆ ನೀಡುತ್ತಾನೆ. ಪಾಸ್‌ವರ್ಡ್ ಬದಲಾಯಿಸುವಂತೆ ಮತ್ತು ಫಾಸಿಲ್ ಅಥವಾ ಕಣ್ಣಿನ ಅಥವಾ ದೇಹದ ಭಾಗಗಳ ಬಯೋಮೆಟ್ರಿಕ್ ಪಾಸ್‌ವರ್ಡ್ ಉಪಯೋಗಿಸುವಂತೆ ಸಲಹೆ ನೀಡುತ್ತಾನೆ.

ಈ ಎಲ್ಲ ಸೇವೆಗಳಲ್ಲಿ ಮಾತ್ರವಲ್ಲದೆ ಗಣಕ ಜಗತ್ತಿನ ಯಾವುದೇ ಹಣಕಾಸು ವ್ಯವಹಾರದಲ್ಲಿ ಬಹಳಷ್ಟು ನಿಗಾ ಇಡಬೇಕಾದ ಅಂಶವೆಂದರೆ ದತ್ತಾಂಶ (ಡೇಟಾ) ಸೋರಿಕೆ. ಅದನ್ನು ಕೂಡ ಈ ಕೃಬು ಸಹಾಯಕನು ಗಮನಿಸುತ್ತಾ, ಅವಶ್ಯವಿದ್ದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲು ಸಲಹೆ ನೀಡುತ್ತಾನೆ.

ಒಂದು ದಿನ ಸ್ವಸ್ತಿಗೆ ಹೆಚ್ಚಿನ ವ್ಯಾಸಂಗ ಮಾಡಬೇಕೆನಿಸಿ, ಕೃಬು ಸಹಾಯಕನನ್ನು ಸಂಪರ್ಕಿಸುತ್ತಾಳೆ. ಆಕೆಯ ಇಚ್ಛಾನುಸಾರ ಲಭ್ಯವಿರುವ ಕೋರ್ಸ್‌ಗಳು, ಯೂನಿವರ್ಸಿಟಿ, ಒದಗಿಸಬೇಕಾಗುವ ಹಣ, ಅದಕ್ಕೆ ಅಗತ್ಯವಾದ ಬ್ಯಾಂಕ್ ಸಾಲದ ವಿವರ ಎಲ್ಲವನ್ನೂ ಪಟ್ಟಿಮಾಡಿ ಕೃಬು ಸಹಾಯಕ ಸೂಕ್ತ ಸಲಹೆ ನೀಡುವುದಲ್ಲದೆ, ಆಕೆಯು ಓದಿದ ಯೂನಿವರ್ಸಿಟಿಯಿಂದ ಆಕೆಯ ಅಕಾಡೆಮಿಕ್ ಮಾಹಿತಿಯನ್ನು ಕೂಡ ತೆಗೆದುಕೊಂಡು ಬೇಕಾದ ಕೋರ್ಸ್‌ಗೆ ಸೇರುವ ಅನುಕೂಲವನ್ನೂ ಮಾಡಿಕೊಡುತ್ತಾನೆ ಈ ಕೃಬು ಸಹಾಯಕ.

ಒಂದುವೇಳೆ ಸ್ವಸ್ತಿ ಹೊಸ ಮನೆ ಕೊಂಡುಕೊಳ್ಳಬೇಕೆಂಬ ಪ್ರಸ್ತಾವನೆಯನ್ನು ಕೃಬು ಸಹಾಯಕನ ಮುಂದೆ ಇಟ್ಟರೆ, ಆತ ಅವಳ ಹಿಂದಿನ ಆದಾಯ, ಖರ್ಚುವೆಚ್ಚಗಳನ್ನು ತಾಳೆಮಾಡಿ, ಆಕೆ ಎಷ್ಟು ಸಾಲ ತೆಗೆದುಕೊಳ್ಳಬಹುದು, ಆ ಸಾಲಕ್ಕೆ ಹೊಂದುವಂತಹ ಮನೆಗಳು ಎಲ್ಲಿವೆ, ಆಸ್ತಿ ಅಡವಿಟ್ಟುಕೊಂಡು ಯಾವ ಬ್ಯಾಂಕುಗಳು ಸಾಲ ಕೊಡುತ್ತವೆ, ಮಾಸಿಕ ಕಂತು ಎಷ್ಟು, ಬಡ್ಡಿ ದರವೆಷ್ಟು ಎಲ್ಲವನ್ನೂ ತಾಳೆಹಾಕಿ ಅತ್ಯುತ್ತಮ ಅವಕಾಶ ಯಾವುದು ಎಂಬುದನ್ನೂ ತೀರ್ಮಾನಿಸಿ, ಆ ಬ್ಯಾಂಕಿನಿಂದ ಸ್ವಸ್ತಿಗೆ ಪೂರ್ವಒಪ್ಪಿತ (ಪ್ರಿ-ಅಪ್ರೂವ್ಡ್) ಮಂಜೂರಾತಿಯನ್ನೂ ಕೊಡಿಸುತ್ತಾನೆ.

ಇವೆಲ್ಲವೂ ಸಾಧ್ಯವೆನ್ನುವುದಾದರೆ, ಅದಕ್ಕೆ ಮೂಲ ಕಾರಣ ಇದೀಗ ಬ್ಯಾಂಕಿಂಗ್ ಕ್ಷೇತ್ರಕ್ಕೂ ಪಾದಾರ್ಪಣ ಮಾಡಿರುವ ಕೃತಕ ಬುದ್ಧಿಮತ್ತೆಯೇ!

ಬ್ಯಾಂಕಿಂಗ್ ಹೇಗಿತ್ತು, ಈಗ ಎಲ್ಲಿಗೆ ಬಂತು..

ಒಂದಾನೊಂದು ಕಾಲದಲ್ಲಿ ಬೆಂಚುಗಳ ಮೇಲೆ ಹಣ ಇಟ್ಟುಕೊಂಡು ಲೇವಾದೇವಿ ನಡೆಸುವುದರಿಂದ ಆರಂಭವಾದ ಈ ಬ್ಯಾಂಕಿಂಗ್ ವ್ಯವಹಾರ, ಈಗ ಮನುಷ್ಯರ ನೆರವಿಲ್ಲದೆಯೇ ಮುನ್ನಡೆಯುವಂತಹ ಇ-ಬ್ಯಾಂಕಿಂಗ್ ಹಂತಕ್ಕೆ ಬಂದಿದೆ. ಬ್ಯಾಂಕಿಂಗ್‌ನ ಇತಿಹಾಸದ ಮೂಲವನ್ನು ಹುಡುಕುತ್ತಾ ಹೋದರೆ, ನಾವು ನೂರಾರು ವರ್ಷಗಳ ಹಿಂದಕ್ಕೆ ಹೋಗಬೇಕು. ಅಂದು ನಾಗರಿಕ ಸಮಾಜವೆನಿಸಿಕೊಂಡಿದ್ದ ಯುರೋಪಿಯನ್ ದೇಶಗಳಲ್ಲಿ ಶ್ರೀಮಂತರು ತಮ್ಮ ಪರಿಚಿತ ವ್ಯಾಪಾರಸ್ಥರಿಗೆ ಬೇಕಾದ ಸಮಯದಲ್ಲಿ ಕೇಳಿದಷ್ಟು ಹಣವನ್ನು ಕೊಡುವ, ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಿದಾಗ ಅದು 'ಬ್ಯಾಂಕಿಂಗ್ ವ್ಯವಹಾರ' ಎನಿಸಿಕೊಂಡಿತು. 1786ರಲ್ಲಿ ಯೂರೋಪಿನಲ್ಲಿ ಮೊತ್ತಮೊದಲ ಸೆಂಟ್ರಲ್ ಬ್ಯಾಂಕ್ ಆರಂಭವಾಯಿತು.

ಅನಾದಿ ಕಾಲದಿಂದಲೂ ಭಾರತದಲ್ಲಿ ಕೆಲವು ಚಿಲ್ಲರೆ ವ್ಯಾಪಾರಸ್ಥರು ಲೇವಾದೇವಿ ನಡೆಸುತ್ತಿದ್ದರು. ಆದರೆ ಒಂದು ವ್ಯವಸ್ಥಿತ ಬ್ಯಾಂಕಿಂಗ್ ಸಂಸ್ಥೆಯನ್ನು ಭಾರತದಲ್ಲಿ ಹುಟ್ಟುಹಾಕಿದ್ದು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ. ಅದು ಭಾರತದಲ್ಲಿನ ತನ್ನ ಹಣಕಾಸಿನ ವ್ಯವಹಾರಕ್ಕಾಗಿ 1806ರಲ್ಲಿ ಬ್ಯಾಂಕ್ ಆಫ್ ಕಲ್ಕತ್ತವನ್ನು ಸ್ಥಾಪಿಸಿತು. ನಂತರ 1840ರಲ್ಲಿ ಬ್ಯಾಂಕ್ ಆಫ್ ಬಾಂಬೆ ಮತ್ತು 1843ರಲ್ಲಿ ಬ್ಯಾಂಕ್ ಆಫ್ ಮದ್ರಾಸ್‌ಗಳನ್ನು ಆರಂಭಿಸಿತು. 1921 ರಲ್ಲಿ ಈ ಮೂರು ಬ್ಯಾಂಕುಗಳೂ ವಿಲೀನಗೊಂಡು 'ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ' ಜನ್ಮತಾಳಿತು. ಅದನ್ನೇ ನಂತರ 1955ರಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ' ಎಂದು ಮರುನಾಮಕರಣ ಮಾಡಲಾಯಿತು.

19ನೆಯ ಶತಮಾನದ ಆರಂಭದಲ್ಲಿ ಭಾರತದಲ್ಲಿದ್ದ ಹಲವು ರಾಜಮನೆತನಗಳು ತಮ್ಮ ಸಂಸ್ಥಾನದ ಪ್ರಜೆಗಳ ಹಣಕಾಸು ವ್ಯವಹಾರದ ಅಗತ್ಯಗಳಿಗಾಗಿ ತಮ್ಮದೇ ಆದ ಬ್ಯಾಂಕುಗಳನ್ನು ಆರಂಭಿಸಿದವು. ಬ್ಯಾಂಕ್ ಆಫ್ ಮೈಸೂರು, ಬ್ಯಾಂಕ್ ಆಫ್ ಟ್ರಾವಂಕೂರು, ಬ್ಯಾಂಕ್ ಆಫ್ ಹೈದರಾಬಾದ್, ಬ್ಯಾಂಕ್ ಆಫ್ ಪಾಟಿಯಾಲ, ಬ್ಯಾಂಕ್ ಆಫ್ ಸೌರಾಷ್ಟ್ರ, ಬ್ಯಾಂಕ್ ಆಫ್ ಬಿಕಾನೇರ್ ಅಂಡ್ ಜೈಪುರ್, ಬ್ಯಾಂಕ್ ಆಫ್ ಇಂದೂರ್, ಅಲ್ಲಾಹಬಾದ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಮುಂತಾದುವು ಭಾರತದ ಪ್ರಮುಖ ರಾಜಾಶ್ರಯದ ಬ್ಯಾಂಕುಗಳು. ಬ್ಯಾಂಕುಗಳಲ್ಲಿ ಹೆಚ್ಚಾಗಿ ಸಿರಿವಂತರೇ ವ್ಯವಹರಿಸುತ್ತಿದ್ದ ಈ ಕಾಲಘಟ್ಟವನ್ನು ಬ್ಯಾಂಕಿಂಗ್ ವ್ಯವಸ್ಥೆಯ ಮೊದಲ ಹಂತ ಎನ್ನಬಹುದು.

ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಭಾರತದ ಬ್ಯಾಂಕುಗಳು ಸಾಮಾನ್ಯ ನಾಗರಿಕರಿಗಾಗಿ ತೆರೆದುಕೊಂಡವು. ಅದರಲ್ಲೂ 1969ರಲ್ಲಿ ಖಾಸಗಿ ವಲಯದಲ್ಲಿದ್ದ 14 ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದ ನಂತರ ಬ್ಯಾಂಕುಗಳ ವ್ಯಾಖ್ಯೆ, ಉದ್ದೇಶ, ಕಾರ್ಯಕ್ರಮಗಳಲ್ಲಿ ಬಹಳಷ್ಟು ಬದಲಾವಣೆಗಳಾದುವು. ಗ್ರಾಮಾಂತರ ಪ್ರದೇಶಗಳಲ್ಲೂ ಸಾವಿರಾರು ಶಾಖೆಗಳು ಆರಂಭವಾದುವು. ಅಲ್ಲದೆ, ಒಂದೆರಡು ಜಿಲ್ಲೆಗೊಂದರಂತೆ ಗ್ರಾಮೀಣ ಬ್ಯಾಂಕುಗಳನ್ನೂ ತೆರೆಯಲಾಯಿತು. ಜನಸಾಮಾನ್ಯರು ಬ್ಯಾಂಕುಗಳಲ್ಲಿ ತಮ್ಮ ಖಾತೆ ತೆರೆದು ವ್ಯವಹರಿಸಲು ಮುಕ್ತ ಅವಕಾಶ ಲಭಿಸಿತು. ಸರ್ಕಾರದ

ಯೋಜನೆಗಳ ಅನುಷ್ಠಾನಕ್ಕಾಗಿ, ಆರ್ಥಿಕವಾಗಿ ಹಿಂದುಳಿದವರ ಸಹಾಯಕ್ಕಾಗಿ, ಬ್ಯಾಂಕುಗಳಿವೆ ಎಂಬುದು ಸರ್ವವಿದಿತವಾಯಿತು.

ಇದರ ಯಶಸ್ಸಿನಿಂದ ಪ್ರೇರಿತವಾದ ಸರ್ಕಾರ 1980ರಲ್ಲಿ ಇನ್ನೂ 6 ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು. ಜೊತೆಯಲ್ಲಿಯೇ ನಿರ್ದಿಷ್ಟ ಉದ್ದೇಶ ಮತ್ತು ಸೇವೆಗಳಿಗಾಗಿ ಸರ್ಕಾರಿ ಸ್ವಾಮ್ಯದ ಕೆಲವು ಬ್ಯಾಂಕುಗಳನ್ನೂ ಆರಂಭಿಸಲಾಯಿತು. ಉದಾಹರಣೆಗೆ– ವ್ಯವಸಾಯ ಮತ್ತು ಅದರ ಉತ್ಪನ್ನಗಳಿಗೆ ನೆರವು ನೀಡುವ ನಬಾರ್ಡ್, ಆಮದು ಮತ್ತು ರಫ್ತು ವ್ಯವಹಾರಗಳನ್ನು ಉತ್ತೇಜಿಸಲು ಎಕ್ಸಿಮ್ ಬ್ಯಾಂಕ್, ವಸತಿ ಮತ್ತು ಗೃಹ ಸಾಲಗಳಿಗೆ ಆದ್ಯತೆ ನೀಡಲು ನ್ಯಾಷನಲ್ ಹೌಸಿಂಗ್ ಬ್ಯಾಂಕ್, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (SIDBI) ಇತ್ಯಾದಿ. ಸ್ವಾತಂತ್ರ್ಯಾನಂತರದಿಂದ 1990ರವರೆಗಿನ ಈ ಕಾಲಘಟ್ಟವನ್ನು ಭಾರತದಲ್ಲಿ ಬ್ಯಾಂಕಿಂಗ್ ಬೆಳವಣಿಗೆಯ ಎರಡನೇ ಹಂತವೆಂದು ಕರೆಯಬಹುದು.

ಮೂರನೇ ಹಂತದಲ್ಲಿ, 1990ರಲ್ಲಿ ಭಾರತ ಸರಕಾರವು ಅನುಷ್ಠಾನಗೊಳಿಸಿದ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳಿಂದಾಗಿ, ಭಾರತದಲ್ಲಿ ವಿದೇಶಿ ಹೂಡಿಕೆಗೆ ಆದ್ಯತೆ ದೊರೆತು, ಅನೇಕ ಜಾಗತಿಕ ಮಟ್ಟದ ಬ್ಯಾಂಕುಗಳು ಭಾರತಕ್ಕೂ ಪಾದಾರ್ಪಣೆ ಮಾಡಿ ವಿವಿಧೆಡೆ ತಮ್ಮ ಶಾಖೆಗಳನ್ನು ಆರಂಭಿಸಿದವು. ಭಾರತದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಅಳವಡಿಕೆಯ ಬಗ್ಗೆ ಇನ್ನೂ ಗಮನಹರಿಸದಿದ್ದ ಅಂದಿನ ದಿನಗಳಲ್ಲಿ ಬ್ಯಾಂಕ್ ಆಫ್ ಅಮೆರಿಕಾ, ಹೆಚ್.ಎಸ್.ಬಿ.ಸಿ, ಸಿಟಿ ಬ್ಯಾಂಕ್, ರಾಯಲ್ ಬ್ಯಾಂಕ್ ಆಫ್ ಸ್ಕಾಟ್ಲೆಂಡ್, ಡಿಬಿಎಸ್ ಬ್ಯಾಂಕ್ ಮುಂತಾದ ವಿದೇಶೀ ಬ್ಯಾಂಕುಗಳು ಅತ್ಯಾಧುನಿಕ ತಂತ್ರಜ್ಞಾನದ ಸಹಿತ ಭಾರತಕ್ಕೆ ಬಂದು, ಭಾರತೀಯ ಬ್ಯಾಂಕುಗಳಿಗೆ ಸವಾಲನ್ನು ಒಡ್ಡಲಾರಂಭಿಸಿದವು.

ಆ ವೇಳೆಗೆ ಕೈಗಾರಿಕೆ, ವಸತಿ ಮುಂತಾದ ನಿರ್ದಿಷ್ಟವಾದ ಉದ್ದೇಶಗಳಿಗಾಗಿ ಸ್ಥಾಪಿತವಾದಂತಹ ಐಸಿಐಸಿಐ, ಐಡಿಬಿಐ, ಹೆಚ್‌ಡಿಎಫ್‌ಸಿ ಮುಂತಾದ ಹಣಕಾಸು ಸಂಸ್ಥೆಗಳ ವ್ಯಾಪ್ತಿಯನ್ನು ವಿಸ್ತರಿಸಿ, ಹೈಟೆಕ್ ತಂತ್ರಾಂಶವನ್ನು ಅಳವಡಿಸಲಾಯಿತಲ್ಲದೆ, ಖಾಸಗಿ ಬಂಡವಾಳಕ್ಕೂ ಅವಕಾಶ ನೀಡಿ, ಅವುಗಳ ಶಾಖಾಜಾಲವನ್ನು ವಿಸ್ತರಿಸಲಾಯಿತು. ಹೊಸ ಪೀಳಿಗೆಯ ಬ್ಯಾಂಕುಗಳು ಎಂದು ಕರೆಸಿಕೊಂಡ ಈ ಎಲ್ಲ ಬ್ಯಾಂಕುಗಳು ಉದ್ಯೋಗಿಗಳ ಮೇಲೆ ಹೆಚ್ಚು ಅವಲಂಬಿತವಾಗದೆ, ಅಧಿಕ ಪ್ರಮಾಣದಲ್ಲಿ ತಾಂತ್ರಿಕ ಪ್ರಕ್ರಿಯೆಗಳನ್ನು ಅಳವಡಿಸಿಕೊಂಡವು.

ಈ ಸಂದರ್ಭದಲ್ಲಿ ಖಾಸಗಿ ಬ್ಯಾಂಕುಗಳ ಪೈಪೋಟಿಯನ್ನು ಎದುರಿಸುವುದು ಸರಕಾರಿ ಸ್ವಾಮ್ಯದ ಬ್ಯಾಂಕುಗಳಿಗೆ ಅನಿವಾರ್ಯವಾಗಿತ್ತು. ಅವು ತಮ್ಮ ಉಳಿವಿಗಾಗಿ ಕ್ಷಿಪ್ರವಾಗಿ ಬದಲಾವಣೆಗೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಯಿತು. ಹಾಗಾಗಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಸಹಾ ಹಲವು ಅಡೆತಡೆಗಳ ನಡುವೆಯೇ, ಮೊದಲಿಗೆ ಭಾಗಶಃ ಗಣಕೀಕರಣದಿಂದ ಆರಂಭಿಸಿ, ನಂತರ ಸಂಪೂರ್ಣ ಗಣಕೀಕರಣ, ಕೋರ್ ಬ್ಯಾಂಕಿಂಗ್ ವ್ಯವಸ್ಥೆ, ವ್ಯವಹಾರ

ಪ್ರಕ್ರಿಯೆ ಮರುವಿನ್ಯಾಸ (ಬಿಸಿನೆಸ್ ಪ್ರೊಸೆಸ್ ರಿ-ಇಂಜಿನಿಯರಿಂಗ್) ಮುಂತಾದ ಹಲವಾರು ತಂತ್ರಜ್ಞಾನ ಆಧಾರಿತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡವು, 1990ರಿಂದ 2010ರವರೆಗಿನ ಕಾಲಘಟ್ಟದ ಮೂರನೆಯ ಹಂತವನ್ನು ಭಾರತದಲ್ಲಿ 'ತಂತ್ರಾಂಶ ಸಹಿತ ಪ್ರಕ್ರಿಯೆ ಆಧಾರಿತ ಬ್ಯಾಂಕಿಂಗ್ ಅವಧಿ'ಎಂದು ವ್ಯಾಖ್ಯಾನಿಸಬಹುದು.

ನಾಲ್ಕನೇ ಹಂತದಲ್ಲಿ ಅಂದರೆ 2010ರಿಂದೀಚೆಗೆ ಭಾರತದ ಬ್ಯಾಂಕುಗಳು ಅತ್ಯಂತ ಕ್ಷಿಪ್ರವಾಗಿ ಆಧುನಿಕತೆಗೆ ತೆರೆದುಕೊಂಡು, ಡಿಜಿಟಲೀಕರಣ, ಮೊಬೈಲ್ ಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್, ಫೋನ್ ಪೇ ಮುಂತಾದ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸುವಲ್ಲಿ ಯಶಸ್ವಿಯಾದುವಲ್ಲದೆ, ಜನಸಾಮಾನ್ಯರಿಗೂ ತಂತ್ರಜ್ಞಾನ ಆಧಾರಿತ ಬ್ಯಾಂಕಿಂಗ್ ವ್ಯವಹಾರದ ಬಗ್ಗೆ ತಿಳವಳಿಕೆ ಮೂಡಿಸಿದ ಕಾರಣ, ಭಾರತೀಯ ಬ್ಯಾಂಕಿಂಗ್ ಕಾರ್ಯವೈಖರಿ ಮತ್ತಷ್ಟು ಬಲಿಷ್ಠವಾಯಿತು.

ಹೀಗೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಳವಡಿಸಿದ ಬೃಹತ್ ಡಿಜಟಲೀಕರಣ ಕಾರ್ಯ ಕೋವಿಡ್-19ರ ಸಮಯದಲ್ಲಿ ಜನಸಂಪರ್ಕವಿಲ್ಲದ ಬ್ಯಾಂಕಿಂಗ್ ವ್ಯವಹಾರಕ್ಕೆ ಉತ್ತೇಜನ ನೀಡಿತು. ಈ ಡಿಜಟಲೀಕರಣ ಪ್ರಕ್ರಿಯೆ ಯಶಸ್ವಿಯಾಗಲು ಮುಖ್ಯ ಕಾರಣ ಭಾರತದ ಯುವಜನತೆ ತಮ್ಮ ನವೋನ್ವೇಷಣೆಯನ್ನು ಅಚ್ಚುಕಟ್ಟಾಗಿ ಹಾಗೂ ಅತ್ಯಂತ ಕ್ರಿಯಾಶೀಲವಾಗಿ ನಡೆಸಿಕೊಂಡು, ಉಪಯೋಗಿಸಿಕೊಂಡು ಬಂದದ್ದು. ಈ ಹಂತವನ್ನು ಬ್ಯಾಂಕುಗಳ ಡಿಜಿಟಲೀಕರಣ ಹಂತವೆಂದೇ ಪರಿಗಣಿಸಬಹುದು.

ಮುಂದಿನ ಹಂತವೇ 'ಕೃತಕ ಬುದ್ಧಿಮತ್ತೆ' ಸಹಿತ ಬ್ಯಾಂಕಿಂಗ್.

ಕೃತಕ ಬುದ್ಧಿಮತ್ತೆ ಎಂದರೇನು?

ಸೈದ್ಧಾಂತಿಕವಾಗಿ ಹೇಳಬೇಕೆಂದರೆ, ಕೃತಕ ಬುದ್ಧಿಮತ್ತೆಯು ಯಂತ್ರದ ಮೂಲಕ ಮಾನವನಿಗೆ ಸರಿ ಸಮಾನವಾದ ಬುದ್ಧಿಶಕ್ತಿಯನ್ನು ಪ್ರಕಟಗೊಳಿಸುವುದು. ಅಂದರೆ ಕಂಪ್ಯೂಟರ್ ತಂತ್ರಾಂಶವು, ತನಗೆ ಒದಗಿಸಿದ ದತ್ತಾಂಶದಿಂದ, ತನ್ನ ವಿಶ್ಲೇಷಣಾ ಸಾಮರ್ಥ್ಯವನ್ನು, ಸ್ವಯಂಪ್ರಜ್ಞೆಯನ್ನು ಬಳಸಿಕೊಂಡು ಬುದ್ಧಿವಂತ ಮಾನವನಂತೆಯೇ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಭವಿಷ್ಯತ್ತಿನ ಯೋಜನೆಗಳನ್ನು ರೂಪಿಸುವುದು.

ಕೃತಕ ಬುದ್ಧಿಮತ್ತೆಯನ್ನು (Artificial Intelligence-AI) ಅಭಿವೃದ್ಧಿಗೊಳಿಸುವ ತಂತ್ರಜ್ಞರು, ಮಾನವನಿಗೂ ಸರಿಸಮನಾಗಿ ಇಲ್ಲವೇ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಮಾದರಿಯನ್ನು ಗುರುತಿಸಿ ಗ್ರಾಹಕರ ಸಮಸ್ಯೆಗಳನ್ನು ಪರಿಹರಿಸುವ ಕೃತಕ ಬುದ್ಧಿಮತ್ತೆಯ ತಂತ್ರಾಂಶವನ್ನು ಗಣಕ ಯಂತ್ರಗಳಲ್ಲಿ ಅಳವಡಿಸಿರುತ್ತಾರೆ. ತಂತ್ರಜ್ಞರು ಒಂದು ಬಾರಿ ಸಂಕೀರ್ಣ ಸೂಚನೆಗಳನ್ನು ಕಂಪ್ಯೂಟರ್‌ಗೆ ನೀಡಿದರೆಂದರೆ ಅದು ಚೆಸ್ ಆಡುವುದರಿಂದ

ಹಿಡಿದು ಗ್ರಾಹಕರ ಯಾವುದೇ ಪ್ರಶ್ನೆಗಳಿಗಾದರೂ ಉತ್ತರವನ್ನು ಹುಡುಕಿ ಕೊಡುವಷ್ಟು ಸಾಮರ್ಥ್ಯವನ್ನು ಹೊಂದಿರುವುದು ಕೃತಕ ಬುದ್ಧಿಮತ್ತೆಯಿಂದಲೇ.

ದತ್ತಾಂಶ ವಿಜ್ಞಾನವು, ಅಂಕಿಅಂಶಗಳು, ವೈಜ್ಞಾನಿಕ ಕಂಪ್ಯೂಟಿಂಗ್ ಮತ್ತು ವ್ಯವಹಾರ ಜ್ಞಾನವನ್ನು ಕ್ರೋಡೀಕರಿಸಿ ಆ ಮೂಲಕ ಹಲವು ದತ್ತಾಂಶ ಮೂಲದಿಂದ ಮಾಹಿತಿಗಳನ್ನು ಹುಡುಕಿ ತೆಗೆದು, ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತದೆ ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನೂ ಕೊಡುತ್ತದೆ.

ಬ್ಯಾಂಕುಗಳಲ್ಲಿ ಕೃತಕ ಬುದ್ಧಿಮತ್ತೆಯ (ಕೃಬು) ಉಪಯೋಗವನ್ನು ಎರಡು ಪ್ರಮುಖ ಪ್ರಕಾರಗಳಲ್ಲಿ ಕಾಣಬಹುದು. ಒಂದು ಅಂಕೀಕರಣ (Degitalisation) ಪ್ರಭಾವದಿಂದ ಮತ್ತೊಂದು ದತ್ತಾಂಶ ವಿಶ್ಲೇಷಣೆ (Data Analysis).

ಕೃತಕ ಬುದ್ಧಿಮತ್ತೆಯನ್ನು ಸಮರ್ಥವಾಗಿ ಬಳಸಿಕೊಂಡು ಬ್ಯಾಂಕಿಂಗ್‌ನಲ್ಲಿ ಬಹು ಜಟಿಲವಾದ, ವಿಪತ್ತು ನಿರ್ವಹಣೆ (Risk Management) ಮತ್ತು ಶಾಸನಬದ್ಧ ಆವಶ್ಯಕತೆಗೆ ಅನುಗುಣವಾಗಿ ನಿಧಿ ನಿರ್ವಹಣೆಯನ್ನು (Funds Management) ಬಹಳ ನಿಖರವಾಗಿ ಮತ್ತು ಸುಸೂತ್ರವಾಗಿ ಮಾಡುವುದು ಸುಲಭವಾಯಿತು. ವ್ಯತ್ಯಯಗಳಾದಾಗ ಮುನ್ನೆಚ್ಚರಿಕೆಗಳ ಜೊತೆಯಲ್ಲಿಯೇ ಸಮರ್ಪಕ ಬಳಕೆಯ ವಿಧಾನವನ್ನು ಕೂಡ ಕೃತಕ ಬುದ್ಧಿಮತ್ತೆಯಿಂದ ತಿಳಿದುಕೊಳ್ಳುವುದು ಸಾಧ್ಯವಾಯಿತು. ಅಲ್ಲದೆ, ಬ್ಯಾಂಕುಗಳಲ್ಲಿ ಸ್ವತ್ತುಗಳ ವಿಂಗಡಣೆ, ಸಾಲ, ಮುಂಗಡಗಳ ಮೇಲ್ವಿಚಾರಣೆ ಮತ್ತು ವಸೂಲಾತಿ ಹಾಗೂ ಪರಾಮರ್ಶೆಯೂ ತ್ವರಿತವಾಯಿತು.

ಕೃತಕ ಬುದ್ಧಿಮತ್ತೆಯಿಂದ ಏನೆಲ್ಲ ಸಾಧ್ಯ?

ಕೃತಕ ಬುದ್ಧಿಮತ್ತೆಯ ಪರಿಕಲ್ಪನೆಯನ್ನು ಈಗಾಗಲೇ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಳವಡಿಸಲಾಗಿದ್ದು, ಈ ಕೆಳಕಂಡ ಕಾರ್ಯಗಳಿಗೆ ಅದನ್ನು ಬಳಸಲಾಗುತ್ತಿದೆ.

- ಬ್ಯಾಂಕ್ ವಂಚನೆ ಮತ್ತು ಮೋಸಗಳನ್ನು ಪತ್ತೆಹಚ್ಚುವಲ್ಲಿ ಕೃತಕ ಬುದ್ಧಿಮತ್ತೆ ಬಹಳಷ್ಟು ಪರಿಣಾಮಕಾರಿಯಾಗಿದೆ. ಅಗಾಧ ಪ್ರಮಾಣದ ದತ್ತಾಂಶವನ್ನು ವಿಶ್ಲೇಷಿಸಿ, ಅದರಲ್ಲಿರುವ ಅಸಂಗತತೆಯನ್ನು ಅಥವಾ ವಂಚನೆ ಸ್ವಭಾವದ ವ್ಯವಹಾರಗಳನ್ನು ಬೇರ್ಪಡಿಸಿ ಮುನ್ನೆಲೆಗೆ ತರುವಲ್ಲಿ ಕೃಬು ಸಹಕರಿಸುತ್ತದೆ.
- ಈಗಾಗಲೇ, ಆರ್ಥಿಕ ವಲಯದಲ್ಲಿ, ಕೃಬು ತಂತ್ರಾಂಶವು, ತನ್ನ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ದತ್ತಾಂಶ ವಿಶ್ಲೇಷಣೆಯಿಂದ, ಮೋಸದ ವಹಿವಾಟನ್ನು ಎದುರಿಸಲು, ಉಪಯುಕ್ತ ಅನುಸರಣೆಯನ್ನು ಹೆಚ್ಚಿಸಿಕೊಳ್ಳಲು, ಕಾನೂನುಬಾಹಿರ ಆರ್ಥಿಕ ಅಪರಾಧಗಳನ್ನು ಪತ್ತೆ ಹಚ್ಚಲು ಸಹಾಯಕವಾಗಿದೆ.
- ಹಣಕಾಸಿನ ಸುಗಮ ನಿರ್ವಹಣೆಯನ್ನು ನಡೆಸುವುದರಿಂದ ಬ್ಯಾಂಕುಗಳು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಖರ್ಚುವೆಚ್ಚಗಳನ್ನು ಕಡಿತಗೊಳಿಸಿ ಲಾಭವನ್ನು ವೃದ್ಧಿಸಿಕೊಳ್ಳಲು ಕೃಬು ನೆರವಾಗುತ್ತದೆ.

- ವೈಯಕ್ತಿಕ ಸೇವೆ ಮತ್ತು ಬ್ಯಾಂಕಿಂಗ್ ಉತ್ಪನ್ನಗಳ ತಿಳವಳಿಕೆಯನ್ನು ಗ್ರಾಹಕರಿಗೆ ನೀಡುವಲ್ಲಿ ಕೃಬು ಮಹತ್ತರ ಪಾತ್ರ ವಹಿಸುತ್ತದೆ. ಅದಲ್ಲದೆ, ಗ್ರಾಹಕರ ಆಸ್ಥೆಯನ್ನು, ಅಪೇಕ್ಷೆಯನ್ನು ವಿಶ್ಲೇಷಿಸಿ ಅವರ ಅನುಕೂಲಕ್ಕೆ ತಕ್ಕಂತೆ ಹೊಸ ಉತ್ಪನ್ನಗಳನ್ನು ರೂಪಿಸುವಲ್ಲಿ ಅಥವಾ ಇರುವ ಉತ್ಪನ್ನಗಳಲ್ಲಿ ಬದಲಾವಣೆ ತರುವಲ್ಲಿ ಸಹಕರಿಸುತ್ತದೆ.
- ಲಭ್ಯ ಮಾಹಿತಿಗಳ ಆಧಾರದ ಮೇಲೆ ತ್ವರಿತ ನಿರ್ಧಾರವನ್ನು ತೆಗೆದುಕೊಳ್ಳಲು ಸಹಕರಿಸುತ್ತದೆ.
- ಹಲವು ಮಾನವ ಸಹಿತವಾದ ಕೆಲಸಗಳನ್ನು, ಸಂಗ್ರಹಿಸಿದ ದತ್ತಾಂಶದಿಂದ ಗಣಕ ಯಂತ್ರದ ಮೂಲಕವೇ ಹೆಚ್ಚಿನ ವೇಗದಿಂದ ಮತ್ತು ನಿಖರತೆಯಿಂದ ನಿರ್ವಹಿಸಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಮತ್ತು ಬ್ಯಾಂಕಿಂಗ್ ನೀತಿ ನಿಯಮಗಳನ್ನು ಕ್ರಮಬದ್ಧವಾಗಿ ಪಾಲಿಸುವಲ್ಲಿ ಕೃಬು ಪಾತ್ರ ಅಪಾರ. ಉದಾಹರಣೆಗೆ ಒಂದು ಕ್ಲಿಕ್ ಬಟನ್ ಒತ್ತುವುದರಿಂದ ಒಂದೇ ಬಾರಿಗೆ ಕೋಟ್ಯಂತರ ರೈತರ ಖಾತೆಗಳಿಗೆ ಹಣ ಜಮಾ ಆಗುವುದು ಜಾದು ಎಂದೆನಿಸುವುದಿಲ್ಲವೇ?
- ಬ್ಯಾಂಕುಗಳು ವಿಶೇಷವಾಗಿ ಚಾಟಬೊಟ್ಸ್‌ಗಳನ್ನು ಉಪಯೋಗಿಸಿಕೊಂಡು ಗ್ರಾಹಕರಿಗೆ ಬೇಕಾದ ಸಾಮಾನ್ಯ ತಿಳುವಳಿಕೆ ಮತ್ತು ಖಾತೆಗಳ ಬಗೆಗಿನ ನಿರ್ದಿಷ್ಟ ಮಾಹಿತಿಗಳನ್ನು ನೀಡುವ ವಾಸ್ತವ ಸೇವೆಯನ್ನು, ದಿನವಿಡೀ ಅಂದರೆ 24 x 7 ಅವಧಿಯಲ್ಲಿ ಯಾವುದೇ ಸಿಬ್ಬಂದಿಯ ನೆರವಿಲ್ಲದೆ ಒದಗಿಸುತ್ತಿವೆ.
- ಇತ್ತೀಚಿನ ದಿನಗಳಲ್ಲಿ ಸಲಹೆಗಾರರ ವಿಶ್ಲೇಷಣಾ ವರದಿಯ ಪ್ರಕಾರ ಬ್ಯಾಂಕಿಂಗ್ ಹಾಗೂ ಆರ್ಥಿಕ ವಲಯದಲ್ಲಿ ಸುಮಾರು ಶೇಕಡಾ 30ಕ್ಕೂ ಮಿಗಿಲಾಗಿ ಕೃತಕ ಬುದ್ಧಿಮತ್ತೆಯ ತಂತ್ರಾಂಶವನ್ನು, ಮುನ್ಸೂಚಕ ವಿಶ್ಲೇಷಣೆ (Predictive Analysis) ಮತ್ತು ಧ್ವನಿ ಗುರುತಿಸುವಿಕೆಯಲ್ಲಿ (Voice recognition) ಬಳಸಿಕೊಳ್ಳಲಾಗಿದೆ. ಇನ್ನೂ ಹೆಚ್ಚಿನ ಬೆಳವಣಿಗೆಯ ಸಾಮರ್ಥ್ಯವನ್ನು ಕೃಬು ಹೊಂದಿದೆ ಎಂಬುದು ಇದರಿಂದ ಸಾಬೀತಾಗಿದೆ.
- ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ಮರು ರೂಪಿಸಲು ಬೇಕಾದಂತಹ ಅವಶ್ಯಕ ಪ್ರಕ್ರಿಯೆಗಳನ್ನು ಕೃಬು ಹೊಂದಿದೆ. ಇದರಿಂದಾಗಿ ಬ್ಯಾಂಕಿಂಗ್ ಹಾಗೂ ವಿಶಾಲ ಆರ್ಥಿಕ ವಲಯದಲ್ಲಿ ಮಹತ್ತರ ಕ್ರಾಂತಿಕಾರಿ ಬದಲಾವಣೆಗಳನ್ನು ನಿರೀಕ್ಷಿಸಬಹುದಾಗಿದೆ.
- ಅಂಕೀಕರಣ ಮತ್ತು ಹಣಕಾಸು ತಂತ್ರಜ್ಞಾನ (Digitisation and Fintech) ಕಂಪನಿಗಳೊಂದಿಗೆ ಸ್ಪರ್ಧಿಸಲು ಬ್ಯಾಂಕುಗಳಿಗೆ ಬೇಕಾದ ಪರಿವರ್ತನಾ ಅವಕಾಶವನ್ನು ಕೃಬು ಮುಕ್ತವಾಗಿ ನೀಡುತ್ತದೆ.

ಇವು ಕೆಲವು ಉದಾಹರಣೆಗಳು ಮಾತ್ರ. ಮುಂಬರುವ ದಿನಗಳಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿಮತ್ತೆಯ ಸಂಪೂರ್ಣ ಬಳಕೆ ಅನಿವಾರ್ಯವಾದೀತು.

ಬ್ಯಾಂಕುಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ – ಅನಾನುಕೂಲಗಳು ಮತ್ತು ಸವಾಲುಗಳು

ಬ್ಯಾಂಕಿಂಗ್ ವಲಯದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯಿಂದ ಎಷ್ಟೊಂದು ಅನುಕೂಲಗಳಿವೆಯೋ ಅದಕ್ಕೂ ಮಿಗಿಲಾದ ಸಮಸ್ಯೆಗಳನ್ನು ಕೂಡ ಅದು ಸೃಷ್ಟಿಸುತ್ತದೆ. ಉದಾಹರಣೆಗಾಗಿ,

- ಸೈಬರ್ ಸೆಕ್ಯುರಿಟಿಯೇ ಮಹತ್ತರ ಸಮಸ್ಯೆ. ನಮ್ಮ ವೈಯಕ್ತಿಕ ವಿಷಯಗಳ ಒಂದು ಎಳೆ ಸಿಕ್ಕಿದರೂ ಸಾಕು. ಸೈಬರ್ ವಂಚಕರು ಆ ಎಳೆಯಿಂದಲೇ, ಅದನ್ನು ಎಳೆಯುತ್ತಾ, ಎಳೆಯುತ್ತಾ ಜೇಡರಹುಳದಂತೆ ತನ್ನ ಜಾಲವನ್ನು ಹರಡುತ್ತಾರೆ ಮತ್ತು ಯಾವ ರೀತಿಯಲ್ಲಾದರೂ ಬ್ಯಾಂಕ್ ಗ್ರಾಹಕರನ್ನು ವಂಚನೆಯ ಜಾಲದಲ್ಲಿ ಸೆರೆಹಿಡಿಯುತ್ತಾರೆ. ಹಾಗಾಗಿ ವೈಯಕ್ತಿಕ ದತ್ತಾಂಶವನ್ನು ಬ್ಯಾಂಕುಗಳು ಬಹಳಷ್ಟು ಭದ್ರತೆಯಲ್ಲಿ ಇರಿಸಬೇಕಾಗುತ್ತದೆ.
- ದತ್ತಾಂಶವನ್ನು ಫೀಡ್ ಮಾಡುವಾಗ ಅಥವಾ ತಪ್ಪಾಗಿ ನೀಡಿದಾಗ ಅದರ ಅಡ್ಡ ಪರಿಣಾಮ ಬಹಳ ಆತಂಕಕಾರಿಯಾಗಿರಲೂಬಹುದು, ತಾರತಮ್ಯದಿಂದಲೂ ಕೂಡಿರಬಹುದು. ತೆಗೆದುಕೊಂಡಿರುವ ತೀರ್ಮಾನ ಪಾರದರ್ಶಕ ಎಂದೆನಿಸದೆ ಇರಬಹುದು, ಅವುಗಳ ಸತ್ಯಾಸತ್ಯತೆಗಾಗಿ ದತ್ತಾಂಶದ ವಿಶ್ಲೇಷಣೆ ಕಷ್ಟವಾಗಬಹುದು.
- ಒಂದು ವೇಳೆ ದತ್ತಾಂಶಕ್ಕೆ ನೀಡಿರುವ ಮಾಡಿರುವ ಮಾಹಿತಿ ಸರಿ ಇಲ್ಲವಾದಲ್ಲಿ ಶಾಸನಾತ್ಮಕವಾಗಿ ಅವಶ್ಯವಾದ ಕಾನೂನು ಪರಿಪಾಲನೆ ಆಗದೆ, ಅದು ಇನ್ನಷ್ಟು ಕಾನೂನಾತ್ಮಕ ಸಮಸ್ಯೆಗಳನ್ನು ಹುಟ್ಟುಹಾಕಬಹುದು.
- ಹಲವಾರು ತಂತ್ರಾಂಶಗಳನ್ನು ವ್ಯವಹರಿಸುವ ವಿವಿಧ ಸಂಸ್ಥೆಗಳೊಂದಿಗೆ ಹಂಚಿಕೊಂಡಿರುವ ಮಾಹಿತಿಗಳನ್ನು ಸಂಬಂಧಿಸಿದ ಎಲ್ಲಾ ಸಂಸ್ಥೆಗಳು ಅಷ್ಟೇ ನೈತಿಕ ತಳಹದಿಯಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳುತ್ತವೆಂಬ ನಂಬಿಕೆ, ವಿಶ್ವಾಸ ಬಲವಾಗಿರಬೇಕು, ಸುರಕ್ಷಣೆಗೆ ಬೇಕಾದ ಎಲ್ಲ ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕು.
- ಆದುದರಿಂದ ಮಾಹಿತಿ ಸಂಗ್ರಹಣೆಯ ವಿಚಾರವಾಗಿ ಅತಿ ಹೆಚ್ಚಿನ ನಂಬಿಕಸ್ಥ ಸಂಸ್ಥೆಯೊಡನೆ ಸಹಭಾಗಿತ್ವದ ಜೊತೆಗೆ ಸುರಕ್ಷತೆಯನ್ನೂ ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕಾಗುತ್ತದೆ.
- ಕೃಬು ಆಧಾರಿತ ಬ್ಯಾಂಕಿಂಗ್ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಾಗ ಉತ್ತಮ ಗುಣಮಟ್ಟದ ಮಾಹಿತಿಯನ್ನು, ತರಬೇತಿಗಾಗಿ ಮತ್ತು ಮಾಹಿತಿಯ ಊರ್ಜಿತಕ್ಕಾಗಿ ಬಳಸಿಕೊಳ್ಳಬೇಕು. ಈ ರೀತಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಕೃತಕ ಬುದ್ಧಿಮತ್ತೆಯ ಕ್ರಮಾವಳಿಗಳು ಪರಿಣಾಮಕಾರಿಯಾಗಿರಬೇಕು.
- ಕೃಬು ಕ್ರಮಾವಳಿಗಳನ್ನು ಉಪಯೋಗಿಸುವ ಮುನ್ನ ಬ್ಯಾಂಕುಗಳು ತಮ್ಮ ಮಾಹಿತಿ ತಂತ್ರಾಂಶಗಳನ್ನು ಪುನರ್ಪರಿಶೀಲಿಸಿ ಕಂಪ್ಯೂಟರ್ ಸಂಬಂಧಿತ ಮಾಹಿತಿಗಳ ಅಪಾಯಗಳನ್ನು ಅಂದಾಜಿಸಬೇಕಾಗುತ್ತದೆ.
- ಕೃತಕ ಬುದ್ಧಿಮತ್ತೆಯಿಂದ ವ್ಯಾವಹಾರಿಕ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ, ಅಪ್ಪಿ-ತಪ್ಪಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದರಿಂದ ಭಾರಿ ಅನಾಹುತಗಳು ಸಂಭವಿಸೀತು. ಸಣ್ಣ ತಪ್ಪುಗಳಿಂದ ಬ್ಯಾಂಕಿನ ಹೆಸರಿಗೆ ಕಳಂಕ ಬರುವುದಲ್ಲದೆ ಬ್ಯಾಂಕಿನ ಕಾರ್ಯವೈಖರಿಯ ಸಮಗ್ರತೆ ಬಗ್ಗೆ ಗ್ರಾಹಕರಲ್ಲಿ ಮತ್ತು ಸಾರ್ವಜನಿಕರಲ್ಲಿ ಅನುಮಾನ ಹುಟ್ಟೀತು.

ಈ ವಿಪತ್ತುಗಳಿಂದ ಸಂರಕ್ಷಿಸಿಕೊಳ್ಳಲು ಬ್ಯಾಂಕುಗಳು ಕೃತಕ ಬುದ್ಧಿಮತ್ತೆ ಆಧಾರಿತ ನಿರ್ಣಯಗಳ ಮೇಲ್ವಿಚಾರಣೆ ಹಾಗೂ ಪರಿಶೀಲನೆಯನ್ನು ನಿರಂತರವಾಗಿ ಮಾಡುತ್ತಿರಲೇಬೇಕು. ಕೃಬು ನಿರ್ಣಯಗಳನ್ನು ಅರ್ಥ ಮಾಡಿಕೊಳ್ಳುವುದು, ಮೌಲ್ಯೀಕರಿಸುವುದು, ಉಚ್ಚರಿಸುವುದು ಅವುಗಳ ನಂಬಿಕೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಬಹಳ ನಿರ್ಣಾಯಕ.

ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ನಮ್ಮ ನಿಮ್ಮ ದಿನನಿತ್ಯದ ಗಮನಕ್ಕೆ ಬರುವಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಕಾಣಬಹುದು.

- ನಿಮ್ಮ ಉಳಿತಾಯ ಖಾತೆ ಅಥವಾ ಇತರ ಯಾವುದೇ ಠೇವಣಿ ಖಾತೆಯಾಗಿರಬಹುದು. ನೀವು ಒಂದು ವ್ಯವಹಾರವನ್ನು ಮಾಡುವುದರೊಳಗಾಗಿ ಕನಿಷ್ಠ ಎರಡು ಸಂದೇಶಗಳು ನಿಮ್ಮ ಮೊಬೈಲ್‌ಗೆ ಬಂದಿರುತ್ತವೆ. ವ್ಯವಹಾರ ಆರಂಭಿಸುವುದಕ್ಕೂ ಮೊದಲೇ ನಿಮ್ಮ ಹಣದ ಸುರಕ್ಷತೆಗಾಗಿ ಒಂದು ಓಟಿಪಿಯನ್ನು ಕಳುಹಿಸಿ ನೀವೇ ವ್ಯವಹಾರ ಮಾಡುತ್ತಿದ್ದೀರಿ ಎಂಬುದನ್ನು ದೃಢಪಡಿಸಿಕೊಳ್ಳುತ್ತದೆ. ವ್ಯವಹಾರವಾದ ತಕ್ಷಣವೇ ಆ ವ್ಯವಹಾರ ಕುರಿತಂತೆ (ನೀವು ಎಟಿಎಂನಿಂದ ಹಣ ಹಿಂಪಡೆದಿದ್ದಲ್ಲಿ, ಎಲ್ಲಿಂದ ಎಷ್ಟು ಹಣಪಡೆದಿದ್ದೀರೆಂದು) ಸಂದೇಶವನ್ನು ಕಳುಹಿಸಿ ಎಚ್ಚರಿಕೆಯನ್ನು ನೀಡುತ್ತದೆ.
- ಕ್ರೆಡಿಟ್ ಕಾರ್ಡಿನಲ್ಲಿ ಸಾಮಾನ್ಯವಾಗಿ ತೆಗೆದುಕೊಳ್ಳುವ ಹಣಕ್ಕಿಂತ ಜಾಸ್ತಿ ತೆಗೆದುಕೊಂಡಲ್ಲಿ ತಕ್ಷಣವೇ ನೀವು ಕ್ರೆಡಿಟ್ ಕಾರ್ಡಿನಿಂದ ತೆಗೆಯಲು ಬಯಸಿದ್ದೀರಾ ಎಂದು ನಿಮಗೊಂದು ಕರೆ ಬಂದೀತು. ನಿಮ್ಮ ಸಮ್ಮತಿಯಿಂದ ಮಾತ್ರ ನೀವು ಹಣ ತೆಗೆಯಬಹುದು.
- ಸಿಬಿಲ್‌ನಿಂದ ಹೇಗೋ ನಿಮ್ಮ ಉದರಿ ಶ್ರೇಯಾಂಕವನ್ನು (ಕ್ರೆಡಿಟ್ ಸ್ಕೋರ್) ಪಡೆದುಕೊಳ್ಳುವ ಹಲವಾರು ಫೈನಾನ್ಸ್ ಕಂಪನಿಗಳು ನಿಮ್ಮ ಕ್ರೆಡಿಟ್ ಅರ್ಹತೆಯನ್ನು ಅಂದಾಜಿಸಿ ನೀವು ಕೇಳದೇ ಇದ್ದರೂ, ನಿಮಗೆ ದಿನಾಲೂ ಕರೆ ಮಾಡುವುದು, ಸಾಲದ/ ಓವರ್‌ಡ್ರಾಫ್ಟ್ ಮಿತಿಯನ್ನು ಮಂಜೂರು ಮಾಡುವುದು ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಿಮ್ಮ ಮನೆಬಾಗಿಲಿಗೇ ಕ್ರೆಡಿಟ್ ಕಾರ್ಡ್ ಕಳುಹಿಸುವುದು ಇವೆಲ್ಲವೂ ಕೃಬು ಕೈವಾಡವೇ.
- ಹಣಕಾಸು ವ್ಯವಹಾರ ಎಷ್ಟೇ ಸಣ್ಣ ಪ್ರಮಾಣದ್ದಿರಲಿ ಅಥವಾ ದೊಡ್ಡ ಪ್ರಮಾಣದ್ದಿರಲಿ, ಯುಪಿಐ ಸೌಲಭ್ಯ ಬಳಸಿ ಕ್ಯುಆರ್ ಕೋಡ್ ಅಥವಾ ಮೊಬೈಲ್ ಸಂಖ್ಯೆಯ ಮೂಲಕ ಹಣ ವರ್ಗಾವಣೆ ಮಾಡುವುದು, ಇತ್ತೀಚಿನ ಕೆಲವರ್ಷಗಳ ಹಿಂದೆ ಇಂತಹ ಸೌಲಭ್ಯ ನಮ್ಮ ಕಲ್ಪನೆಗೂ ಮೀರಿದ್ದೇ ಆಗಿತ್ತು.

ಮುನ್ಸೂಚಕ ವಿಶ್ಲೇಷಣೆ ((Predicitive Analytics)

ಕೃತಕ ಬುದ್ಧಿಮತ್ತೆಯ ಮುಂದುವರಿದ ಭಾಗವಾಗಿ, ಮುನ್ಸೂಚಕ ವಿಶ್ಲೇಷಣೆ (Predicitive Analytics – PA) ಮುಖಾಂತರ ಮುಂದೆ ಬರಬಹುದಾದ ಗ್ರಾಹಕರನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಪ್ರಾಯಶಃ ನಾವೆಲ್ಲರೂ ಎಐ ಮತ್ತು ಪಿಎಗಳ ಅತೀ ಬುದ್ಧಿವಂತಿಕೆಯ ಜಾಲಕ್ಕೆ ಸಿಲುಕಿರುವುದನ್ನು ಗುರುತಿಸಬಹುದು.

ಫೇಸ್ಬುಕ್, ಇನ್‌ಸ್ಟಾಗ್ರಾಂ ಇತ್ಯಾದಿ ಸಮೂಹ ಮಾಧ್ಯಮಗಳಲ್ಲಿ ನೀವು ಏನನ್ನು ನೋಡಬಯಸುತ್ತೀರೋ ಅಥವಾ ನಿಮ್ಮ ಅಪೇಕ್ಷೆ ಏನಿದೆಯೋ ಅದನ್ನು ಮುನ್ಸೂಚಕ ವಿಶ್ಲೇಷಣೆ ಮುಖಾಂತರ ತಿಳಿದುಕೊಂಡು, ಅದೇ ತರಹದ ಫೀಡ್‌ಗಳನ್ನು ನಿಮ್ಮ ವೈಯಕ್ತಿಕ ಖಾತೆಗಳಲ್ಲಿ ನೀವು ರೋಸಿಹೋಗುವಷ್ಟರಮಟ್ಟಿಗೆ ತುಂಬಿಸುವುದು. ನೀವು ಏನು ಮಾಡಿದರೂ ಅದನ್ನು ಕಿತ್ತುಹಾಕಲು ಸಾಧ್ಯವಾಗದೆ ಇರುವುದು. ಇದನ್ನು ನೀವು ಅನುಭವಿಸಿರಬೇಕು. ಅಮೆಜಾನ್, ಫ್ಲಿಪ್‌ಕಾರ್ಟ್‌ಗಳು ಇದಕ್ಕೆ ಹೊರತಾಗಿಲ್ಲ.

ನೀವು ಅಥವಾ ನಿಮ್ಮ ಮೊಬೈಲ್ ಯಾವುದಾದರೂ ಆಟೋಮೊಬೈಲ್ ಡೀಲರ್ ಬಳಿ ಸುಳಿದಾಡಿದರೆ, ಮರು ಕ್ಷಣದಲ್ಲಿಯೇ ಹಲವಾರು ಆಟೋಮೊಬೈಲ್ ಕಂಪನಿಗಳಿಂದ ಕಾರುಗಳ ವಿವರ, ಅವರು ಕೊಡಬಹುದಾದ ಸೇವೆಗಳ ವಿವರ, ಯಾವ ಬ್ಯಾಂಕಿನಲ್ಲಿ ಸಾಲ ಸಿಗಬಹುದು ಎಂಬಿತ್ಯಾದಿ ವಿವರಗಳೆಲ್ಲವೂ ತಕ್ಷಣವೇ ನಿಮ್ಮ ಮೊಬೈಲ್ ಅಥವಾ ಇಂಟರ್‌ನೆಟ್ ಖಾತೆಯಲ್ಲಿ ಬಂದಾಗಿರುತ್ತದೆ.

ಮುಂದಿನ ದಿನಗಳಲ್ಲಿ, ನೀವು ಒಂದು ಬ್ಯಾಂಕಿನಿಂದ ಮನೆ ಸಾಲ ತೆಗೆದುಕೊಂಡಿರೆಂದರೆ, ಅದರ ಹಿಂದೆಯೇ ಮನೆ ಕಟ್ಟಲು ಬೇಕಾದ ಇಂಜಿನಿಯರಿಂಗ್, ಆರ್ಕಿಟೆಕ್ಟ್ ಸೌಲಭ್ಯದಿಂದ ಆರಂಭಿಸಿ, ಇಟ್ಟಿಗೆ, ಮರಳು ಸಿಮೆಂಟ್ ಸರಬರಾಜು, ಸಿವಿಲ್ ಕಾಮಗಾರಿ ಕಾಂಟ್ರಾಕ್ಟರುಗಳ ಸೇವೆ, ಎಲೆಕ್ಟ್ರೀಷಿಯನ್, ಪ್ಲಂಬರ್, ಪೇಂಟಿಂಗ್ ಕುರಿತಾದ ಮಾಹಿತಿ, ಇಂಟೀರಿಯರ್ಸ್ ಬಗೆಗಿನ ತಿಳುವಳಿಕೆ ಎಲ್ಲವೂ ನಿಮ್ಮನ್ನು ಹುಡುಕಿಕೊಂಡು ಬಂದರೆ ಅಚ್ಚರಿಯೇನಿಲ್ಲ. ಅದರಲ್ಲೂ, ನೀವು ತೆಗೆದುಕೊಳ್ಳುವ ಸಾಲದ ಮೇಲೆ ಅದನ್ನು ವರ್ಗೀಕರಿಸಿ ಸಾಮಾನ್ಯ ಸಾಲವೋ, ಮಧ್ಯಮ ವರ್ಗದವರೋ, ಶ್ರೀಮಂತ ವರ್ಗವೋ ಎಲ್ಲವನ್ನೂ ಕೃತಕ ಬುದ್ಧಿಮತ್ತೆ ಮತ್ತು ಮುನ್ಸೂಚಕ ವಿಶ್ಲೇಷಣೆ ಮೂಲಕ ತೀರ್ಮಾನಿಸಿ ಅದಕ್ಕೆ ತಕ್ಕಂತೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದು ನಿಶ್ಚಿತ.

ಕೃತಕ ಬುದ್ಧಿಮತ್ತೆಯ ಮುನ್ಸೂಚಕ, ಸೂಚನಾತ್ಮಕ ಮತ್ತು ನಿರ್ಣಾಯಕ ಮಾದರಿಗಳು (Predictive, Prescriptive, Deterministic Models) ಬ್ಯಾಂಕಿಂಗ್ ವ್ಯವಹಾರ, ಗ್ರಾಹಕ ಸೇವೆ ಮುಂತಾದ ಕ್ಷೇತ್ರಗಳಲ್ಲಿ ಬಹುದೊಡ್ಡ ಮುನ್ನಡೆ ಸಾಧಿಸಲು ಅನುಕೂಲಕರ. ಇದಕ್ಕಾಗಿ ಗಣಕದಿಂದ ಮಾಹಿತಿ ಕೇಳುವ ಚಾಕಚಕ್ಯತೆ ಬೆಳೆಸಿಕೊಂಡಿರುವ ಸ್ವಾಭಾವಿಕ ಬುದ್ಧಿಮತ್ತೆಯ ಮಾನವ ಸಂಪನ್ಮೂಲವನ್ನು ಸಹ ಬೆಳೆಸಬೇಕಾಗುತ್ತದೆ. ನಂತರವೇ ಕೃತಕ ಬುದ್ಧಿಮತ್ತೆಯು ತನ್ನ ಪ್ರಭಾವ ತೋರಿಸಬಲ್ಲುದು.

ಈಗ ಕೃತಕ ಬುದ್ಧಿಮತ್ತೆ ಬಳಸಿ ಕತೆ, ಕವಿತೆ ಬರೆಯಬಹುದು, ಮಕ್ಕಳು ಹೋಂವರ್ಕ್, ಪ್ರಾಜೆಕ್ಟ್ ಮಾಡಬಹುದು. ಇದಕ್ಕೆ ಬಳಕೆಯಾಗುವುದು ಸಾರ್ವಜನಿಕ ತಾಣದಲ್ಲಿ (Public Domain) ಸಿಗುವ ದತ್ತಾಂಶ. ಆದರೆ ಬ್ಯಾಂಕುಗಳಿಗೆ ಈ ರೀತಿಯ ದತ್ತಾಂಶಗಳಿಂದ ಉಪಯೋಗವಾಗದು. ಅದರ ಗ್ರಾಹಕರ ಬಹಳ ಕಾಲದ, ವಿವರವಾದ, ಬಹು ದೊಡ್ಡ ಹಾಗೂ ಪ್ರತಿ ಕ್ಷಣವೂ ಅಪ್ಡೇಟ್ ಆಗುವ ದತ್ತಾಂಶವಿದ್ದರೆ ಮಾತ್ರ ಕೃತಕ ಬುದ್ಧಿಮತ್ತೆಯು ಅರ್ಥಪೂರ್ಣ ಸಾಧನವಾಗಬಲ್ಲುದು. ಇದರ ರಕ್ಷಣೆ ಸಹಾ ಬ್ಯಾಂಕಿನ ಬಹು ದೊಡ್ಡ ಜವಾಬ್ದಾರಿ.

ಕೃತಕ ಬುದ್ಧಿಮತ್ತೆ – ಎದುರಾಗುವ ಸಮಸ್ಯೆಗಳು

ಕೃತಕ ಬುದ್ಧಿಮತ್ತೆಯು ಹೇಗೆ ಬ್ಯಾಂಕುಗಳಲ್ಲಿ ನಿಖರವಾದ, ದಕ್ಷ, ಗ್ರಾಹಕರ ಸೇವೆಗಳಲ್ಲಿ ಬದಲಾವಣೆಗಳನ್ನು ತರುತ್ತದೆಯೋ, ಹಾಗೆಯೇ ಹಲವಾರು ಸಮಸ್ಯೆಗಳನ್ನೂ ಹುಟ್ಟುಹಾಕುತ್ತದೆ. ಆ ಸಮಸ್ಯೆಗಳನ್ನು ನಾಜೂಕಾಗಿ

ಬಗೆಹರಿಸಿಕೊಳ್ಳುವುದು ಸಹ ಅಷ್ಟೇ ಮುಖ್ಯ. ಪ್ರಾಯಶಃ ಕೆಲವು ಉದಾಹರಣೆಗಳ ಸಹಿತ ವಿಚಾರವನ್ನು ಮಂಡಿಸಿದಾಗ ಅದರ ಪರಿಣಾಮಗಳ ತೀವ್ರತೆಯ ಅಂದಾಜು ಆಗಬಹುದು.

ಉದ್ಯೋಗದಲ್ಲಿ ಕಡಿತ:

ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿಕೊಂಡು ಉದ್ಯೋಗದಲ್ಲಿ ದತ್ತಾಂಶ ಸಂಗ್ರಹಣೆ, ದತ್ತಾಂಶ ವಿಶ್ಲೇಷಣೆ ಹಾಗೂ ವ್ಯವಹಾರ ಪ್ರಕ್ರಿಯೆಗಳನ್ನು ಆಂತರಿಕ ಲೆಕ್ಕಾಚಾರ ನಿರ್ವಹಣೆ, ಗ್ರಾಹಕರ ಸೇವೆಗಳನ್ನು ಇತ್ತೀಚಿನ ದಿನಗಳಲ್ಲಿ ಒಂದಾದ ಮೇಲೊಂದರಂತೆ ಬ್ಯಾಂಕುಗಳು ಆರಂಭಿಸಿವೆ. ಇದರಿಂದಾಗಿ ಸಾಮಾನ್ಯ ಕೆಲಸಗಳಾದ ದತ್ತಾಂಶ ನಮೂದು (Data entry), ವ್ಯವಸ್ಥಾಪನ ಮಾಹಿತಿ ತಃಖ್ತೆಗಳು (Management Information System Statements) ದತ್ತಾಂಶ ವಿಶ್ಲೇಷಣೆ ಈ ಎಲ್ಲ ಕಾರ್ಯಗಳಲ್ಲಿಯೂ ನಿರತರಾಗಿದ್ದ ಉದ್ಯೋಗಿಗಳು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುವ ಅಥವಾ ಬದಲಿಸಿಕೊಳ್ಳುವ ವಿಚಾರವನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ –

- ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಿಕೊಂಡು ಹಲವು ಪ್ರಕ್ರಿಯೆಗಳನ್ನು ಸ್ವಯಂಚಾಲನ (Automation)ಗೊಳಿಸಲಾಗಿದೆ. ಕಾಲ್ ಸೆಂಟರ್‌ಗಳಿಂದ 24*7 ರಂತೆ ಗ್ರಾಹಕ ಸೇವೆಯನ್ನು ಒದಗಿಸಲಾಗುತ್ತಿದೆ. ಚಾಟ್‌ಬೋಟುಗಳನ್ನು ಉಪಯೋಗಿಸಿಕೊಂಡು ಗ್ರಾಹಕರ ಸಿದ್ದ ಪ್ರಶ್ನೆಗಳಿಗೆ ಉತ್ತರವನ್ನು ನೀಡಲಾಗುತ್ತಿದೆ. ಇದರ ಪರಿಣಾಮವಾಗಿ ಸ್ಟೇಟ್ ಬ್ಯಾಂಕು ತನ್ನ ಹೆಚ್ಚಿನ ಉದ್ಯೋಗಿಗಳಿಗೆ ಬದಲಿ ಕಾರ್ಯವ್ಯವಸ್ಥೆ ಮಾಡಬೇಕಾಯಿತು.
- 2018ರಲ್ಲಿಯೇ ಬ್ಯಾಂಕ್ ಆಫ್ ಅಮೆರಿಕ 'ಏರಿಕಾ' ಎಂಬ ಚಾಟ್‌ಬೋಟನ್ನು ಆರಂಭಿಸಿದಾಗ ಗ್ರಾಹಕ ಸೇವಾಕಾರ್ಯದಲ್ಲಿ ತೊಡಗಿದ್ದ ಹಲವು ಉದ್ಯೋಗಿಗಳು ತಮ್ಮ ಕೆಲಸ ಕಳೆದುಕೊಳ್ಳಬೇಕಾಯಿತು.
- ಹೆಚ್‌ಎಸ್‌ಬಿಸಿ ಬ್ಯಾಂಕು 2020ರಲ್ಲಿ ಕೃತಕ ಬುದ್ದಿಮತ್ತೆಯನ್ನು ಬಳಸಿಸಿಕೊಂಡು ಸ್ವಯಂಚಾಲನ/ ಆಟೋಮೇಶನ್ ಹಾಗೂ ಇತರ ಪ್ರಕ್ರಿಯೆಗಳನ್ನು ಆರಂಭಿಸಿದಾಗ ಸುಮಾರು 35,000 ಉದ್ಯೋಗಿಗಳು ಕೆಲಸವನ್ನು ಕಳೆದುಕೊಳ್ಳಬೇಕಾಯಿತು.

ಭದ್ರತೆಯ ಅಪಾಯ (Security Risk):

ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಸೈಬರ್ ವಂಚಕರು ತಮ್ಮದೇ ಆದ ಸಂಕೀರ್ಣ ಪ್ರಕ್ರಿಯೆಗಳಿಂದ ದತ್ತಾಂಶವನ್ನು ಹುಡುಕಾಡಿ, ಭದ್ರತೆಯನ್ನು ಬೇಧಿಸಿ ಗ್ರಾಹಕರ ಖಾತೆಗಳಿಗೆ ಲಗ್ಗೆ ಇಡಬಹುದು. ಹಾಗಾಗಿ ಬ್ಯಾಂಕುಗಳು ಇದನ್ನು ತಡೆಯಲು ಹೆಚ್ಚಿನ ಸೆಕ್ಯುರಿಟಿ ಅಪ್ಡೇಟ್ ಮಾಡಿಕೊಂಡು ಗ್ರಾಹಕರಿಗೆ ಹೆಚ್ಚಿನ ತಿಳವಳಿಕೆ ನೀಡುವಲ್ಲಿ ಸಫಲರಾಗಬೇಕಾಗುತ್ತದೆ. ಉದಾಹರಣೆಗೆ –

- 2020ರಲ್ಲಿ ಯೆಸ್ ಬ್ಯಾಂಕಿನ ಗ್ರಾಹಕರ ವೈಯಕ್ತಿಕ ಮಾಹಿತಿಯ ಸೋರಿಕೆಯಾಯಿತು. ಇದನ್ನು ನೇರವಾಗಿ ಡೇಟಾ ಸೋರಿಕೆ ಎಂದು ಹೇಳದಿದ್ದರೂ, ಆದದ್ದಂತೂ ನಿಜ ಹಾಗೂ ಬ್ಯಾಂಕು ಸಂಕಷ್ಟದಲ್ಲಿ ಸಿಲುಕಿದ್ದೂ ನಿಜ.

- ದಿನಬೆಳಗಾದರೆ, 'ಬ್ಯಾಂಕುಗಳಿಂದ ಕರೆ ಮಾಡುತ್ತಿದ್ದೇವೆ' ಎಂದು ಹಲವು ಗ್ರಾಹಕರಿಗೆ ಸೈಬರ್ ವಂಚಕರಿಂದ ಪದೇಪದೇ ಕರೆಗಳು ಬರುತ್ತಲೇ ಇರುತ್ತವೆ. ಏನೇನೋ ಹೇಳುತ್ತಿರುತ್ತಾರೆ.
  - ~ ನಿಮ್ಮ ಕೆವೈಸಿ ನವೀಕರಿಸಬೇಕು.
  - ~ ನಿಮ್ಮ ಖಾತೆಗೆ ಹಣ ಬಂದಿದೆ
  - ~ ನಿಮಗೆ ಪ್ರೈಜ್ ಮನಿ ಬಂದಿದೆ
  - ~ ನಮ್ಮ ಕಂಪನಿಯು ನಿಮ್ಮನ್ನು ಆಯ್ಕೆ ಮಾಡಿದೆ.... ಇನ್ನು ಏನೇನೋ?

ಇಂತಹ ಸೈಬರ್ ವಂಚಕರನ್ನು, ಸಾಮಾನ್ಯ ವಂಚಕರನ್ನು ತಡೆಗಟ್ಟುವುದು ಬ್ಯಾಂಕುಗಳಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ತಾರತಮ್ಯ ಮತ್ತು ಪೂರ್ವಗ್ರಹ (Discrimination and Bias):

ಸಿಬಿಲ್ ಸ್ಕೋರಿಂಗ್ ಉಪಯೋಗಿಸಿಕೊಂಡು ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆಯ ಮುಖಾಂತರವೇ ದತ್ತಾಂಶ ಸಂಗ್ರಹಿಸಿ, ಪರಿಷ್ಕರಿಸಿ ಸಾಲ ಮಂಜೂರು ಮಾಡಿದಲ್ಲಿ ಅದು ತಪ್ಪಾಗುವ ಅಥವಾ ಅಸಹಜ ಅಪೂರ್ಣ ತೀರ್ಮಾನವನ್ನು ಕೊಡುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಯಾವುದಾದರೂ ಒಂದು ಸಣ್ಣ ಡೇಟಾ ಚೇಂಜ್ ಲಿಂಕ್‌ನಲ್ಲಿ ತಪ್ಪಾಯ್ತು ಎಂದಾದರೆ ಸಂಪೂರ್ಣ ತೀರ್ಮಾನವೇ ತಲೆಕೆಳಗಾಗುತ್ತದೆ.

ಕೆಲವು ವರ್ಷಗಳ ಹಿಂದೆ ಹೆಚ್‌ಡಿಎಫ್‌ಸಿ ಬ್ಯಾಂಕಿನ ಕೆಲವು ನಿರ್ಣಯಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಮೇಲ್ವಿಚಾರಣೆ ನಡೆಸಬೇಕಾಯಿತು. ಪರಿಸ್ಥಿತಿ ಅಂತಹ ಅನಿವಾರ್ಯತೆಯನ್ನು ಹೊಂದಿತ್ತು. ದತ್ತಾಂಶ ಪರಿಪೂರ್ಣವಾಗಿಲ್ಲದೆ ಇದ್ದುದೇ ಇದಕ್ಕೆ ಕಾರಣವಾಗಿತ್ತು. ಅದರಲ್ಲೂ ತಾಂತ್ರಿಕ ದತ್ತಾಂಶ (ಟೆಕ್ನಿಕಲ್ ಡೇಟಾ) ಬದಲಾದಾಗ, ಅದರ ತೀರ್ಮಾನವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಪಾರದರ್ಶಕತೆ ಮತ್ತು ಜವಾಬ್ದಾರಿ ಇಲ್ಲದೆ ಬ್ಯಾಂಕಿನಲ್ಲಿ ತೀರ್ಮಾನಗಳು ಸುಲಭವಲ್ಲ.

ನೈತಿಕ ಕಾಳಜಿಗಳು (Ethical Concerns):

ಸುಮಾರು 2012ರಲ್ಲಿ 'ನೈಟ್ ಕ್ಯಾಪಿಟಲ್ ಗ್ರೂಪ್' ಎಂಬ ಸ್ಟಾಕ್ ಟ್ರೇಡಿಂಗ್ ಕಂಪನಿಯು ಷೇರು ಮಾರುಕಟ್ಟೆಯಲ್ಲಿ ಹಲವು ಷೇರುಗಳ ಬೆಲೆಗಳನ್ನೇ ವ್ಯತ್ಯಯ ಮಾಡಿ ಇಡೀ ಷೇರು ಮಾರುಕಟ್ಟೆಯನ್ನೇ ಬುಡಸಹಿತ ಅಲುಗಾಡಿಸಿತ್ತು.

ಕಾರ್ಯಾಚರಣೆಯ ನಷ್ಟಸಂಭಾವ್ಯತೆ (Operational Risk):

ದತ್ತಾಂಶವೂ ಸರಿ ಇದೆ, ಪ್ರಕ್ರಿಯೆಯೂ ಇದೆ. ಆದರೆ ತಾಂತ್ರಿಕ ದೋಷದಿಂದ ತಪ್ಪಾಗಿ ದತ್ತಾಂಶ ನಮೂದಿಸಿರುವ (ಡೇಟಾ ಫೀಡ್) ಕಾರಣದಿಂದಾಗಿ ಇನ್ನಾವುದೋ ಅರ್ಥವಾಗದಿರುವ ಅಂಶಗಳಿಂದ ತೀರ್ಮಾನಗಳು ನ್ಯಾಯಯುತವಾಗದೆ ಇರಬಹುದು. ಉದಾಹರಣೆಗೆ –

- 2018ರಲ್ಲಿ ಟಿಎಸ್‌ಬಿ ಬ್ಯಾಂಕ್, ಯುನೈಟೆಡ್ ಕಿಂಗ್‌ಡಂ(ಯುಕೆ)ನಲ್ಲಿ ಗ್ರಾಹಕರು ತಮ್ಮ ಖಾತೆಯನ್ನು ಉಪಯೋಗಿಸಿಕೊಳ್ಳಲು ಆಗದಿರುವಂತಹ ಸಮಸ್ಯೆ ಉದ್ಭವವಾಗಿತ್ತು. ಅದಕ್ಕೆ ಕಾರಣ ಕೃತಕ ಬುದ್ಧಿಮತ್ತೆಯಲ್ಲಿದ್ದ ದತ್ತಾಂಶದ ತಪ್ಪುಗಳೇ ಆಗಿತ್ತು.
- 2019ರಲ್ಲಿ ಒಮ್ಮೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿಯೂ ಕೃತಕ ಬುದ್ಧಿಮತ್ತೆಯ ಕಾರಣದಿಂದ ತಾಂತ್ರಿಕ ವ್ಯವಸ್ಥೆಯ ವೈಫಲ್ಯವಾಗಿ (System Failure) ಬ್ಯಾಂಕಿನ ಗ್ರಾಹಕರಿಗೆ ಕೆಲವು ದಿನಗಳ ಕಾಲ ಬಹಳ ತೊಂದರೆಯಾಗಿತ್ತು. ಕೃತಕ ಬುದ್ಧಿಮತ್ತೆಯ ಅತಿಯಾದ ಬಳಕೆಯಿಂದ, ಕಾರ್ಯಾಚರಣೆಯ ದತ್ತಾಂಶ (ಆಪರೇಷನ್ ಡೇಟಾ) ಇಲ್ಲವಾದಲ್ಲಿ ಬಹಳಷ್ಟು ಸಮಸ್ಯೆಗಳು ಉಂಟಾಗುವುದಂತೂ ಸತ್ಯ.

ಗ್ರಾಹಕರ ನಂಬಿಕೆ:

ಬ್ಯಾಂಕು ಪೂರ್ತಿಯಾಗಿ ಕೃತಕ ಬುದ್ಧಿಮತ್ತೆಯನ್ನು ನಂಬಿಕೊಂಡಾಗ ಗ್ರಾಹಕರಿಗೂ ಅನುಮಾನಗಳು ಉಂಟಾಗಬಹುದು ಅದರಲ್ಲೂ ಸಾಲ, ಮುಂಗಡಗಳನ್ನು ನೀಡುವಾಗ, ಅತಿಯಾಗಿ ನಂಬಲೇಬಾರದು. ಒಟ್ಟಿನಲ್ಲಿ ಎಷ್ಟೇ ಅನುಕೂಲಗಳಿದ್ದರೂ ಕೃತಕ ಬುದ್ಧಿಮತ್ತೆಯಿಂದ ಉಂಟಾಗಬಹುದಾದ ಸಮಸ್ಯೆಗಳ ಕುರಿತು ಎಚ್ಚರಿಕೆ. ಮುಂಜಾಗ್ರತೆ ವಹಿಸಲೇಬೇಕು.ಉದಾಹರಣೆಗೆ –

- 2018ರಲ್ಲಿ ಪುಣೆಯ ಕಾಸ್ಮೋಸ್ ಬ್ಯಾಂಕಿನಿಂದ ಹ್ಯಾಕರ್‌ಗಳು ಬ್ಯಾಂಕಿನ ತಂತ್ರಾಂಶ ವ್ಯವಸ್ಥೆಗೆ (ಸಾಫ್ಟ್‌ವೇರ್ ಸಿಸ್ಟಂ) ಮಾಲ್ವೇರ್ ಇಂಜೆಕ್ಷನ್ ನೀಡಿ, ಕ್ರೆಡಿಟ್, ಡೆಬಿಟ್ ಕಾರ್ಡಿನಿಂದ ಎರಡೇ ದಿನಗಳಲ್ಲಿ 28 ದೇಶಗಳಿಂದ ವ್ಯವಹಾರ ಮಾಡಿ 95 ಕೋಟಿ ರೂಪಾಯಿಗಳಷ್ಟು ವಂಚನೆ ಎಸಗಿದ್ದರು.
- 2019ರಲ್ಲಿ ಎಸ್ ಬ್ಯಾಂಕ್ ಗ್ರಾಹಕರ ಡೇಟಾ ಸೋರಿಕೆಯಿಂದಾಗಿ ಸೈಬರ್ ವಂಚಕರು ಗ್ರಾಹಕರ ಖಾತೆಗಳಿಂದ ಸಾಕಷ್ಟು ಹಣವನ್ನು ದೋಚಿದರು.
- ಸಿಟಿ ಯೂನಿಯನ್ ಬ್ಯಾಂಕಿನ ಸ್ವಿಫ್ಟ್ ಸಿಸ್ಟಮ್‌ನಿಂದ ಕೇವಲ ಮೂರು ವ್ಯವಹಾರ ಮಾಡಿ, ಮೂರೇ ಮೂರು ಲೆಟರ್ ಆಫ್ ಕ್ರೆಡಿಟ್ ರಚಿಸಿ, ದುಬೈ, ಟರ್ಕಿ ಮತ್ತು ಚೀನಾ ದೇಶಗಳೊಂದಿಗೆ ನಕಲಿ ವ್ಯವಹಾರ ನಡೆಸಿ ಸುಮಾರು ಎರಡು ಮಿಲಿಯನ್ ಡಾಲರ್‌ನಷ್ಟು ಮೋಸ ಮಾಡಿದ್ದರು. ಕ್ರಿಮಿನಲ್‌ಗಳು ನಕಲಿ ಮುನ್ಸೂಚಕ ವಿಶ್ಲೇಷಣೆಯನ್ನು (Fake Predictive Analysis) ಸಿದ್ಧಪಡಿಸಿ ಅದನ್ನು ಬ್ಯಾಂಕ್ ಖಾತೆಗಳಿಗೆ ಲಿಂಕ್ ಮಾಡಿ, ಅದು ಬ್ಯಾಂಕಿನ ಗಮನಕ್ಕೆ ಬರುವುದರೊಳಗಾಗಿಯೇ ಸ್ವಾಪ್ ಮಾಡಿ ಹಣವನ್ನು ಎಗರಿಸಿದ್ದರು.

ಫೇಕ್ ಬ್ಯಾಂಕ್ ಹಾಕರ್ಸ್‌ಗಳು ಇಂದಿಗೂ ಗ್ರಾಹಕರಿಗೆ ಕರೆಮಾಡಿ ಗ್ರಾಹಕರ ವೈಯಕ್ತಿಕ ಮಾಹಿತಿಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಓಟಿಪಿ, ಪಿನ್ಸ್, ಸಿವಿವಿ, ಪಾಸ್‌ವರ್ಡ್, ಹುಟ್ಟಿದ ದಿನಾಂಕ ಎಲ್ಲವನ್ನೂ ಕೇಳಿ ಮೋಸ ಮಾಡಲು ಬಹಳಷ್ಟು ಪ್ರಯತ್ನಗಳನ್ನು ಸದಾ ಮಾಡುತ್ತಲೇ ಇರುತ್ತಾರೆ. ಇದೂ ಅಲ್ಲದೆ, ಫೇಸ್ಬುಕ್, ಇನ್‌ಸ್ಟಾಗ್ರಾಮ್ ಇತ್ಯಾದಿ ಸಮೂಹ ಮಾಧ್ಯಮಗಳಲ್ಲಿ ಪಾಪ್‌ಅಪ್ ಆಗುವ ಲಿಂಕ್‌ಗಳನ್ನು ಕ್ಲಿಕ್ ಮಾಡಿದಲ್ಲಿ ವ್ಯಕ್ತಿಯ ಮೊಬೈಲ್ ನಲ್ಲಿರುವ ಎಲ್ಲ ವೈಯಕ್ತಿಕ ವಿವರಗಳು ಸೈಬರ್ ಕ್ರಿಮಿನಲ್‌ಗಳ ಪಾಲಾಗುವುದರಲ್ಲಿ ಆಶ್ಚರ್ಯವಿಲ್ಲ.

ಆದುದರಿಂದ ಬ್ಯಾಂಕುಗಳು ಎಷ್ಟೇ ಪ್ರಯತ್ನಿಸಿದರೂ, ಅವರಿಗಿಂತ ಹೆಚ್ಚಿನ ಜಾಣ್ಮೆಯನ್ನು ಸೈಬರ್ ವಂಚಕರು ಪ್ರದರ್ಶಿಸುತ್ತಾರೆಂಬುದು ಅತಿಶಯೋಕ್ತಿಯಲ್ಲ.

ಏನೇ ಆದರೂ, ಕೃತಕ ಬುದ್ಧಿಮತ್ತೆಯ ಅತಿಬಳಕೆಯು ಸೃಷ್ಟಿಸಬಹುದಾದ ಸಮಸ್ಯೆಗಳು, ವಂಚನೆಗಳ ಬಗ್ಗೆ ಬ್ಯಾಂಕುಗಳು ಮಾತ್ರವಲ್ಲದೆ ಗ್ರಾಹಕರು, ಸಾರ್ವಜನಿಕರು ಅತಿ ಜಾಗರೂಕರಾಗಿರುವುದು ಮುಖ್ಯ. ಈ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕುಗಳೂ ತಮ್ಮ ಗ್ರಾಹಕರಿಗೆ ಹಣಕಾಸು ಸಾಕ್ಷರತೆಯ ಮೂಲಕ ಶಿಕ್ಷಣ ನೀಡಿದಂತೆಯೇ, ಸೈಬರ್ ವಂಚನೆಗಳನ್ನು ಕುರಿತು ಸವಿವರವಾದ ಮಾಹಿತಿ ನೀಡಿ ಸದಾ ಜಾಗೃತಿ ಮೂಡಿಸುವುದು ಬಹಳ ಮುಖ್ಯವಾಗಿ ಹಾಗೂ ನಿರಂತರವಾಗಿ ಆಗಬೇಕಾದ ಕೆಲಸ.

***

ಇಲ್ಲಿಂದ ಮುಂದೆ.....

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ 225

11 ಮೇ 2024

ದಾಸೋಹಿಗಳು ಪ್ರಸ್ತುತಪಡಿಸಿದ ಸ್ವರಚಿತ

~ ಲೇಖನಗಳು

~ ಕತೆ

~ ಕವನಗಳು

~ ಪ್ರವಾಸ ಕಥನಗಳು

~ ಅಧ್ಯಕ್ಷೀಯ ನುಡಿಗಳು

ಇತ್ಯಾದಿ...

ಕತೆ

ಲಂಕೆಯ ನಿಷ್ಕಳಂಕಳು

– ಸ್ನೇಹ ಶಶಿಧರ್

ಮದುವೆ...! ಈ ಸಂದರ್ಭದಲ್ಲಿ ನನ್ನ ನೆನಪಿನ ಕೋಡಿ ಒಡೆದು ಒಂದೊಂದು ಪುಟವು ತೆರೆದುಕೊಂಡಿತು.

ಸುಮಾರು ಐವತ್ತು ವರ್ಷದ ಹಿಂದೆ... ನಾನು ನನ್ನ ಅಣ್ಣಂದಿರು ಆಟವಾಡುತ್ತಿದ್ದೆವು. ಅಪ್ಪ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಹೀಗೆ ಆಡುವಾಗ, ನನ್ನ ಅಣ್ಣ ದುಂಧುಭಿ ನನಗೆ "ಕಪ್ಪೆ-ಕಪ್ಪೆ" ಎಂದು ರೇಗಿಸಿದ. ನಾನು ಬಿಕ್ಕಿ ಬಿಕ್ಕಿ ಅಳಲು ಶುರುಮಾಡಿದೆ. ಅಮ್ಮ ಓಡಿ ಬಂದು ನನಗೇ ಸಮಾಧಾನ ಮಾಡಿದಳು. ನನ್ನ ಮನ ಒಲಿಸಲು ಸ್ವರ್ಗಕ್ಕೆ ಕರೆದುಕೊಂಡು ಹೋದಳು.

ಸ್ವರ್ಗದಲ್ಲಿ ಅಮ್ಮನ ರೀತಿ ಬೇರೆ ಅಪ್ಸರೆಯರೆಲ್ಲ ನನ್ನನ್ನು ಮುದ್ದಾಡಿದರು. ಅವರೆಲ್ಲ ಸೇರಿ ನನ್ನ ಜನ್ಮದ ಕಥೆ ಹೇಳಿದರು. ಪುಟ್ಟ ಮಗುವ ಮನಸ್ಸಿಗೆ ಅರ್ಥವಾಗಿದ್ದು- ಅಪ್ಪ ಅಮ್ಮ ಹೆಣ್ಣು ಬೇಕೆಂದು ಹಂಬಲಿಸಿ ನನ್ನನ್ನು ಜನ್ಮವಿತ್ತರಂತೆ. ಆ ಕಥೆಯ ಕೆಲವು ಪದಗಳು ನನ್ನ ಮನಸಿಗೆ ನಾಟಿತು – ಶಿವ – ಪಾರ್ವತಿ – ಶಾಪ – ಭಾವೀ – ಹನ್ನೆರಡು ವರ್ಷ – ಕಪ್ಪೆ...

ಕುತೂಹಲದಿಂದ ಪಾರ್ವತಿಯ ಕಾಣಲು ಕೈಲಾಸಕ್ಕೆ ಹೋದೆ. ಗಿರಿಜೆ ನನ್ನ ಕಂಡು, "ಅರೇ, ನೀನು ಹೇಮಾಳ ಮಗಳು ತಾನೇ? ಬಾರಮ್ಮ ಕಂದ. ಎಷ್ಟು ಚಂದವಾಗಿದ್ದೀಯ. ಬಾ, ನಿನಗೆ ಹಣ್ಣು ಕೊಡುವೆ." ಎಂದು ಪ್ರೀತಿ ತೋರಿದರು. ನನಗೂ ಅವರ ಮೇಲೆ ಗೌರವ ಹೆಚ್ಚಾಯಿತು. ಉಮಾ ಮಹೇಶ್ವರರು ನನಗೇ ಇಂತೆಂದರು, "ನೀನು ಧರ್ಮದ ದಾರಿಯಲ್ಲಿ ನಡೆ. ಒಬ್ಬ ಜಗದೇಕವೀರ ನಿನ್ನ ಕೈ ಹಿಡಿಯುವವನು. ಅವನು ನನ್ನ ಪರಮ ಭಕ್ತ. ಆದರೆ..."

ಆ ಮಹಾಬಲ ಏನೋ ಹೇಳುವಷ್ಟರಲ್ಲಿ ವಿಷ್ಣು ಅವರನ್ನು ತಡೆದರು. "ನಿನ್ನ ಹೆಸರು ಆ ಪಂಚಕನ್ಯೆಯರಲ್ಲಿ ಸೇರುವುದು ಅತ್ತೆಯಮ್ಮ" ಎಂದು ಗೇಲಿ ಮಾಡಿದರು. ಅತ್ತೆನಾ, ನಾನು? ಇಷ್ಟು ಚಿಕ್ಕ ಹುಡುಗಿ? ಏನೋ ದೊಡ್ಡವರ ಮಾತೇ ಅರ್ಥವಾಗದು. ಎಲ್ಲ ಒಗಟೊಗಟು!

ಅಮ್ಮ ನನ್ನನ್ನು ಹುಡುಕಿ ಅಲ್ಲಿಗೆ ಬಂದಳು. ನಾವು ನಮ್ಮ ಮನೆಗೆ ಹಿಂತಿರುಗಿದೆವು. ನನ್ನ ಅಪ್ಪ ಒಬ್ಬ ದೊಡ್ಡ ವಾಸ್ತು ಶಿಲ್ಪಿ. ಅವರ ಕೆಲಸದಲ್ಲಿ ಅವರನ್ನು ಮೀರಿಸುವವರು ಇನ್ನೊಬ್ಬರಿರಲಿಲ್ಲ. ದೊಡ್ಡ ದೊಡ್ಡ ರಾಜಮಹಾರಾಜರು ಅವರನ್ನು ಕಾಣಲು ಬರುತ್ತಿದ್ದರು. ಅಪ್ಪನೂ ಕೆಲಸದ ಪರವಾಗಿ ಏಳೇಳು ಲೋಕ ಸುತ್ತುತ್ತಿದ್ದರು. ಹೀಗೆ ಒಂದು ಬಾರಿ ಇಂದ್ರನು ತನ್ನ ಅರಮನೆ ನವೀಕರಿಸಲು ಕರೆದನಂತೆ. ದೇವಲೋಕಕ್ಕೆ ಹೋದಾಗ, ಅಮ್ಮನನ್ನು ಕಂಡು, ಇಬ್ಬರಲ್ಲಿ ಪ್ರೀತಿ ಹುಟ್ಟಿ, ಮದುವೆಯಾದರಂತೆ. ಅವರ ಸಂಗಮದ ಸಾಕ್ಷಿಯಾಗಿ ನನ್ನ ಅಣ್ಣಂದಿರು ಹಾಗೂ ನಾನು ಜನ್ಮ ತಾಳಿದೆವು.

ಅಂದು ನನ್ನ ಅಪ್ಪನಿಗೆ ರಾಕ್ಷಸ ರಾಜನ ಆಸ್ಥಾನದಿಂದ ಒಂದು ಕರೆ ಬಂದಿತ್ತು. ಆತನಿಗೆ ಒಂದು ರಾಜಧಾನಿ ಕಟ್ಟಬೇಕಿತ್ತು. ಹಿಂದೆಂದೂ ಕಟ್ಟಿರಬಾರದು, ಮುಂದೆಂದೂ ಕಟ್ಟಬಾರದು. ಅಷ್ಟು ವೈಭವದಿಂದ ಕೂಡಿರುವಂತಹ ಬಂಗಾರದ ಭವ್ಯ ರಾಜಭವನ. ಅಪ್ಪ ಈ ಕೆಲಸಕ್ಕೆ ಒಪ್ಪಿದ್ದರು. ದುಡ್ಡಿನ ಆಸೆಯಿಂದಲ್ಲ. ಆ ರಾಜನ ಮೇಲಿನ ಭಯದಿಂದ.

ಒಬ್ಬ ಹೆಣ್ಣು ಮಗಳಿಗೆ ಅಪ್ಪನೆಂದರೆ ಅರಿಂದಮ. ನಮ್ಮ ಕಲ್ಪನೆಯಲ್ಲೂ ನಮ್ಮ ತಂದೆ ಸೋಲುವುದು ಊಹಿಸಲಾರೆವು. ಅಪ್ಪ ಹೆದರಿದ್ದಾರೆಂದರೆ ಆ ವ್ಯಕ್ತಿಯ ಮೇಲೆ ಕೋಪ, ಹತಾಶೆ ಉಕ್ಕಲಾರಂಭಿಸಿತು. ಕಾಣಬೇಕು ಎಂದು ಹಂಬಲಿಸಿದೆ. ಅಪ್ಪನ ಕೆಲಸ ಮುಗಿಯುವ ಹಂತದಲ್ಲಿದ್ದಾಗ ಅವಕಾಶ ಒದಗಿಬಂತು. ಅವರೊಡನೆ ಲಂಕೆಗೆ ಮೊದಲಬಾರಿಗೆ ಹೋದೆ. ಕದ್ದು ಮುಚ್ಚಿ ಆ ಅಜಾತಶತ್ರುವನ್ನು ಕಾಣಲು ಮನ ತುಡಿಯುತ್ತಿತ್ತು. 'ಅವರು' ಬಂದರು. ಆ ತೇಜಸ್ಸು ನೋಡಲಾಗದೆ ತಲೆ ತಗ್ಗಿಸಿದೆ. ನನಗೆ ತಿಳಿಯದೆ ನಾನು ನಾಚಿ ನೀರಾಗಿ ಹೋಗಿದ್ದೆ. 'ಅವರು', "ಭಲೇ ಮಯಾಸುರ, ಭಲೇ! ನಿನ್ನ ನಿರ್ಮಾಣದ ಕೌಶಲ್ಯಕ್ಕೆ ನಾವು ಮಾರುಹೋದೆವು. ಏನು ಬೇಕೋ ಕೇಳು." ಎಂದರು. ನಾನು ನಾಚಿಕೆಯಿಂದ ಓಡಿ ಬಂದೆ.

ಕೈಲಾಸದಿಂದ ನನಗೆ ಕರೆ ಬಂದಿತ್ತು. ಒಂದು ಮಹತ್ಕಾರ್ಯಕ್ಕಾಗಿ ನನ್ನನ್ನು ಕರೆದೊಯ್ದರು. ಅಲ್ಲಿ ನನಗೆ ಆಶ್ಚರ್ಯ ಕಾದಿತ್ತು. ನನ್ನ ವಿವಾಹದ ಮಾತುಕತೆ ನಡೆದಿತ್ತು. ಶಿವನು ನನ್ನ ತಾಯಿಯನ್ನು ಕುರಿತು, "ರಾವಣ ನನ್ನ ಪರಮ ಭಕ್ತ. ನಮ್ಮ ಹುಡುಗಿಗೆ ತಕ್ಕ ವರ." ಎಂದರು. 'ಅವರ' ಹೆಸರು ಕೇಳಿ ನನ್ನ ಅಂಗಾಲು ಮಂಜಿನಲ್ಲಿ ರಂಗೋಲಿ ಹಾಕಿದವು. 'ಅವರು' ಬಂದರು.

"ಹೇ, ಶಿವನೆ! ನೋಡು ನನ್ನ ಭವ್ಯ ಅರಮನೆ ನಿರ್ಮಾಣವಾಯಿತು. ನನ್ನ ವರ್ಚಸ್ಸು ಏಳೇಳು ಲೋಕ ಪಸರಿಸಿದೆ. ಇಷ್ಟು ದೊಡ್ಡ ಸಾಮ್ರಾಜ್ಯಕ್ಕೆ ಗೌರಿಯೇ ತಕ್ಕ ಸಾಮ್ರಾಜ್ಞಿ. ದಯಮಾಡಿ ಕಳುಹಿಸಿ ಕೊಡು" ಎಂದರು. ಅವರ ಮಾತಿಗೆ ಶಿವನು ಜೋರಾಗಿ ನಕ್ಕುಬಿಟ್ಟು, ನನ್ನನ್ನು 'ಅವರ' ಮುಂದೆ ದೂಡಿದರು. ದಶಾನನನು ನನ್ನನ್ನು ಮೇಲಿನಿಂದ ಕೆಳಗೆ ಶೃಂಗಾರಭರಿತವಾಗಿ ನೋಡಿ ಮನಸಾರೆ ಒಪ್ಪಿದರು. ನಮ್ಮಿಬ್ಬರ ವಿವಾಹ ವಿಜೃಂಭಣೆಯಿಂದ ನೆರವೇರಿತು. ಭಕ್ತಿಪೂರ್ವಕವಾಗಿ ನಾವಿಬ್ಬರೂ ಶಿವನ ಆಶೀರ್ವಾದ ಪಡೆದೆವು. ಆಗ ಶಿವನು, "ರಾವಣ, ಇವಳು ಮಯಾಸುರ ಹಾಗೂ ಹೇಮಾಳ ಪುತ್ರಿ, ಮಂಡೋದರಿ. ನೀನು ತಿಳಿದಂತೆ ಪಾರ್ವತಿಯಲ್ಲ." ಎಂದರು. ಕೊಂಚ ನಿರಾಶೆಯಾದರೂ ನನ್ನವರು ನನ್ನನ್ನು ಪ್ರೀತಿಯಿಂದ ಸ್ವೀಕರಿಸಿದ್ದರು.

ಪುಷ್ಪಕ ವಿಮಾನವೇರಿ ಸುವರ್ಣ ಲಂಕೆಗೆ ನಾವು ಹಾರಿದೆವು. ಸ್ವರ್ಗವನ್ನೆ ನಾಚಿಸುವಂತಹ ವೈಭವ. ಸತಿ–ಪತಿಯರಿಬ್ಬರೂ ಅನ್ಯೋನ್ಯವಾಗಿ ಜೀವನ ಸಾಗಿಸುತ್ತಿದ್ದೆವು. ಅವರ ಪಾಂಡಿತ್ಯಕ್ಕೆ ನಾನು ಬೆರಗಾಗಿದ್ದೆ. ಅವರು ವೀಣೆ ನುಡಿಸಿದರೆ ಎಲ್ಲ ಜೀವರಾಶಿಗಳು ಆ ನಾದದಿಂದ ಕುಣಿಯುತ್ತಿದ್ದವು. ಮೋಡಗಳು ಮಳೆ ಸುರಿಸುತ್ತಿದ್ದವು. ಇಂತಹ ಪಂಡಿತನನ್ನು ಪತಿಯಾಗಿ ಪಡೆಯಲು ಶಿವ ಪಾರ್ವತಿಯರಿಗೆ ನಾನು ಸದಾ ಚಿರಋಣಿ. ನನ್ನ ಮೇಲೆ ಅಪಾರ ಪ್ರೀತಿ ಹೊಂದಿದ್ದರು. ನಮ್ಮ ಪ್ರೇಮದ ಸಂಕೇತವಾಗಿ ಒಬ್ಬ ಹೆಣ್ಣು ಮಗಳು ಹುಟ್ಟಿದ್ದಳು. ತುಂಬಾ ಸುಂದರವಾದ ಮಗು. ಅಶೋಕವನದ ಎಲ್ಲ ಹೂವು ಅವಳ ಮುಂದೆ ತೃಣಕ್ಕೆ ಸಮಾನ. ನಮ್ಮಿಬ್ಬರಿಗೂ ಅವಳೆಂದರೆ ಪಂಚಪ್ರಾಣ.

ಆ ಮಗುವಿಗೆ ಶಿವನ ಆಶೀರ್ವಾದ ಕೊಡಿಸಲು ಕೈಲಾಸಕ್ಕೆ ಹೊರೆಟೆವು. ಮಾರ್ಗದಲ್ಲಿ, ಕೈಲಾಸಕ್ಕೆ ಸ್ವಲ್ಪವೇ ದೂರದಲ್ಲಿ ಭೀಕರ ಭೂಕಂಪನ ಉಂಟಾಯಿತು. ಇಳೆ ಬಾಯಿ ತೆರೆದು ನಮ್ಮ ಮಗಳನ್ನು ನುಂಗಿದಳು. ಮಗಳನ್ನು ಕಳೆದುಕೊಂಡ ನಮಗೆ ದೊಡ್ಡ ಆಘಾತವಾಯಿತು. 'ಅವರಂತೂ' ಕುಗ್ಗಿಹೋದರು. ಅದರ ಪರಿಣಾಮವಾಗಿ ಅವರ ರಾಜಕೀಯ ಜೀವನವೂ ಕದಡಿತು. ಯಾವಾಗಲೂ ಮಲಗಿರುವ ಒಬ್ಬ ತಮ್ಮ. ಇನ್ನೊಬ್ಬ ತಾನಾಯಿತು ತನ್ನ ವಿಷ್ಣು ಪೂಜೆಯಾಯಿತು ಎಂದು ಕೂತವನು. ಈ ಇಬ್ಬರಿಂದಲೂ ನಮಗೆ ಬೆಂಬಲ ಸಿಗಲಿಲ್ಲ.

ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳಲು ನನ್ನ ನಾದಿನಿಯ ಗಂಡ ದಂಡೆತ್ತಿ ಬಂದ. ಅವಳಿಗೆ ಸದಾ ನಮ್ಮ ಮೇಲೆ ಅಸೂಯೆ. ಹೆಣ್ಣು ಮಗಳು ತವರಿಗೆ ಒಳಿತು ಬಯಸುವುದರ ಬದಲು ಸದಾ ದುರ್ಮಾರ್ಗವಾಗಿ ನಡೆಯುತ್ತಿದ್ದಳು. 'ಇವರನ್ನು' ಕುರಿತು ನಾನು ಹೇಳಿದೆ, "ನೋಡಿ, ಮಗಳು ಹಿಂತಿರುಗಿ ಬರುವುದಿಲ್ಲ. ಆದರೆ ನೀವು ಒಬ್ಬ ರಾಜ. ನಿಮ್ಮ ಪ್ರಜೆಗಳೂ ನಿಮ್ಮ ಮಕ್ಕಳಿದ್ದ ಹಾಗೆ. ಅವರನ್ನೂ ರಕ್ಷಿಸುವುದು ನಿಮ್ಮ ಧರ್ಮ". ಅವರಿಗೆ ಮನವರಿಕೆಯಾಗಿ ಆ ದುಷ್ಟನನ್ನು ಸಂಹರಿಸಿದರು. ನನ್ನ ನಾದಿನಿಯ ಗೋಳು ಹೇಳತೀರದು. ಅವಳಿಗೆ ತವರೆ ದಿಕ್ಕಾಯಿತು.

ಬೇರೆಲ್ಲಾ ಸುಗಮವಾಗಿ ಸಾಗುತ್ತಿತ್ತು. ನಮಗೆ ಮೂವರು ಗಂಡು ಮಕ್ಕಳಾದರು. ಮೂವರೂ ಮಹಾ ಪರಾಕ್ರಮಿಗಳು ಹಾಗೂ ವಿದ್ವಾಂಸರಾದರು. ಒಬ್ಬನಂತೂ ಇಂದ್ರನನ್ನೇ ಗೆದ್ದು ಬೀಗಿದನು. ತಂದೆ ತಾಯಿಯರಿಗೆ ಇನ್ನೇನು ಬೇಕು? ನಮ್ಮ ಜೀವನ ನಾಲ್ಕು ಜನಕ್ಕೆ ಮಾದರಿಯಂತಾಗಿತ್ತು.

ಯಾರ ದೃಷ್ಟಿ ಬಿತ್ತೋ ಏನೋ! ಒಂದು ದಿನ ನನ್ನ ನಾದಿನಿ ಅಳುತ್ತಾ ಬಂದಳು. ಅವಳ ಮುಖವೆಲ್ಲ ರಕ್ತಸಿಕ್ತವಾಗಿತ್ತು. ಅವಳನ್ನು ಕಂಡೊಡನೆ ನನ್ನವರು ಗುಡುಗಿದರು. ದಪ್ಪ ದಪ್ಪ ಹೆಜ್ಜೆ ಹಾಕಿ ಎಲ್ಲೋ ಹೊರಟರು. ಹಿಂತಿರುಗುವಾಗ ಓರ್ವ ಸುಂದರ ಯುವತಿಯೊಡನೆ ಬಂದರು. ಅವಳ ಕಣ್ಣೀರು ಕಂಡರೆ ನನ್ನ ಕರುಳು ಚುರುಗುಟ್ಟಿತು. ಅವಳನ್ನು ನೋಡಿದ ಕೂಡಲೇ ಗುರುತು ಸಿಕ್ಕಿತು. ಅಯ್ಯೋ, ಇದೆಂತಹ ಅನಾಹುತಕ್ಕೆ ನಾಂದಿ ಎಂದು ಮರುಗಿದೆ.

ಇದಾದ ಬಳಿಕ ಅಗಿದ್ದೆಲ್ಲಾ ವಿನಾಶ. ಒಂದು ಕಪಿಯು ಲಗ್ಗೆ ಇಟ್ಟು ನಮ್ಮ ಲಂಕೆಯನ್ನು ಸುಟ್ಟುಹಾಕಿತ್ತು. ನನ್ನ ಅಪ್ಪನ ಪರಿಶ್ರಮವೆಲ್ಲ ಬೂದಿಯಾಯಿತು. ಬಹಳ ಆಸಕ್ತಿಯಿಂದ ಕಟ್ಟಿದ ಲಂಕೆ, ನಮಗೆಲ್ಲ ತುಂಬಾ ಹೆಮ್ಮೆಯಿದ್ದ ಲಂಕೆ, ಅವಳ ಕಣ್ಣೀರಿನಿಂದ ಸುಟ್ಟುಹೋಯಿತು. ವಿಭೀಷಣ ಆ ರಾಮನ ಕಡೆ ಸೇರಿದ್ದನಂತೆ. ಉಂಡ ಮನೆಗೆ ಎರಡು ಬಗೆಯೋ ದ್ರೋಹಿ. ನನ್ನ ರಕ್ತ ಕುದಿಯಿತು. ಎಲ್ಲೊ ಒಂದು ಮೂಲೆಯಲ್ಲಿ ನನ್ನವರ ತಪ್ಪು ನನಗೆ ತಿಳಿದಿತ್ತು. ನಾನು ಅವರನ್ನು ಕಂಡು ಹೇಳಿದೆ. "ಅವಳು ಯಾರೆಂದು ತಿಳಿದಿರಿ? ನಿಮಗೆ ಯಾಕೆ ಈ ದುರ್ಬುದ್ಧಿ? ಅವಳ ಪತಿಯೊಡನೆ ಅವಳನ್ನು ಕಳುಹಿಸಿಕೊಡಿ" ಎಂದೆ.

ಅದಕ್ಕೆ ಅವರು, "ನನಗೆ ಗೊತ್ತು ಮಂಡೋದರಿ. ಸ್ವಲ್ಪ ಯೋಚಿಸು, ನಿನಗೆ ನಮ್ಮ ಇಂದ್ರಜಿತುವಿನ ಮೇಲೆ ಹೆಚ್ಚು ಪ್ರೀತಿ. ಯಾಕೆ ಹೇಳು? ಅವನು ನನಗಿಂತ ದೊಡ್ಡ ಸಾಧನೆ ಮಾಡಿದ್ದಾನೆ ಎಂದು ತಾನೇ. ಯಾವಾಗಲೂ ಹಾಗೆ. ನಮ್ಮನ್ನು ಮೀರಿಸುವಂತಹ ಕೌಶಲ್ಯ ನಮ್ಮ ಮಕ್ಕಳಲ್ಲಿ ಕಾಣುತ್ತೇವೆ. ಆಗ ನಮ್ಮ ಜೀವನ ಸಾರ್ಥಕ. ಹಾಗೆಯೇ ನನಗೆ

ಈ ಸೀತಾಪತಿ ಯಾರೆಂದು ತಿಳಿದಿದೆ. ಇದಕ್ಕಿಂತಹ ಸುಯೋಗ ನನಗೆ ಬರಲು ಸಾಧ್ಯವೇ ಇಲ್ಲ." ಎಂದು ಪಂಚಾಂಗವನ್ನು ನೋಡುತ್ತಿದ್ದರು. ನನ್ನವರು ಮಹಾ ಬ್ರಾಹ್ಮಣ. ತನ್ನ ಶತ್ರುವಿಗೆ ತಾನೇ ರಣಕಂಕಣವನ್ನು ಕಟ್ಟಿಬಂದ ಮಹಾ ಪ್ರತಾಪಿ. ಇದನ್ನು ತಿಳಿದು ನನ್ನ ಜೀವನ ಧನ್ಯವಾಯಿತು. ಅವರ ಈ ಭಂಡ ಧೈರ್ಯಕ್ಕೆ ಮನ ಕಲಕಿದರೂ ಆರತಿ ಎತ್ತಿ ಕಳುಹಿಸಿದೆ. "ನಾತಿಚರಾಮಿ" ಎಂದು ಅಗ್ನಿಸಾಕ್ಷಿಯಾಗಿ ಕೈ ಹಿಡಿದ್ದಿದ್ದೆನಲ್ಲ.

ನನ್ನ ಮುದ್ದಿನ ಇಂದ್ರಜಿತುವನ್ನು ಮೋಸದಿಂದ ಕೊಂದರು. 'ಅವರನ್ನು' ಸಂಹರಿಸುವ ವಿಶೇಷ ಬಾಣವನ್ನು ಅವಿತಿಟ್ಟಿದ್ದೆ. ಕಪಟಿ ಹನುಮನು ಕದ್ದೊಯ್ದನು. ಅವರು ಹೋಗಿಬಿಟ್ಟರು. ಒಳಗೊಳಗೆ ಸಂತೋಷ ಅನುಭವಿಸಿದ್ದು ಶೂರ್ಪನಖಿ. ಕೊನೆಗೂ ತನ್ನ ಹಗೆ ಸಾಧಿಸಿಯೇ ತೀರಿದಳು. ಈಗ ಎಲ್ಲ ಶೂನ್ಯ. ನಾಲ್ಕು ದಿಕ್ಕಲ್ಲೂ ಸೂತಕದ ಛಾಯೆ.

ಆ ನನ್ನ ಮೈದುನನನ್ನು ನಾನು ವಿವಾಹವಾಗಬೇಕಂತೆ. ಉಪ್ಪು ತಿಂದ ಮನೆಗೆ ಎರಡು ಬಗೆಯುವುವವನ ಜೊತೆ ನಾನು, ನಾನು? ನಾನು ಮದುವೆಯಾಗಲಾರೆ. ಬಹುಶಃ ಮೊದಲಿನಿಂದಲೂ ಅವನು ನನ್ನ ಮೋಹಿಸಿದ್ದಾನೋ ಏನೋ! ಶೂರ್ಪನಖಳ ಗಂಡ ದಂಡೆತ್ತಿ ಬಂದಾಗ ನಾನು ಆಡಿದ ಮಾತು ನೆನಪಾಯ್ತು. ನಾವು ರಾಜ ಮನೆತನದವರು. ನಮಗೆ ರಾಜ್ಯದ ಪ್ರತಿ ಕೆಲವು ಕರ್ತವ್ಯವಿರುತ್ತದೆ. ನಾನು ಈ ರಾಜ್ಯದ ಸಾಮ್ರಾಜ್ಞಿ. ಈ ರಾಜ್ಯದ ಭವಿಷ್ಯಕ್ಕಾಗಿ ಇದು ಅವಶ್ಯಕ. ಆದರೆ ಒಂದಂತೂ ಸತ್ಯ. ನಾನು ಇನ್ನೂ ಮುಂದೆ ರಾಣಿಯೇ ಹೊರತು, ಯಾವುದೇ ಕಾರಣಕ್ಕೂ ಅವನ ಹೆಂಡತಿಯಾಗುವುದಿಲ್ಲ. ಇದೇ ನನ್ನ ಕಡೆಯ ನಿರ್ಧಾರ. ವಿಧವೆಯಾಗಿ ಆ ಶಿವನಿಗೆ ಮುಖ ತೋರಿಸಲಾರೆ. ಆದುದರಿಂದ ಈ ಕಲ್ಯಾಣಕ್ಕೆ ನನ್ನ ಅಸ್ತು.

***

ಮಕ್ಕಳ ಕತೆ

ಕುಶಲ ಕೊತ್ವಾಲ ವಿದ್ಯೆ

– ವಿಠ್ಠಲ ಇಜೇರಿ

ಮಕ್ಕಳ ಭಾವನಾಲೋಕ ಬಹಳ ಶ್ರೀಮಂತವಾದುದು. ಹಾಗಾಗಿಯೇ ಪಂಜೆ ಮಂಗೇಶರಾಯರಿಂದ ಹಿಡಿದು ಕುವೆಂಪು, ಅನುಪಮಾ ನಿರಂಜನ, ರಾಜರತ್ನಂ ಆದಿಯಾಗಿ ಇತ್ತೀಚಿನ ಸಾಹಿತಿಗಳೆಲ್ಲರೂ ಮಕ್ಕಳಿಗಾಗಿ ಸಾಹಿತ್ಯ ರಚಿಸಿದ್ದಾರೆ. ಪಂಚತಂತ್ರ, ಇಸೋಫನ ಕತೆಗಳು ರಂಜನೆಯೊಂದಿಗೆ ಬುದ್ಧಿಮತ್ತೆಗೆ ಅವಕಾಶ ಒದಗಿಸುತ್ತವೆ. ಖಲೀಲ್ ಗಿಬ್ರಾನ್ ಮಕ್ಕಳ ಕುರಿತು ಹೇಳುವ ಮಾತುಗಳು ಬದುಕಿನ ವಾಸ್ತವಿಕ ಸತ್ಯವನ್ನು ಅರಿವು ಮಾಡಿಕೊಡುತ್ತವೆ. ಅವರು ನುಡಿಯುತ್ತಾರೆ–

"ನಿಮ್ಮ ಮಕ್ಕಳು ನಿಮ್ಮವರಲ್ಲ. ಜೀವದ ಚಡಪಡಿಕೆ ಪಡೆದ ಮೂರ್ತರೂಪಗಳು. ಅವರು ನಿಮ್ಮ ಮೂಲಕ ಬಂದಿದ್ದಾರೆಯೇ ಹೊರತು ನಿಮಗಾಗಿ ಅಲ್ಲ. ಅವರು ನಿಮ್ಮೊಂದಿಗೆ ಇದ್ದರೂ, ನಿಮ್ಮ ಒಡೆತನಕ್ಕೆ ಒಳಪಟ್ಟವರಲ್ಲ. ನಿಮ್ಮ ಒಲವನ್ನು ನೀವು ಅವರಿಗೆ ನೀಡಬಹುದು. ಆಲೋಚನೆಗಳನ್ನಲ್ಲ. ಅವರಿಗೆ ಅವರದೇ ಆದ ಆಲೋಚನೆಗಳಿವೆ. ಅವರ ದೇಹಗಳಿಗೆ ನೀವು ಆಶ್ರಯ ನೀಡಬಹುದು ಅವರ ಆತ್ಮಗಳಿಗಲ್ಲ. ನೀವು ಕನಸಿನಲ್ಲಿಯೂ ಹೋಗಲಾಗದ ನಾಳೆಯ ಮನೆಗಳಲ್ಲಿ ಅವರು ವಾಸಿಸುತ್ತಾರೆ. ನೀವು ಅವರಂತಾಗಲು ಶ್ರಮಿಸಬಹುದು. ಅವರನ್ನು ನಿಮ್ಮಂತಾಗಿಸುವುದು ಸಾಧ್ಯವಿಲ್ಲ. ನಿಮ್ಮ ಮಕ್ಕಳೆಂಬ ಜೀವಂತ ಬಾಣಗಳನ್ನು ಬಿಡಲು ಉಪಯೋಗಿಸಿದ ಬಿಲ್ಲುಗಳು ನೀವು. ಆ ಬಾಣಗಳು ಅನಂತತೆಯ ಪಥದಲ್ಲಿ ಸಾಗುವುದನ್ನು ನೀವು ನೋಡಬಹುದು. ಬಿಲ್ಲುಗಾರನ ಕೈಯಲ್ಲಿ ನಿಮ್ಮ ಬಿಲ್ಲಿನ ಬಾಗುವಿಕೆ ಸಂತೋಷದಾಯಕವಾಗಿರಲಿ. ದೇವರು ಹಾರುವ ಬಾಣವನ್ನು ಪ್ರೀತಿಸುವಂತೆ ಸದೃಢವಾದ ಬಿಲ್ಲನ್ನೂ ಪ್ರೀತಿಸುತ್ತಾನೆ".

ಈ ಮಾತುಗಳು ನಮ್ಮನ್ನು ಮಕ್ಕಳಿಗೆ ಋಣಿಯಾಗಿಸುತ್ತವೆ. ಅವರ ಸಂತೋಷಕ್ಕೆ, ಸೃಜನಶೀಲತೆಗೆ ಪೂರಕವಾಗುವ ಕತೆಗಳನ್ನು ಹೆಕ್ಕಿ ತೆಗೆದು ನೀಡಬೇಕು. ಈ ದೃಷ್ಟಿಯಲ್ಲಿ 'ಅಮ್ಮ ಹೇಳುವ ಚಂದದ ಕತೆಗಳು' ಎಂಬ ಕೃತಿ ಮೇಲೆ ಕಾಣಿಸಿದ ಉದ್ದೇಶವನ್ನು ಪೂರ್ಣಗೊಳಿಸುತ್ತವೆ. ಈ ಕೃತಿ ವಿಸ್ತಾರ ಪ್ರಕಾಶನದ ಪ್ರಕಟಣೆ. ಕತೆಗಳ ಸಂಪಾದನೆ ಅಲಕಾ ಕಟ್ಟೆಮನೆ ಅವರದು. ಅಲ್ಲಿಯ ಒಂದು ಚಿಕ್ಕ ಕತೆ ಇಲ್ಲಿದೆ.

ಒಂದು ಊರಿನಲ್ಲಿ ದಂಡಪಾಣಿ ಎಂಬ ಗುರು ಇದ್ದರು. ಅವರಲ್ಲಿಗೆ ವಿದ್ಯೆ ಕಲಿಯಲು ಬೇರೆ ಬೇರೆ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಅಲ್ಲಿಗೆ ಅಕ್ಕಪಕ್ಕದ ರಾಜ್ಯಗಳಿಂದಲೂ ವಿದ್ಯಾರ್ಜನೆಗೆ ಶಿಷ್ಯರಾಗಿ ತರುಣರು ಬರುತ್ತಿದ್ದರು. ಆ ಗುರುಕುಲದಲ್ಲಿ ಉಳಿದು ಎಲ್ಲ 64 ವಿದ್ಯೆಗಳಲ್ಲಿ ವಿದ್ಯಾರ್ಥಿಗಳು ಪಾರಂಗತರಾಗಬೇಕಿತ್ತು. ಒಮ್ಮೆ ಒಬ್ಬ ಯುವಕ ದಂಡಪಾಣಿಯವರಲ್ಲಿಗೆ ಬಂದು, ತನಗೆ ಕೊತ್ವಾಲ್ ವಿದ್ಯೆ ಅಂದರೆ ಕಳ್ಳರನ್ನು ಮಟ್ಟಹಾಕುವ, ಅವರನ್ನು ಬಂಧಿಸುವ ವಿದ್ಯೆ ಹೇಳಿ ಕೊಡಬೇಕು" ಅಂದ. ಗುರುಗಳು ಇಲ್ಲಿ ಕ್ರಮವಾಗಿ 64 ವಿದ್ಯೆಗಳನ್ನು ಕಲಿಯುತ್ತ, ಸಂಬಂಧಪಟ್ಟ ಜ್ಞಾನವನ್ನು ಕರಗತ ಮಾಡಿಕೊಳ್ಳಬೇಕು. ಕೊತ್ವಾಲ್ ವಿದ್ಯೆಯೇ ಕೊನೆಯ 64ನೆಯದು, ಆ ಹಂತಕ್ಕೆ ಬರುವಾಗ ನೀನು ಸಾಕಷ್ಟು ಅನುಭವಿ ಆಗಿರುವಿ. 64ನೇ ವಿದ್ಯೆಗೆ ಪೂರಕವಾಗಿ 63ನೇ ವಿದ್ಯೆ ಇರುವುದು" ಎಂದು ಹೇಳಿದರು. ಯುವಕ 63ನೇ ವಿದ್ಯೆ ಯಾವುದು? ಅದು ಕೊತ್ವಾಲ್ ವಿದ್ಯೆಗೆ ಹೇಗೆ ಪೂರಕ?" ಎಂದು ಪ್ರಶ್ನಿಸಿದ. ದಂಡಪಾಣಿಯವರು "ಕಳ್ಳರನ್ನು ಹಿಡಿಯುವ ಮೊದಲು ಕಳ್ಳತನದ ಬಗ್ಗೆ ವಿವರವಾಗಿ ತಿಳಿದಿರಬೇಕು. 63ನೇ

ವಿದ್ಯೆಯಲ್ಲಿ ಕಳ್ಳತನ ಹೇಗೆ ಮಾಡುವುದು, ಕಳ್ಳರ ಯೋಚನೆಗಳೇನು, ಬೇರೆ ಬೇರೆ ದೇಶ, ಕಾಲ, ಸಮಯಗಳಲ್ಲಿ ಕನ್ನ ಹಾಕುವುದು ಹೇಗೆ ಎಂಬುದನ್ನು ಕಲಿಸಲಾಗುವುದು. ಕಳ್ಳರನ್ನು ಹಿಡಿಯಬೇಕೆಂದರೆ ನಾವು ಮೊದಲು ಕಳ್ಳರಾಗಬೇಕು. ಕಳ್ಳತನದ ಮಾರ್ಗಗಳ ಪರಿಚಯವಿರಬೇಕು. ಆಗ ಕಳ್ಳರ ಜಾಡು ಅರ್ಥವಾಗುವುದು. ಆದುದರಿಂದ ಮೊದಲು ಕಳ್ಳರಂತೆ ಯೋಚಿಸಬೇಕು" ಎಂದು ಹೇಳಿದರು. ಯುವಕ ದೀರ್ಘ ಅವಧಿ ಗುರುಕುಲದಲ್ಲಿದ್ದು 63 ವಿದ್ಯೆಗಳನ್ನು ಕಲಿತ. ಕೊತ್ವಾಲ್ ವಿದ್ಯೆ ಅಂದರೆ 64ನೇ ವಿದ್ಯೆ ಕಲಿಯಲು ಆತುರನಾಗಿದ್ದಾಗ ಗುರು ದಂಡಪಾಣಿಗಳು ಆ ಯುವಕನನ್ನು ಕರೆದು, "ನೀನು ಕಳ್ಳತನವೂ ಸೇರಿದಂತೆ ಎಲ್ಲ ವಿದ್ಯೆ ಗಳಿಸಿರುವೆ. ಕೊತ್ವಾಲ್ ವಿದ್ಯೆ ಕಲಿಯಲು ಮಹಾರಾಜರ ಕೊತ್ವಾಲ್ ಬಳಿ ಹೋಗಿ ನನ್ನ ಹೆಸರು ಹೇಳಿ ನಾನು ಕಳಿಸಿದುದಾಗಿ ತಿಳಿಸು. ಅಲ್ಲಿ ಏನನ್ನಾದರೂ ಕದ್ದು ಕೊತ್ವಾಲನ ಮೆಚ್ಚುಗೆ ಗಳಿಸಬೇಕು. ಮುಂದಿನ ವಿದ್ಯೆ ಅವನಲ್ಲಿ ಆಗಲಿ " ಎಂದು ಹೇಳಿ ಬೀಳ್ಕೊಟ್ಟರು.

ಯುವಕ ಕೊತ್ವಾಲ್ ಬಳಿ ಬಂದು ವರದಿ ಒಪ್ಪಿಸಿದ. ಕೊತ್ವಾಲನು, "ನಿನ್ನನ್ನೊಂದು ಪರೀಕ್ಷೆಗೆ ಒಡ್ಡಿ ಅದರಲ್ಲಿ ನೀನು ಪಾಸಾದರೆ ಕಳ್ಳರನ್ನು ಹಿಡಿಯುವ ಕೊತ್ವಾಲ್ ವಿದ್ಯೆ ಕಲಿಸಿಕೊಡುವೆ" ಎಂದು ಹೇಳಿ ಯುವಕನಿಗೆ ಊಟಕ್ಕೆ ಕರೆದೊಯ್ದ. ಊಟಕ್ಕೆ ಕುಳಿತಾಗ ಯುವಕನ ತಟ್ಟೆಯಲ್ಲಿ ಬಂಗಾರದ ಪಾತ್ರೆಯಲ್ಲಿ ಸಿಹಿ ಬಡಿಸಲಾಗಿತ್ತು. ಅಂತಹ ಬೆಲೆಯುಳ್ಳ ಪಾತ್ರೆಯನ್ನು ಆ ಯುವಕ ನೋಡಿರಲಿಲ್ಲ. ಕೊತ್ವಾಲನು "ನನ್ನ ಬಳಿ ಇಂಥಹ ಪಾತ್ರೆ ಇದೊಂದೇ. ಇನ್ನೊಂದು ಪಾತ್ರೆ ಇದ್ದರೆ ಇದನ್ನು ನಿನಗೇ ಕೊಟ್ಟುಬಿಡುತ್ತಿದ್ದೆ" ಎಂದು ಹೇಳಿದ. ಯುವಕ ಈಗ ಈ ಪಾತ್ರೆ ನನಗೇ ಸೇರಬೇಕಾದದ್ದು ಅಂದುಕೊಂಡ. ಅಂದು ರಾತ್ರಿ ಅಡುಗೆಮನೆಯಿಂದ ಆ ಚಿನ್ನದ ಪಾತ್ರೆ ಹಾರಿಸಲು ಯೋಜನೆ ರೂಪಿಸಿದ. ರಾತ್ರಿ ಅಡುಗೆಮನೆ ಹೊಕ್ಕ ಯುವಕನಿಗೆ ಆ ಚಿನ್ನದ ಪಾತ್ರೆ ದೊರೆಯಲಿಲ್ಲ. ಮೆತ್ತಗೆ ಕೊತ್ವಾಲನ ಕೋಣೆಗೆ ಬಂದು ನೋಡಿದ. ಅಲ್ಲೊಂದು ಆಶ್ಚರ್ಯ ಕಾದಿತ್ತು. ಆ ಚಿನ್ನದ ಪಾತ್ರೆ ಹಾಲು, ಮೊಸರು ಇಡುವ ನೆಲುವಿನ ಮೇಲೆ ಇತ್ತು ಮತ್ತು ಅದು ಮಲಗಿದ ಕೊತ್ವಾಲನ ಮೈ ಮೇಲೆ ನೇರವಾಗಿತ್ತು. ಪಾತ್ರೆ ನೀರಿನಿಂದ ತುಂಬಿತ್ತು. ಯುವಕ ಕಳ್ಳತನದಲ್ಲಿ ಪರಣತಿ ಪಡೆದವನಲ್ಲವೇ, ಚಾತುರ್ಯ ಉಪಯೋಗಿಸಿ ಪಾತ್ರೆ ತೆಗೆದುಕೊಂಡು ಹೋದ. ಮರುದಿನ ಬೆಳಿಗ್ಗೆ ಯುವಕನನ್ನು ತಿಂಡಿಗೆ ಕರೆಯಲಾಯಿತು. ತಿಂಡಿಗೆ ಕೈ ಹಾಕಿದಾಗ ತಿಂಡಿಯನ್ನು ರಾತ್ರಿ ತಾನು ಕದ್ದ ಚಿನ್ನದ ಪಾತ್ರೆಯಲ್ಲಿಯೇ ಬಡಿಸಿಡುದನ್ನು ಕಂಡು ಬೆಚ್ಚಿದ. ಕೊತ್ವಾಲನ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿದ ಯುವಕ, "ನೀವು ಇದನ್ನು ಹೇಗೆ ಕಂಡುಹಿಡಿದಿರಿ?" ಎಂದು ಕೇಳಿದ. ಕೊತ್ವಾಲ "ಅದಿರಲಿ, ನೆಲುವಿನ ಮೇಲೆ ಪಾತ್ರೆ ತುಂಬಾ ನೀರು ಹಾಕಿದ ಪಾತ್ರೆಯನ್ನು ಅದ್ಹೇಗೆ ಹನಿ ನೀರೂ ಚೆಲ್ಲದಂತೆ ಖಾಲಿ ಮಾಡಿ ಪಾತ್ರೆ ಕದ್ದೆ. ಅದನ್ನು ತಿಳಿಸು" ಅಂದ. ಯುವಕ "ಪಾತ್ರೆಗೆ ಸ್ವಲ್ಪ ತಾಗಿದ್ದರೂ ನೀರು ನಿಮ್ಮ ಮೇಲೆ ಬಿದ್ದು ಎಚ್ಚರಗೊಳ್ಳುತ್ತಿದ್ದಿರಿ. ಅದಕ್ಕಾಗಿ ಒಂದು ನಳಿಕೆಯನ್ನು ಪಾತ್ರೆಗೆ ಬಿಟ್ಟು ನೀರು ಹೀರಿದೆ, ನಂತರ ಖಾಲಿಮಾಡಿದ ಪಾತ್ರೆ ತೆಗೆದುಕೊಂಡು ಹೋದೆ. ಈಗ ನೀವು ಈ ಪಾತ್ರೆ ವಾಪಸ್ಸು ಹೇಗೆ ಸಂಪಾದಿಸಿದಿರಿ, ಅದನ್ನು ತಿಳಿಸಿ" ಅಂದ.

"ಕಳ್ಳ ಸಾಮಾನ್ಯವಾಗಿ ಏನಾದರೂ ಸಾಕ್ಷಿ ಬಿಟ್ಟು ಹೋಗಿರುತ್ತಾನೆ. ಅದಕ್ಕಾಗಿ ನಿನ್ನ ಕೋಣೆಗೆ ಬಂದಾಗ ನೀನುಟ್ಟ ಪಂಚೆ ಮೊಣಕಾಲುವರೆಗೆ ಒದ್ದೆಯಾಗಿತ್ತು. ಅದರ ಅರ್ಥ ನೀನು ನೀರಲ್ಲಿ ನಡೆದು ಬಂದಿದ್ದೆ. ಮನೆ ಪಕ್ಕದಲ್ಲಿ ಚಿಕ್ಕ ಕೆರೆ ಇದೆ. ಅಲ್ಲಿ ಹೋಗಿ ನೋಡಿದರೆ ಕೆರೆಯ ಕೆಸರಿನಿಂದ ಹೊರಬಂದ ಹೆಜ್ಜೆ ಗುರುತುಗಳಿದ್ದವು. ಅದನ್ನೇ ಅನುಸರಿಸಿ ಹೋಗಿ ಕೈಯಾಡಿಸಿದಾಗ ನೀನು ಕದ್ದ ಮಾಲು ದೊರೆಯಿತು" ಎಂದು ಹೇಳಿದ ಕೊತ್ವಾಲ, "ನೀನು ನನ್ನ ಪರೀಕ್ಷೆಯಲ್ಲಿ ಪಾಸಾಗಿರುವೆ. ನಾಳೆಯಿಂದ ಪಾಠ ಪ್ರಾರಂಭ" ಎಂದ.

***

ವಿಡಂಬನೆ

ಮತದಾನದ ಮಜಾಗಳು

- ರೇಣುಕಾ ದೇಸಾಯಿ

ಚುನಾವಣೆಯಲ್ಲಿ ಎಂದೆಂದೂ ಅಭಿವೃದ್ಧಿ ಆಧಾರದ ಮೇಲೆ, ಅಭ್ಯರ್ಥಿಗಳು ಮಾಡಿರುವ ಕೆಲಸದ ಆಧಾರದ ಮೇಲೆ ಮತ ಕೇಳುವ ಪರಿಪಾಠ ಇರಲೇಬೇಕು. ಆದರೆ ಭಾರತದಂತಹ ಬೃಹತ್ ನಾಡು, ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಮತಯಾಚನೆ ಮತ್ತು ಆಲೋಚನೆಗಳಲ್ಲಿ ಬರಿ ಸಂಚುಗಳ ಕೈ ಮೇಲಾಟವಾಗಿರುವಾಗ, ಏನೂ ಅರಿಯದ ಬಡಪಾಯಿ ಮತದಾರ ಮಜಾ ತೆಗೆದುಕೊಳ್ಳುವಂತೆ ಮಾಧ್ಯಮಗಳು ಪ್ರಚಾರ ಕೊಡುವದೊಂದು ನೋಡುವ ಹಾಗೆ ಇರುತ್ತದೆ. ಮಾಧ್ಯಮದ ಕ್ಯಾಮೆರಾಮೆನ್ ಸಂದುಗೊಂದುಗಳಲ್ಲಿ ಹೋಗಿ ಮತದಾನದಂದು ನಡೆಯುವ ಮಜಾಗಳನ್ನು ಸೆರೆಹಿಡಿದು, ಇರುವುದಕ್ಕಿಂತ ರೋಚಕವಾಗಿ ವರದಿ ನೀಡುತ್ತಾ ಪೈಪೋಟಿಯಲ್ಲಿ ಬೆಳಗಿನಿಂದ ಸಂಜೆವರೆಗೂ ಹೇಳಿದ್ದನ್ನೇ ಹೇಳಿದ್ದು ಕೇಳಿ ನಾವು ಒಂದಿಷ್ಟು ಖುಷಿಪಟ್ಟಿದ್ದು ಸುಳ್ಳಲ್ಲ. ಆದ್ರೂ ನಮ್ಮಗಳ ಚಿಕಿತ್ಸಕ ಬುದ್ಧಿ ಅದರಲ್ಲೂ ಏನನ್ನೋ ಹುಡುಕುತ್ತದಲ್ಲಾ ಏನ್ಹೇಳ್ಬೇಕು ಈ ಬುದ್ಧಿಗೆ!!

ಚುನಾವಣೆ ನಡೆಯುವ ದೇಶದ ನಾನಾ ಮೂಲೆ ಮೂಲೆಯಲ್ಲಿ ಕನಿಷ್ಠ ನೂರಾರು ಮದುವೆಗಳು ಚುನಾವಣೆಯ ದಿನವೇ ನಡೆಯುತ್ತವೆ. ಸರಿ, ಮಾಧ್ಯಮದ ಜನ ಅಲ್ಲಿ ಕಾದಿದ್ದು 'ಹಸೆಮಣೆಯಿಂದ ಸೀದಾ ಮತಗಟ್ಟೆಗೆ' ಎನ್ನುವ ಬ್ರೇಕಿಂಗ್ ಸುದ್ದಿ ಜೊತೆಗೆ ತಮ್ಮ ಹಕ್ಕು ಚಲಾಯಿಸಿದ, ತಮ್ಮ ಕರ್ತವ್ಯ ಅರಿತ ಜೋಡಿ ಎನ್ನುವ ಹೊಗಳಿಕೆ ಬೇರೆ!! ಆದರೆ ನನ್ನ ಯೋಚನೆ ನನ್ನ ತಲೆಯಲ್ಲಿ ಕಸ ತುಂಬುವುದನ್ನು ಬಿಟ್ಟಿತೆ?

ಮದುವೆಗೆ ಬಂದ ನೂರಾರು ಜನ ಮತ ಚಲಾಯಿಸಿದರೆ? ಬೇರೆ ಬೇರೆ ಊರಿಂದ ಮದುವೆಗೆ ಬಂದ ನೆಂಟರಿಷ್ಟರ ಮತ ಗೋತಾ ಆಗಿದ್ದಕ್ಕೆ ಇವರನ್ನು ಯಾಕೆ ಹೊಣೆ ಮಾಡಲಿಲ್ಲ? ಇವರೇನಾದರೂ ಮದುವೆ ಮುಂದೂಡಿ, ಮದುವೆಗೆ ಬರುವ ಬಂಧುಬಾಂದವರಿಗೆ ತಪ್ಪದೇ ಮತ ಹಾಕಿ ಎಂದು ಕರೆ ಕೊಟ್ಟಿದ್ದರೇ!! ಇಲ್ಲಾ ಸೀದಾ ಸಾದಾ ದೇವರ ಸನ್ನಿಧಿಯಲ್ಲಿ ತಾಳಿ ಕಟ್ಟಿಕೊಂಡು ರಿಜಿಸ್ಟರ್ ಆಫೀಸಿನಲ್ಲಿ ಕಾನೂನು ರೀತಿಯಲ್ಲಿ ನೊಂದಾಯಿಸಿಕೊಂಡು ಮತ ಹಾಕಲು ಹೋಗುತ್ತಿದ್ದೇವೆ, ಮತ ಚಲಾಯಿಸಿ, ತಪ್ಪಿಸಬೇಡಿ ಎಂದು ಮನವಿ ಕೊಟ್ಟಿದ್ದರೇ! ಇವರ ನಾಗರಿಕ ಪ್ರಜ್ಞೆಗೆ ಬಹುಮಾನ ಪತ್ರ ಕೊಟ್ಟರೆ ಸರಿ, ಅದು ಬಿಟ್ಟು ಪೋಸ್ ಕೊಟ್ಟು ಬೆಳಗ್ಗೆಯಿಂದ ಸಂಜೆವರೆಗೂ ದೃಶ್ಯ ಮಾಧ್ಯಮದಲ್ಲಿ ಬರುವ ಫೋಟೋ ಪ್ರಚಾರಕ್ಕೆ ಹಿಗ್ಗುವುದು, ಹೇಳಿದ್ದೇ ಹೇಳಿ ತೋರಿಸಿದ್ದೇ ತೋರಿಸುವ ಬುದ್ಧಿವಂತರ ಪ್ರತೀಕವಾದ ಮಾಧ್ಯಮದವರಿಗೆ ತಾವು ಬಿತ್ತರಿಸುವ ಸುದ್ದಿಯ ಸಾಧಕ ಬಾಧಕ ಚಿಂತಿಸದೆ ಏನೇ ಬಂದರೂ ಬ್ರೇಕಿಂಗ್ ನ್ಯೂಸ್ ಕೊಡುತ್ತಾರಲ್ಲ, ವೀಕ್ಷಕರೇನು ದಡ್ಡರೇ!!!

ಬನ್ನಿ ಹಾಗಾದರೆ, ಎರಡನೆಯ ಸುದ್ದಿ ನೋಡೋಣ, ಮಾಧ್ಯಮದ ಸುದ್ದಿವಾಹಕರುಗಳಿಗೆ ಗೊತ್ತಾಗಿಲ್ಲ, ಇಲ್ಲದಿದ್ದರೆ ಅಲ್ಲೇ ಕಾದಿದ್ದು ದೊಡ್ಡ ಸುದ್ದಿ ಮಾಡ್ತಿದ್ರು. ನಮ್ಮ ಬಡಾವಣೆಯ ಮತದಾನದ ಬೂತಿನಿಂದ ಸ್ವಲ್ಪವೇ ದೂರದಲ್ಲಿರುವ ಮಣಿಪಾಲ್ ಆಸ್ಪತ್ರೆಯಿಂದ ಒಂದರ ಮೇಲೊಂದರಂತೆ ತುರ್ತು ವಾಹನಗಳ ಆಗಮನ ಮತಗಟ್ಟೆಗೆ. ಕುತೂಹಲ ತಡೆಯದೆ ವಿಚಾರಿಸಿದೆ, ಯಾಕೆ!!? ಯಾರಿಗೆ!!? ಏನಾಗಿದೆ ಮತಗಟ್ಟೆಯಲ್ಲಿ!!?

“ಇಲ್ಲ ತಾಯಿssss, ಆಸ್ಪತ್ರೆಯ ನಿಗಾ ವಾರ್ಡಿನಲ್ಲಿರುವ ರೋಗಿಗಳು ಮತ ಹಾಕಲು ಬಂದಿದ್ದಾರೆ”. ಓ!! ಇವರದು ನಿಜವಾದ ದೇಶಪ್ರೇಮ. ಹಾಗೆಂದುಕೊಂಡು ಅಭಿಮಾನದಿಂದ ಬಂದ ಒಂಬತ್ತು ಜನ ರೋಗಿಗಳ ಸಾಲನ್ನು ವೀಕ್ಷಿಸಿ ಅವರನ್ನು ಕರೆದುಕೊಂಡು ಬಂದ ಸಿಬ್ಬಂದಿಯನ್ನು ಮಾತನಾಡಿಸಲು, ಇವರೆಲ್ಲ ವಯೋವೃದ್ಧರು, ಸಾಮಾಜಿಕ ಪ್ರಜ್ಞೆಯುಳ್ಳ ನಾಗರಿಕರು. ಮತದಾನ ತಮ್ಮ ಹಕ್ಕು ಮತ್ತು ಕರ್ತವ್ಯ ಎಂದು ಅರಿತವರು ಇಂದು ಮತ ಚಲಾಯಿಸಲು ಬಂದಿದ್ದಾರೆ ಎಂಬ ಅಂಶ ತಿಳಿಯಿತು. ನಿಜವಾಗಲೂ ಇದು ಸುದ್ದಿಯಾಗಬೇಕಿತ್ತು! ನಮ್ಮ ಪುಣ್ಯ!!

ಅಷ್ಟರಲ್ಲಿ ಕೊನೆಯವರು ಸ್ಟ್ರೆಚರ್ (ಕೈಮಂಚ) ಮೇಲೆ ಆಗಮನ. ಸ್ಟ್ರೆಚರ್ ಸಮೇತ ಇಬ್ಬರು ಸಹಾಯಕರು ಅವರನ್ನು ಇ.ವಿ.ಎಂ. ಮಷೀನ್ ಹತ್ತಿರ ಕರೆದುಕೊಂಡು ಹೋದರು. ಮತದಾನ ಶಾಂತ ರೀತಿಯಲ್ಲಿಯೇ ನಡೆಯಿತು. ನಂತರ ಅವರನ್ನು ತುರ್ತು ವಾಹನದಲ್ಲಿ ಮಲಗಿಸಿ, ಸಹಾಯಕರು ಏನನ್ನೋ ಬಿಟ್ಟು ಹೋಗಿದ್ದನ್ನು ತೆಗೆದುಕೊಳ್ಳಲು ಮರಳಿ ಬಂದರು. ಅವರನ್ನು ವಿಚಾರಿಸಲಾಗಿ, ಆ ವೃದ್ದೆ ಹೈಲಿ ಕ್ವಾಲಿಫೈಡ್, ಎಜುಕೇಟೆಡ್, ಹೈಲಿ ಮ್ಯಾನರ್ಡ್ ಲೇಡಿ. ಸ್ಟ್ರೆಚರ್ ಹಿಡಿದುಕೊಂಡು ಬಂದ ಸಹಾಯಕರಿಗೆ, 'ಮತ ಹಾಕುವಾಗ ನೀವು ನೋಡಬಾರದು ಕಣ್ಣು ಮುಚ್ಚಿಕೊಳ್ಳಿ, ಮತದಾನ ಗೌಪ್ಯವಾಗಿ ಇರಬೇಕು' ಎಂದರಂತೆ. ನನಗೂ ಆ ಮತದಾರರ ಬಗೆಗೆ ಹೆಮ್ಮೆ ಮೂಡಿತು. ಆದರೂ ಕಿಡಿಗೇಡಿ ಮನಸ್ಸು ಒಂದಿದೆಯಲ್ಲ, ಅದು ಹೇಳುತ್ತಿತ್ತು! ಪಾಪ ಕಣ್ಣು ಮುಚ್ಚಿಕೊಳ್ಳಲು ಹೋಗಿ ಸಹಾಯಕರೇನಾದರೂ ಸ್ಟ್ರೆಚರ್ ಕೈಬಿಟ್ಟಿದ್ದರೆ ಒಂದು ಓಟು ಮಿಸ್ಸಾಗುತ್ತಿತ್ತು!

ಹೋದಲ್ಲೆಲ್ಲ ಹೀಗೆ ಈ ಮನಸ್ಸು ಎಲ್ಲವನ್ನು ವೀಕ್ಷಿಸಿ ಏನನ್ನೋ ತಲೆಗೆ ತುಂಬುತ್ತದೆ. ಮನೆಗೆ ಬಂದರೆ ಟಿವಿಯಲ್ಲಿ ಅದೇ ಬ್ರೇಕಿಂಗ್ ನ್ಯೂಸ್. ಬೇರೊಂದು ಊರಿನಲ್ಲಿ ಮತ್ತೊಬ್ಬ ವೃದ್ದೆ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರನ್ನು ಆಸ್ಪತ್ರೆಗೆ ಸೇರಿಸುವ ತರಾತುರಿಯಲ್ಲಿ ಮನೆಯವರು. ಆದರೆ ಆಸ್ಪತ್ರೆಗೆ ಸೇರಿಸುವ ಮೊದಲು ಮತ ಹಾಕಿಯೇ ಆಸ್ಪತ್ರೆ ಸೇರುವುದು ಎಂದು ಆ ವೃದ್ಧೆ ಹಠ ಮಾಡಿದರಂತೆ, ಅದಕ್ಕೆ ಅವರ ಮೊಮ್ಮಗ ಅಜ್ಜಿಯ ಆಸೆ ತೀರಿಸಲು ಮತಗಟ್ಟೆಗೆ ಅಜ್ಜಿಯನ್ನು ಕರೆದುಕೊಂಡು ಹೋಗಿ ಮತದಾನ ಮಾಡಿ ಮನೆಗೆ ಬರುವಷ್ಟರಲ್ಲಿ ಅಜ್ಜಿಯ ಪ್ರಾಣಪಕ್ಷಿ ಹಾರಿಹೋಗಿದೆ!!!. ನನ್ನ ಮನಸ್ಸಿನಲ್ಲಿ ಒಂದು ಆಲೋಚನೆ, ಅಜ್ಜಿಯು ಈ ಲೋಕದಿಂದಲೇ ನಿರ್ಗಮಿಸಿದ ಮೇಲೆ ಅವಳ ಮತ ಸಿಂಧುವೆ? ಹೋಗಲಿಬಿಡಿ, ಅಸಿಂಧುವಾದ ಎಷ್ಟೋ ವಿಷಯಗಳು ನಮ್ಮ ಮುಂದೆ ನಡೆಯುತ್ತಿರುವಾಗ ಪವಿತ್ರ ಮನಸ್ಸಿನಿಂದ ತನ್ನ ಆಲೋಚನೆಯಿಂದ ಅವರೇ ನೇತಾರರಾಗಬೇಕೆಂದು ಬಯಸಿದ ಈ ಆಲೋಚನೆ ಒಪ್ಪಿಕೊಳ್ಳುವಂತಹುದೆ ಮತ್ತು ಒಪ್ಪಿಕೊಳ್ಳುತ್ತಾರೆ.

ಕೊನೆಯದಾಗಿರುವ ಮಜಾ ಹೇಳಲೇಬೇಕು. ಸಂಜೆ 4:00 ಗಂಟೆಯವರೆಗೆ ಬೆಂಗಳೂರಿನಲ್ಲಿ ಆದ ಸರಾಸರಿ ಮತದಾನ 39%. ದೂರದರ್ಶನದಲ್ಲಿ ಬರುವ ವರದಿ ಕೇಳಿ ಜನಕ್ಕೆ ಸಾಮಾಜಿಕ ಪ್ರಜ್ಞೆ ಇಲ್ಲ ಎಂದು ಗೊಣಗುತ್ತಿರುವಷ್ಟರಲ್ಲಿ ಬಹುತೇಕ ಮತಗಟ್ಟೆಯಲ್ಲಿ ಬಿದ್ದೆವೋ ಎದ್ದೆವೋ ಎಂದು ಜನ ಓಡುಓಡುತ್ತಾ ಬಂದು ಸರತಿ ಸಾಲಿನಲ್ಲಿ ನಿಲ್ಲುವ ಬ್ರೇಕಿಂಗ್ ನ್ಯೂಸ್. ಅರೆ!! ಆರು ಗಂಟೆಯ ಹೊತ್ತಿಗೆ ಸರಾಸರಿ ಪರ್ಸೆಂಟ್ 68%. 6:00 ಗಂಟೆಯ ಒಳಗೆ ಬರುವವರಿಗೆಲ್ಲ ಮತ ಚಲಾಯಿಸಲು ಸಮ್ಮತಿಸಿ, ಟೋಕನ್ ನೀಡಿದ್ದರು. ಪಾಪ! ಚುನಾವಣಾಧಿಕಾರಿಗಳಿಗೆ ರಾತ್ರಿ 9:00 ಗಂಟೆಯವರೆಗೆ ಕೆಲಸ. ಎಷ್ಟೋ ಜನಕ್ಕೆ ತಡವಾಗಿ ಬಂದಿದ್ದಕ್ಕೆ ಮತ ಹಾಕಲು ಅನುಮತಿ ಸಿಗಲೇ ಇಲ್ಲಾ, ಜನಕ್ಕೇನು ಬಿಸಿಲಿನ ಬೇಗೆಯ ತೊಂದರೆಯಾ? ಹಾಗಿದ್ದರೆ ಮಳೆ ಬಿಸಿಲು ಚಳಿ ಎನ್ನದೆ, ಹಗಲು-ರಾತ್ರಿಯ ಅಂತರ ತಿಳಿಯದೆ ದೇಶದ ರಕ್ಷಣೆ ಮಾಡುವ ಸೈನಿಕನಿಗೆ ನಾವು ಸದಾ ಋಣಿಯಾಗಿರಲೇಬೇಕು.

***

ಸ್ವಲ್ಪ ಬದಲಾಗೋಣ

– ಮಾಲತಿ ಶ್ರೀನಿವಾಸನ್

ಬಾ ಗೆಳೆಯ ಸವಿಯೋಣ ಬದುಕಿನ
ಸೊಬಗ, ಜೀವನದ ಏಳುಬೀಳುಗಳಲಿ,
ನಿನ್ನೆಗಳ ಮರೆಯೋಣ ಇಂದಿನಲಿ
ಬದುಕೋಣ, ಹೊಸತ ಹುಡುಕೋಣ
ಬಾ ಗೆಳೆಯ ಸ್ವಲ್ಪ ಬದಲಾಗೋಣ
ಸ್ವಲ್ಪ ಬದಲಾಗೋಣ.

ನೀ ನೊಂದು ಕೋಪದಲಿ ಮೇಲೇರಿ
ಮನದ ಭಾವ ಬಾಡಿದರೆ, ನಿನ್ನ
ನಿಟ್ಟುಸಿರಲಿ ನನ್ನ ಸಾಂತ್ವನತೆಯ
ತಂಪುಣಿಸುವೆ, ನಗಿಸಲೆತ್ನಿಸುವೆ
ಬಾಗಿ ಶರಣಾಗುವೆ ಬಾ ಗೆಳೆಯ
ಸ್ವಲ್ಪ ಬದಲಾಗೋಣ, ಬದಲಾಗೋಣ.

ಏನೆಲ್ಲ ನೋಡಿದೆವು ಬಾಳ ಹಾದಿಯಲಿ
ಒಳಿತನುಳಿಸೋಣ, ಕೆಡುಕ ಮರೆಯೋಣ
ದ್ವೇಷದಳ್ಳುರಿಯ ಭಾವ ಸರಿಸೋಣ,
ಸುಖ ದುಃಖ ಜಯ ಅಪಜಯಗಳ
ಸಮೀಕರಿಸಿ ತಂಪೆರೆಯುವ ತಂಬೆಲರ
ಹರಿಸೋಣ. ಬಾ ಗೆಳೆಯ
ಸ್ವಲ್ಪ ಬದಲಾಗೋಣ ಸ್ವಲ್ಪ ಬದಲಾಗೋಣ.

ಮುಸ್ಸಂಜೆಯ ಮಬ್ಬು ಕಣ್ಣ ಮಂಜಾಗಿಸೆ
ನೀ ನನಗೆ ಬೆಳಕು, ನಾ ನಿನ್ನ ಚೈತನ್ಯಧಾರೆ
ದೂರಿಲ್ಲ ಗಮ್ಯ ಇಂದು ಭಾವನೆಗಳೆಲ್ಲ
ರಮ್ಯ, ಇಂದಿನಲಿ ನಿಲ್ಲೋಣ
ನಿನ್ನೆಗಳ ನೆನಪ ಸವಿಯೋಣ,
ಹೊಸತ ಅಪ್ಪೋಣ, ನಮ್ಮ ನಾಳೆಗಳ
ಇಂದು ಸಂಭ್ರಮಿಸೋಣ.

ಬದಲಾವಣೆ ಪ್ರಕೃತಿಯ ನಿಯಮ
ಪ್ರತಿ ಕ್ಷಣ ಸುತ್ತೆಲ್ಲ ಹೊಸ ಚಿಗುರು
ಹೊಸ ವಿಚಿತ್ರ ಆಯಾಮ, ನಿಂತ
ನೀರಾಗದೆ ಮುಂದೆ ಚಲಿಸೋಣ
ಬಾ ಗೆಳೆಯ ಸ್ವಲ್ಪ ಬದಲಾಗೋಣ
ಸ್ವಲ್ಪ ಬದಲಾಗೋಣ.

***

ಬಾಲ ಗೋಪಾಲ

– ಮಾಲತಿ ಶ್ರೀನಿವಾಸನ್

ಎಲ್ಲಿಂದ ಬಂದನಿವ ಸುಂದರ
ಮುದ್ದುಮುಖದ ಚೆಲುವ,
ತುಂಬಿಹ ಮನದಲ್ಲಿ ಹೊಸ
ರೀತಿಯ ಭಕ್ತಿ ಭಾವ.

ತಲೆ ತುಂಬ ಮೇಘ ವರ್ಣದ
ಕಪ್ಪು ಗುಂಗುರು ಕೇಶ, ಪುಟ್ಟ
ಕಾಯವನಪ್ಪಿಹುದು ನವಿರು
ಪೀತಾಂಬರದುಡುಗೆ.

ಕೊರಳಲ್ಲಿ ಮುತ್ತಿನ ಮಾಲೆ
ಮನಸೆಳೆಯಿತು ತುಟಿಯಂಚಿನ
ತುಂಟನಗೆಯ ಬಲೆ, ಬಟ್ಟಲ
ಬೆಣ್ಣೆ ಮೆದ್ದು, ಕೊಳಲ ನಾದದ
ಸುಧೆ ಹರಿಸಿದಾ ಕಲೆ

ಯಮುನೆಯಲ್ಲಿ ಗೋಪಬಾಲೆಯ
ರೊಡನೆ ಜಲ ಕ್ರೀಡೆ ರಾಸಲೀಲೆ
ಯಾಡಿ ನರ್ತಿಸುತ ಮೆರೆದಾ,
ಚಿತ್ರಪಟದಲ್ಲಿ ನಿಂತು ನಗುತ
ಮನದ ತುಂಬಾ ಚಿತ್ತಾರ ಬಿಡಿಸಿದ
ಮುದ್ದು "ಬಾಲಗೋಪಾಲ".

***

ಲಲಿತ ಪ್ರಬಂಧ

ಉಪ್ಪು

– ಕಮಲಾಕ್ಷಿ ಸಿ.ಆರ್.

"ಅದೆಷ್ಟು ಉಪ್ಪು ಹಾಕ್ಕೋತೀಯಪ್ಪ, ಸ್ವಲ್ಪ ಕಡಿಮೆ ಮಾಡು ಮಗನೆ" ಎಂದು ಚಿಕ್ಕ ಮಗನ ಮುಂದೆ ಒಮ್ಮೆ ಉಪ್ಪಿನ ಡಬ್ಬಿ ಕುಕ್ಕಿದೆ. ಮಗ ನಗುತ್ತಲೇ ಉಪ್ಪು ಹಾಕಿಕೊಂಡು, "ಸಪ್ಪೇ ಸಾಂಬಾರ್ ಕಲಸಿ ನಾಲಿಗೆ ಮೇಲೆ ಇಟ್ಟರೆ ಅದು ಉಪ್ಪು ಹಾಕಿಕೋಂತ ಹೇಳುತ್ತಮ್ಮ' ಎಂದ.

'ಸ್ವಲ್ಪ ಕಡಿಮೆ ಮಾಡು ಮಗನೆ, ನಾಲಿಗೆ ಅಷ್ಟೇ ರುಚಿ ಕೇಳೋದು. ಹೊಟ್ಟೆ ಒಳಗೆ ಹೋದ ಮೇಲೆ ಉಪ್ಪು ಸಪ್ಪೆ ಎಲ್ಲಾ ಒಂದೇ. ಆರೋಗ್ಯಕ್ಕೆ ಅತಿ ಉಪ್ಪು ಒಳ್ಳೇದಲ್ಲ" ಎನ್ನುವಾಗ, ಮಧ್ಯೆ ಪ್ರವೇಶಿಸಿದ ಮಗ, "ಇದು ಮನೆಯಮ್ಮ, ಇಲ್ಲೇ ನಿನ್ನ ಪಾಠ ಶುರು ಮಾಡಿದ್ಯಾ?" ಎಂದಾಗ ನಗು ಉಕ್ಕಿ ಬಂದು ಸುಮ್ಮನಾದೆ.

ಈ 'ಉಪ್ಪು' ಎರಡಕ್ಷರದ ಪದವಾದರೂ ಅಡಿಗೆ ಮನೆಯ ಅಧಿಪತಿಯಂತೆ ತನ್ನ ಹಕ್ಕು ಚಲಾಯಿಸುತ್ತದೆ. ಉಪ್ಪು, ಖಾರ, ಹುಳಿ, ಸಿಹಿ, ಒಗರು ಹಾಗೂ ಕಹಿ – ಈ ಷಡ್ ರುಚಿಗಳಲ್ಲಿ ಉಪ್ಪೇ ಪ್ರಧಾನ. ಖಾರ, ಹುಳಿ ಕಡಿಮೆ ಇದ್ದರೂ ಪರರವಾಗಿಲ್ಲ. ಸೂಕ್ತ ಪ್ರಮಾಣದ ಉಪ್ಪು ಬಳಸಲೇಬೇಕು. ಹಾಗಾಗಿಯೇ 'ರುಚಿಗೆ ತಕ್ಕಷ್ಟು ಉಪ್ಪು' ಎಂದು ಹೇಳುವರು. ಗಂಜಿ ಕುಡಿದರೂ, ಬರಿ ಅನ್ನವನ್ನು ಊಟ ಮಾಡಿದರೂ ಸರಿ, ಚಿಟಿಕೆ ಉಪ್ಪು ಕಲೆಸಿದರೂ ಊಟದ ಸ್ವಾದವೇ ಸ್ವಾದ. ಹಾಗೆಂದೇ "ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ" ಎಂಬ ಗಾದೆ ಹುಟ್ಟಿಕೊಂಡದ್ದು.

ಅಡುಗೆ ಉಪ್ಪಿನ ರಾಸಾಯನಿಕ ಹೆಸರು ಸೋಡಿಯಂ ಕ್ಲೋರೈಡ್. ಸೋಡಿಯಂ ಹಾಗೂ ಕ್ಲೋರಿನ್‌ಗಳಿಂದ ಆಗಿರುವ ಅಯಾನಿಕ ಸಂಯುಕ್ತ ವಸ್ತು. ಇದು ನೀರಿನಲ್ಲಿ ಕರಗುವ ಸಂಯುಕ್ತ ವಸ್ತು. ಸಮುದ್ರದ ನೀರಿನಲ್ಲಿ ಶೇ. 3ರಷ್ಟು ಇರುತ್ತದೆ.

ಅಡಿಗೆಯ ಸ್ವಾದ ಹೆಚ್ಚಿಸುವ ಈ ಉಪ್ಪಿನ ಉಪಯೋಗಗಳು ಅಸಂಖ್ಯ. ಇದರ ಇತಿಹಾಸವೂ ಗಹನವಾಗಿದೆ. ಉಪ್ಪಿಲ್ಲದ ಊಟ ಒಂದು ತುತ್ತು ಸಹ ಗಂಟಲೊಳಗೆ ಇಳಿಯದು. ಹಾಗೆಂದೇ ನಮ್ಮ ದೇಶವು ಬ್ರಿಟೀಷರ ಆಳ್ವಿಕೆಯಲ್ಲಿದ್ದಾಗ ೧೯೩೦ಲ್ಲಿ ಉಪ್ಪಿನ ಮೇಲೆ ಕರ ವಿಧಿಸಿ, ಭಾರತೀಯರು ಸ್ವತಃ ಉಪ್ಪು ತಾಯಾರಿಸುವುದಕ್ಕೆ ನಿರ್ಬಂಧನೆ ಹಾಕಿತ್ತು. ಕಡಲಿನ ನೀರಿನಿಂದ ದೊರೆಯುವ ಉಪ್ಪಿಗೆ ಕರ ಹಾಕಿ, ಜನಸಾಮಾನ್ಯರ ಬದುಕನ್ನು ದುಸ್ತರಗೊಳಿಸಿದ್ದರು. ಈ ಸಮಯದಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ಅನುಯಾಯಿಗಳು, ಹೋರಾಟಗಾರರೊಂದಿಗೆ ಸಾಬರಮತಿ ಆಶ್ರಮದಿಂದ ಕಡಲ ಕಿನಾರೆಯ ದಾಂಡಿ ಗ್ರಾಮಕ್ಕೆ 375 ಕಿ.ಮೀ. ಕಾಲುನಡಿಗೆಯಲ್ಲಿ ಸತತ 23 ದಿನಗಳ ಕಾಲ ನಡೆದಿದ್ದರು. ಅಹಿಂಸಾತ್ಮವಾಗಿ ನಡೆದ ಈ 'ಉಪ್ಪಿನ ಸತ್ಯಾಗ್ರಹ'ವು ಸ್ವದೇಶೀಯತೆಯನ್ನು ಪ್ರೋತ್ಸಾಹಿಸಿ ಸ್ವಾತಂತ್ರ್ಯ ಸಂಗ್ರಾಮ ತೀವ್ರವಾಗಲು ಕಾರಣವಾಯಿತು.

ಪ್ರಪಂಚದಾದ್ಯಂತ ರುಚಿಯ ಮೂಲವಾಗಿರುವ ಉಪ್ಪಿನ ಇತಿಹಾಸ ಕೆದಕಿಷ್ಟೂ ವಿಸ್ತಾರ. ಲ್ಯಾಟಿನ್ ಭಾಷೆಯಲ್ಲಿ ಉಪ್ಪಿನ ಮೂಲಕ ನೀಡಲಾದದ್ದು ಎಂಬರ್ಥ ಕೊಡುವ 'ಸಲಾರಿಯಮ್" ನಿಂದ 'ಸ್ಯಾಲರಿ' ಪದದ ಆಂಗ್ಲ ಪದಕ್ಕೆ ಮೂಲವಾಯಿತಂತೆ. ಸಂಬಳ ಎಂದು ಬಳಸುವ ಪದ ಕೂಡ ಉಪ್ಪಿನಿಂದಲೇ ಬಂದದ್ದು ಎಂದರೆ ವಿಸ್ಮಯ ಎನಿಸುವುದು. ಹನ್ನೆರಡನೇ ಶತಮಾನದಲ್ಲಿ ಮಾಲಿ ಸಾಮ್ರಾಜ್ಯದಲ್ಲಿ ಚಿನ್ನವನ್ನು ಕೊಟ್ಟು ಉಪ್ಪನ್ನು ಕೊಳ್ಳುತ್ತಿದ್ದರೆಂಬುದು ಉಪ್ಪಿನ ಮೌಲ್ಯವನ್ನು ಊಹಿಸಬಹುದು. ರೋಮ್ ಸೈನಿಕರು ಮತ್ತು ಕೆಲಸಗಾರರಿಗೆ ಉಪ್ಪಿನ ರೂಪದಲ್ಲಿ ಸಂಬಳವನ್ನು ನೀಡಲಾಗುತ್ತಿತ್ತು. ಆದರೆ ಈ ರೀತಿ ಪಡೆದ ಉಪ್ಪನ್ನು ಕಾಪಾಡಿಕೊಳ್ಳುವುದು ಸಾಕಷ್ಟು ತ್ರಾಸದಾಯಕವಾಗಿದ್ದಿತು.

ಅಂದಿನ ಕಾಲದಲ್ಲಿ ವರದಕ್ಷಿಣೆ ರೂಪದಲ್ಲಿ ಉಪ್ಪನ್ನು ನೀಡಲಾಗುತ್ತಿತ್ತು. ಇಂದಿಗೂ ಉಪ್ಪು ಉತ್ಕೃಷ್ಟವೇ. ಹಾಗಾಗಿ ಉಪ್ಪನ್ನು ದಾನ ಮಾಡುವ ಸಂಪ್ರದಾಯವಿದೆ. 'ಉಪ್ಪು ತಿಂದ ಮನೆಗೆ ದ್ರೋಹ ಬಗೆಯಬಾರದು' ಎಂಬ ನೀತಿ ಮಾತು ಅದರ ಉತ್ಕೃಷ್ಟತೆಯನ್ನು ಸಾರುತ್ತದೆ.

ಹಣವನ್ನು ಉಪ್ಪಿಗೆ ಹೋಲಿಸುವರು. ಉಪ್ಪು ಮಿತವಾಗಿದ್ದರೆ ರುಚಿ, ಹೆಚ್ಚಾದರೆ ದಾಹ. ಹಾಗೆಯೇ ಹಣ ಜೀವನಕ್ಕೆ ಅವಶ್ಯ. ಅತಿಯಾದರೆ ಮೋಹ. ಅದರ ಗಳಿಕೆಗಾಗಿ ಸ್ವಾರ್ಥ, ಅಡ್ಡದಾರಿ, ಮೋಸ, ದ್ರೋಹಗಳಂತಹ ತಪ್ಪುದಾರಿ ಹಿಡದು ಅಪರಾಧಿಯಾಗುತ್ತಾನೆ. ಹಾಗೆಂದೇ 'ಉಪ್ಪು ತಿಂದವನು ನೀರು ಕುಡಿಯಲೇಬೇಕು' ಎಂಬ ಗಾದೆ ಹುಟ್ಟಿಕೊಂಡಿದೆ.

ಉಪ್ಪು ಆಹಾರದ ಮೂಲ ರುಚಿಗಳಲ್ಲಿ ಒಂದು. ಆಹಾರವನ್ನು ಕೆಡದಂತೆ ರಕ್ಷಿಸುವಲ್ಲಿ ಉಪ್ಪನ್ನು ಬಳಸಲಾಗುತ್ತದೆ. ಉಪ್ಪಿನಕಾಯಿ ಮಾಡುವಾಗ, ನೆಲ್ಲಿ, ಶುಂಠಿ, ಕೆಲವು ಪದಾರ್ಥಗಳ ಸಂರಕ್ಷಕವಾಗಿ ಉಪ್ಪು ಪ್ರಧಾನ. ಮಾನವ ದೇಹದ ಪ್ರತಿಯೊಂದು ಅಂಗಕ್ಕೂ ಉಪ್ಪು ಬೇಕೇಬೇಕು. ದೇಹದೊಳಗಿನ ಎಲ್ಲಾ ಅನಗತ್ಯ ಜೀವಾಣುಗಳನ್ನು ಹೊರಹಾಕಲು ಉಪ್ಪು ಸಹಾಯ ಮಾಡುತ್ತದೆ ಮತ್ತು ದೇಹವನ್ನು ಶುದ್ಧಗೊಳಿಸುತ್ತದೆ. ಹೀಗಾಗಿಯೇ ಗಂಟಲು ಸೋಂಕಿನ ಸಮಯದಲ್ಲಿ ಆಗಾಗ್ಗೆ ಉಪ್ಪು ನೀರಿನಿಂದ ಬಾಯಿ ಮುಕ್ಕಳಿಸಿದಾಗ ಆರಾಮದಾಯಕ ಎನಿಸುವುದು.

ದೇಹದ ಮೂಳೆ ಸಾಂದ್ರತೆ, ಸಮರ್ಪಕ ರಕ್ತ ಪರಿಚಲನೆ ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಉಪ್ಪು ಸಹಕಾರಿ. ನೀರಿನ ಅಂಶವನ್ನು ದೇಹದಾದ್ಯಂತ ಪೂರೈಸಲು ಸಹಾಯ ಮಾಡುತ್ತದೆ ಮತ್ತು ನಿರ್ಜಲೀಕರಣವನ್ನು ತಪ್ಪಿಸುತ್ತದೆ. ಎಳನೀರಿನಲ್ಲಿರುವ ಬಹುತೇಕ ಪೋಷಕಾಂಶಗಳನ್ನು ಬೆಚ್ಚಗಿನ ಉಪ್ಪು ನೀರು ಹೊಂದಿದೆ. ಹಾಗೆಂದೇ ವಾಂತಿ ಬೇಧಿ ಆದಂತಹ ಸಮಯದಲ್ಲಿ ಕುದಿಸಿ ಆರಿಸಿದ ನೀರಿಗೆ ಅಲ್ಪ ಪ್ರಮಾಣದ ಸಕ್ಕರೆಯೊಡನೆ ಉಪ್ಪನ್ನು ಮಿಶ್ರಣ ಮಾಡಿ ನಿರ್ಜಲೀಕರಣವಾದ ಪ್ರಮಾಣವನ್ನು ಸಮದೂಗಿಸಲು ಯತ್ನಿಸುವುದು.

ರೇಷ್ಮೆಯಂತಹ ನಯವಾದ ಚರ್ಮವನ್ನು ಹೊಂದಲು ನಿತ್ಯ ತಪ್ಪದೇ ಬೆಚ್ಚಗಿನ ಚಿಟಿಕೆ ಉಪ್ಪು ಹಾಕಿದ ನೀರು ಸೇವಿಸಬೇಕು. ಇಂತಹ ನೀರಿನ ಸೇವನೆಯು ಚರ್ಮವನ್ನು ನೈಸರ್ಗಿಕವಾಗಿ ಮಾಯಿಶ್ಚರೈಸ್ ಮಾಡುತ್ತದೆ.

ಉಪ್ಪು ಮತ್ತು ಮಂಜುಗೆಡ್ಡೆಯು ಶೈತ್ಯ ಮಿಶ್ರಣವಾಗಿ ಬಳಕೆಯಾಗುತ್ತದೆ. ಪಿಂಗಾಣಿ ಮತ್ತು ಇತರ ಮಣ್ಣಿನ ಪಾತ್ರೆ, ಕೊಳಾಯಿ, ಜಾಡಿ-ಇತ್ಯಾದಿಗಳಿಗೆ ಹೊಳಪು ಕೊಡಲು, ವೈದ್ಯಕೀಯ ಕ್ಷೇತ್ರದಲ್ಲಿ, ರಾಸಾಯನಿಕ ವಿಶ್ಲೇಷಣೆಯಲ್ಲಿ, ಗಾಜು, ಚರ್ಮ, ಕಾಗದ ಮತ್ತು ಬಟ್ಟೆ ಉದ್ಯಮಗಳಲ್ಲಿ ಉಪ್ಪಿನ ಬಳಕೆ ವ್ಯಾಪಕವಾಗಿದೆ.

ಉಪ್ಪು ದೇಹಕ್ಕೆ ಅತ್ಯವಶ್ಯ. ಹಾಗೆಂದು ಅತಿಯಾದ ಉಪ್ಪು ದಾಹದ ಜೊತೆ ಗಂಭೀರ ಪರಿಣಾಮವನ್ನು ತರುತ್ತದೆ. 0.9% ಗಾತ್ರ ಉಪ್ಪು ಉಪಯುಕ್ತ ಹಾಗೂ ಅದುವೇ ಸಮಪ್ರಮಾಣ. ಅದಕ್ಕಿಂದ ಹೆಚ್ಚಾದರೆ ರಕ್ತಕಣದ ನೀರು ಹೊರಬಂದು ರಕ್ತಕಣ ಒಣಗುವುದು ಹಾಗೆಯೇ ದೇಹ ಊತವಾಗುವುದು. ಇದನ್ನೇ ರಕ್ತದೊತ್ತಡ ಎನ್ನುವುದು. 0.9% ಕಡಿಮೆಯಾದರೆ ರಕ್ತಕಣದೊಳಗೆ ಸುತ್ತಲಿನ ನೀರು ರಕ್ತಕಣಕ್ಕೆ ಹರಿದು, ರಕ್ತಕಣ ಊತಗೊಳ್ಳುವುದು. ಆದ್ದರಿಂದ ಪ್ರತಿನಿತ್ಯದ ಆಹಾರ ಸೇವನೆಯಲ್ಲಿ ಉಪ್ಪು ಅಗತ್ಯಕ್ಕೆ ತಕ್ಕಷ್ಟು ಇರಲೇಬೇಕು.

ಬದುಕಿರುವವರೆಗೂ ಆ ನಂತರವೂ ಉಪ್ಪು ಅತ್ಯವಶ್ಯಕ. ಮೈ ಕೈ ನೋವಾದಾಗ ಶಾಖ ಕೊಡಲು, ದೃಷ್ಟಿ ತೆಗೆಯಲು ಉಪ್ಪನ್ನು ನಿವಾಳಿಸುತ್ತಾರೆ. ಶವ ಸಂಸ್ಕಾರಕ್ಕೂ ಉಪ್ಪನ್ನು ಬಳಸುವರು.

'ಆಲಿಬಾಬ ಮತ್ತು ನಲವತ್ತು ಕಳ್ಳರು' ಕತೆಯಲ್ಲಿ ಉಪ್ಪಿನ ಪ್ರಸ್ತಾಪದಿಂದಲೇ ಕಳ್ಳರನ್ನು ಹಿಡಿಯಲು ಸಾಧ್ಯವಾದದ್ದು.

ರಾಜಕುಮಾರಿಯೊಬ್ಬಳು ತನ್ನ ತಂದೆಗೆ, ತಾನು ತಂದೆಯನ್ನು ಉಪ್ಪಿನಷ್ಟು ಪ್ರೀತಿಸುತ್ತೇನೆ ಎಂದಾಗ ರಾಜ ಆಕೆಯನ್ನು ತನ್ನ ರಾಜ್ಯದಿಂದಲೇ ಬಹಿಷ್ಕಾರ ಹಾಕುತ್ತಾನೆ. ಕೊನೆಗೆ ಉಪ್ಪಿಲ್ಲದ ಊಟ ಮಾಡುವಾಗ ಮಹತ್ವ ಅರಿತು ಮಗಳ ಬಳಿ ಕ್ಷಮೆ ಕೇಳುತ್ತಾನೆ.

ಹಿಂದೆ ಸೊಸೆ ಮಾಡಿಟ್ಟ ರುಚಿಯಾದ ಅಡುಗೆ ಕೆಡಿಸಲು ಮತ್ಸರಿ ಅತ್ತೆಯಂದಿರು ಉಪ್ಪು ಸುರಿಯುತ್ತಿದ್ದರಂತೆ.

ಆಲಸಿಗಳನ್ನು ಬೈಯ್ಯುವಾಗ, "ನಿನ್ನ ಮುಖ ನೋಡಿದ್ರೆ ಉಪ್ಪೂ ಹುಟ್ಟೋದಿಲ್ಲ" ಅಂತಾರೆ. ಕೆಲವರಂತೂ ಮಾತನಾಡುವಾಗ ಸರಳವಾದ ವಿಚಾರವನ್ನು ಉಪ್ಪು ಖಾರ ಹಚ್ಚಿ ಹೇಳ್ತಾರೆ.

'ಉಪ್ಪಿನ ರುಚಿ ನೋಡಿದ ದೇಹ' ಎಂಬ ಹೇಳಿಕೆ ಮನುಷ್ಯನ ವಾಂಛೆಯ ವರ್ಣನೆಗೆ ಬಳಸುತ್ತಾರೆಂದರೆ ಉಪ್ಪಿನ ಪ್ರಭಾವ ಎಷ್ಟು ಎಂದು ಅರಿವಾಗುತ್ತದೆ.

ಉಪ್ಪಿಟ್ಟವರನ್ನು ಮುಪ್ಪಿನ ತನಕ ನೆನೆ ಎಂಬ ಗಾದೆಯೂ ಉಂಟು.

ಸರ್ವಂ ಲವಣಂ ಜಗಂ – ಉಪ್ಪಿನ ಮಹಿಮೆಯನ್ನು ಬರೆಯುತ್ತ ಹೋದರೆ, ಇನ್ನಷ್ಟು ಪುಟ ತುಂಬುವುವು. ಉಪ್ಪು ರುಚಿಗೆ ತಕ್ಕಷ್ಟೇ ಬಳಕೆಯಾಗಿ, ಆಹಾರದ ಸ್ವಾದ ಹೆಚ್ಚಿಸಲಿ.

***

ಪುಸ್ತಕ ಪರಿಚಯ

ಕೃತಿ: ಅಂಜದಿರು ಮನವೇ

ಲೇಖಕಿ: ಶ್ರೀಮತಿ.ಗಾಯತ್ರಿ ಮೂರ್ತಿ; ಪ್ರಕಾಶನ: ನವಕರ್ನಾಟಕ ಪ್ರಕಾಶನ, ಬೆಂಗಳೂರು

– ಜಿ.ವಿ ನಿರ್ಮಲ



ಗೆಳತಿ ಗಾಯತ್ರಿ ಮೂರ್ತಿಯವರು ಬರೆದಿರುವ 'ಅಂಜದಿರು ಮನವೇ' ಕೃತಿಯ ಶೀರ್ಷಿಕೆ ಓದುತ್ತಿದ್ದಂತೆ ಇಲ್ಲಿ ಮನಸ್ಸು ಅಂಜುವಂತಹ ವಿಷಯವೇನಿದೆ ಎಂದು ಕುತೂಹಲ ಮೂಡುತ್ತದೆ. ಅಷ್ಟರಲ್ಲಿ 'ಕ್ಯಾನ್ಸರ್‌ನೊಂದಿಗೆ ದಿಟ್ಟ ಹೋರಾಟ' ಎನ್ನುವ ಘೋಷವಾಕ್ಯ ನಿಮ್ಮ ಕುತೂಹಲಕ್ಕೆ ಉತ್ತರ ನೀಡುತ್ತದೆ. ಆದರೆ 'ಕ್ಯಾನ್ಸರ್ ವಿರುದ್ಧದ ದಿಟ್ಟ ಹೋರಾಟ' ಎನ್ನುವುದು ಘೋಷವಾಕ್ಯಕ್ಕೆ ಹೆಚ್ಚು ಸಮಂಜಸ ಎಂಬುದು ನನ್ನ ಅಭಿಪ್ರಾಯ. ಸಾಧಾರಣವಾಗಿ ಶಾಖಾಹಾರಿ ಗಳಿಗೆ ಅಪರೂಪವಾಗಿ ಅಡರುವ ದೊಡ್ಡ ಕರುಳಿನ ಕ್ಯಾನ್ಸರ್ ಗಡ್ಡೆ ಮೂರನೆಯ ಹಂತದ ಹೊಸ್ತಿಲಿನಲ್ಲಿ ತುದಿಗಾಲಿನಲ್ಲಿ ನಿಂತಿರುವಾಗ ಅರಿವಾಗಿ, ಅದನ್ನು ಜಯಸಿ ಬಂದ ಸಾಹಸಿ ಲೇಖಕಿ ಗಾಯತ್ರಿ ಮೂರ್ತಿ.

ಸರಿಸುಮಾರು ಐವತ್ತೈದು ವರ್ಷಗಳಿಂದ ಪರಿಚಿತಳಾಗಿರುವ ಗಾಯತ್ರಿಗೆ ಆಗಾಗ್ಗೆ ಫೋನ್ ಮಾಡುತ್ತಿರುತ್ತೇನೆ. ಒಂದು ದಿನ ತನಗೆ ಏನೋ ಹುಶಾರಿಲ್ಲವೆಂದು ಹೇಳಿದ್ದಳು. ಮೂರ್ನಾಲ್ಕು ದಿನಗಳ ನಂತರ ಫೋನ್ ಮಾಡಿ 'ಹುಶಾರಾಗಿದ್ದೀಯಾ?' ಎಂದು ಮಾಮೂಲಿನಂತೆ ಕೇಳಿದಾಗ ಅವಳು ಧಡಕ್ಕನೆ 'ಖಂಡಿತ ಇಲ್ಲ. ನನಗೆ ಕ್ಯಾನ್ಸರ್ ಬಂದಿದೆ' ಎಂದಾಗ ನನಗೆ ಮಾತೇ ಹೊರಡಲಿಲ್ಲ. ದೊಡ್ಡ ಕರುಳಿನಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿದೆ ಎಂದು ವೈದ್ಯರು ಸ್ಪಷ್ಟವಾಗಿ ತಿಳಿಸಿದ್ದನ್ನೂ ಗಾಯತ್ರಿ ಸಕಾರಾತ್ಮಕವಾಗಿ ಸ್ವೀಕರಿಸಿದ್ದಳು! ರೋಗಿಗೆ ರೋಗದ ಸ್ಪಷ್ಟ ಚಿತ್ರಣ ನೀಡುವುದು ಚಿಕಿತ್ಸೆಗೆ ಸಹಕಾರಿ ಎನ್ನುವ ಅಭಿಪ್ರಾಯವನ್ನೇ ಲೇಖಕಿ ಪೂರ್ಣವಿಶ್ವಾಸದೊಂದಿಗೆ ತನ್ನ ಕೃತಿಯಲ್ಲಿಯೂ ವ್ಯಕ್ತಪಡಿಸಿರುವುದು ಗಮನಾರ್ಹ.

ಗಾಯತ್ರಿಯ ಈ ಕೃತಿಯನ್ನು ವಿಮರ್ಶಾತ್ಮಕವಾಗಿ ಓದಲು ನನಗೆ ಮನಸ್ಸೇ ಬರಲಿಲ್ಲ. ಬರೋಬ್ಬರಿ ಐವತ್ತೈದು ವರ್ಷಗಳಿಂದ ನಾನು ಅವರನ್ನು ಬಲ್ಲೆ (ಅವಳನ್ನು ಎನ್ನುವುದು ಹೆಚ್ಚು ಸರಿಯಾಗುತ್ತದೆ). ಯಾವಾಗಲೂ ನಗುನಗುತ್ತಾ ಬೆಳದಿಂಗಳಂತೆ ತನ್ನ ನಗುವನ್ನು ಹರಡುವ ಗಾಯತ್ರಿ (ಅಲೆಅಲೆಯಾಗಿ ನಗುವವಳೆಂದು ಪ್ರಸಿದ್ಧ ಹಾಸ್ಯ ಲೇಖಕಿ ನುಗ್ಗೇಹಳ್ಳಿ ಪಂಕಜರವರೂ ಅಭಿಪ್ರಾಯ ವ್ಯಕ್ತಪಡಿಸಿದ್ದರು) ಈ ಕೃತಿಯಲ್ಲಿ ತಾವು ಕ್ಯಾನ್ಸರ್ ರೋಗದ ವಿರುದ್ಧ ಹೋರಾಡಿದ ಸಮಯದಲ್ಲಿ ಸ್ವತಃ ಪಟ್ಟ ಕಷ್ಟ, ಬವಣೆಗಳ ಬಗ್ಗೆಯೇ ಬರೆದಿರುವುದನ್ನು ಹೇಗೆ ಓದಲಿ ಎನ್ನುವುದೇ ನನ್ನ ಹಿಂಜರಿಕೆಗೆ ಕಾರಣ. ನನ್ನ ಅಭಿಪ್ರಾಯ ತಿಳಿಸಲು

ಕರಡು ಪ್ರತಿಯನ್ನು ಓದುವಾಗಲೇ ನನಗೆ ಸಾಕುಸಾಕೆನಿಸಿದ್ದು ಮತ್ತೊಮ್ಮೆ ವಿಮರ್ಶಾತ್ಮಕವಾಗಿ ಓದುವುದು ಅನಿವಾರ್ಯವಾಗಿದೆ. ಬಹಳ ಹಿಂದೆ ನನ್ನ ಗೆಳತಿ ಸುನಂದಾರವರು ತಾವು ಮೂತ್ರಪಿಂಡ ತಳಿ ಮಾಡಿಸಿಕೊಂಡ ವಿಷಯವಾಗಿ 'ಪುನರ್ಜನ್ಮ' ಕೃತಿಯನ್ನು ಬರೆದಾಗಲೂ ನನಗೆ ಇದೇ ಅನುಭವವಾಗಿದ್ದು ನೆನಪಾಯಿತು.

ಗಾಯತ್ರಿಯ ಬರವಣಿಗೆಯ ಬಗ್ಗೆ ಒಂದೆರಡು ವಾಕ್ಯಗಳು. ಬಹಳ ವರ್ಷಗಳಿಂದ ವಿಜ್ಞಾನ, ವಿಶೇಷವಾಗಿ ಮಕ್ಕಳಿಗೆ ಸರಳವಾಗಿ ವಿಜ್ಞಾನ, ಹಲವು ಉತ್ಕೃಷ್ಟ ವೈಜ್ಞಾನಿಕ ಕೃತಿಗಳು, ಸಾಮಾಜಿಕ ಕಾದಂಬರಿ, ಹಾಸ್ಯಲೇಪಿತ ಲೇಖನಗಳು, ಅನುವಾದ, ಸಂಪಾದನೆ– ಹೀಗೆ ಹಲವಾರು ವಿಭಾಗಗಳಲ್ಲಿ ಸುಲಲಿತವಾಗಿ ಬರೆಯುವ ಸಾಮರ್ಥ್ಯ ಗಳಿಸಿರುವ ಅಪರೂಪದ ಲೇಖಕಿ. ಇಂತಹ ಸಮರ್ಥ ಲೇಖಕಿ ತನ್ನ ಬದುಕಿನಲ್ಲಿ ಎದುರಿಸಿದ ಅತಿ ದೊಡ್ಡ ಸವಾಲು 'ಕ್ಯಾನ್ಸರ್' ವಿರುದ್ಧದ ಹೋರಾಟ. ರೋಗವನ್ನು ಎದುರಿಸುವುದರ ಜೊತೆಗೆ ರೋಗದ ಲಕ್ಷಣಗಳು, ಅದು ಕಂಡಾಗ ಅವರಿಗೆ ಉಂಟಾದ ಆಘಾತ, ಗಾಬರಿ ಮತ್ತು ಕಸಿವಿಸಿ, ಸಂಬಂಧಿಸಿದ ನಿದಾನ ವಿಧಾನಗಳು ಎಲ್ಲವನ್ನೂ ನೆನಪಿನಲ್ಲಿರಿಸಿಕೊಂಡು ಬರವಣಿಗೆಯ ರೂಪ ನೀಡಿರುವುದು ಎಂತಹವರೂ ಮೆಚ್ಚತಕ್ಕದ್ದೆ. ಅಷ್ಟೇ ಅಲ್ಲದೆ ರೋಗದ ವಿವಿಧ ಹಂತಗಳ ಬಗ್ಗೆ, ನಿದಾನಗಳ ಬಗ್ಗೆ, PET(Positron Emission Tomography), ವಿಕಿರಣ ಚಿಕಿತ್ಸೆ, ಕಿಮೋಥೆರಪಿ, ಸ್ಟೋಮಾ ಮತ್ತು ಅದರ ವಿಧಗಳು ಮುಂತಾದ ಹಲವು ವಿಷಯಗಳ ಅನಾನುಕೂಲಗಳು ಹಾಗೂ ಅವುಗಳ ಅಡ್ಡ ಪರಿಣಾಮಗಳ ಬಗ್ಗೆ ಓರ್ವ ವೈಜ್ಞಾನಿಕಳಂತೆ ಸಮಗ್ರವಾಗಿ ಚಿಂತಿಸಿ, ಗ್ರಹಿಸಿ ಅದನ್ನು ಸರಳವಾಗಿ ಎಲ್ಲ ಓದುಗರಿಗೆ ಅರ್ಥವಾಗುವಂತೆ ಬರೆಯುವ ಶ್ರಮ ತೆಗೆದುಕೊಂಡಿರುವುದು ಸ್ತುತ್ಯಾರ್ಹ.

ಗಾಯತ್ರಿ ಪದೇಪದೇ ತಮ್ಮ ಪುಸ್ತಕದಲ್ಲಿ ಹೇಳುವಂತೆ 'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ' ಎನ್ನುವ ಮನೋಭಾವದಿಂದ ದೇವರಲ್ಲಿ ನಂಬಿಕೆ ಇಟ್ಟು ರೋಗವನ್ನು ನಿರ್ಲಿಪ್ತಳಾಗಿದ್ದು ಸ್ವೀಕರಿಸಿದ್ದು ಸಹಜವೇ. ಆಧುನಿಕ ವೈದ್ಯಕೀಯದಲ್ಲಿ ಎಷ್ಟೇ ಭರವಸೆಯನ್ನಿಟ್ಟಿದ್ದರೂ ಕಾಣದ ದೈವದಲ್ಲಿರುವ ನಂಬಿಕೆ ಮತ್ತು ವಿಶ್ವಾಸಗಳು ನಮಗೆ ಧೈರ್ಯ ನೀಡುತ್ತವೆ ಎನ್ನುವುದನ್ನೂ ಒಪ್ಪಲೇಬೇಕು. ಆ ಸಮಯದಲ್ಲಿ ಮನೆಯವರೆಲ್ಲರೂ ಅವರಿಗೆ ಒತ್ತಾಸೆಯಾಗಿ ನಿಂತದ್ದು, ವಿಶೇಷವಾಗಿ ಅವರ ತಾಯಿ ಬಂದು ಅವರಿಗೆ ಧೈರ್ಯ ತುಂಬಿದ್ದು, ಸಮೀಪ ಬಂಧುಗಳು ನಾನಾ ರೀತಿ ಸಹಾಯ ನೀಡಿದ್ದು, ಜೊತೆಗೆ ಬಹುಮುಖ್ಯವಾಗಿ ಅಗತ್ಯವಾದ ಹಣ ಒದಗಿ ಬಂದದ್ದು ಎಲ್ಲವೂ ಅವಳ ದುರದೃಷ್ಟದೊಳಗಿನ ಅದೃಷ್ಟದ ಚುಕ್ಕಿಗಳೆಂದೇ ಪರಿಗಣಿಸಬೇಕು.

ಗಾಯತ್ರಿ ಈ ಕೃತಿಯನ್ನು ಬರೆಯುವಾಗ ಮತ್ತೆರಡು ವಿಷಯಗಳನ್ನು ಗಮನಿಸಿರುವುದು ಕಂಡುಬರುತ್ತದೆ. ಕ್ಯಾನ್ಸರ್ ಎಂದ ಕೂಡಲೆ ರೋಗ ಅಡರಿದ ವ್ಯಕ್ತಿಯ ಜಂಘಾಬಲ ಉಡುಗಿ, ಮನೋಸ್ಥೈರ್ಯವೇ ಮಾಯವಾಗುತ್ತದೆ. ಆದರೆ ಗಾಯತ್ರಿ ಈ ವಿಷಯದಲ್ಲಿ ಬಹಳ ಧೈರ್ಯಸ್ಥೆ. ತಾನು ಧೈರ್ಯಗೆಟ್ಟರೆ ಮನೆಯವರೆಲ್ಲರೂ ಪೆಚ್ಚಾಗುತ್ತಾರೆ ಎಂದು ಗಟ್ಟಿ ಮನಸ್ಸಿನಿಂದ ಹೋರಾಟದ ಕಣಕ್ಕಿಳಿದವರು. ಇದೇ ರೋಗದ ಬವಣೆಗೆ ಸಿಕ್ಕಿರುವವರಿಗೂ ಈ ಸಾಲುಗಳನ್ನು ಓದುವಾಗ ಸ್ವಲ್ಪ ಧೈರ್ಯ ಮೂಡುವುದು ನಿಶ್ಚಿತ. ಆರಂಭದ ಹಂತದಲ್ಲಿಯೇ ಸೂಕ್ತವಾದ ಪರೀಕ್ಷೆಗೆ ಒಳಗಾದಲ್ಲಿ ರೋಗದಿಂದ ಮುಕ್ತಿ ಪಡೆಯ ಬಹುದೆನ್ನುವ ವಿಷಯವನ್ನು ಪದೇಪದೇ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಶರೀರದಲ್ಲಿ ಯಾವುದೇ ಸಮಯದಲ್ಲಿ ಸ್ವಲ್ಪ ಬದಲಾವಣೆ ಕಂಡರೂ ಅಲಕ್ಷ್ಯಿಸದೆ ವೈದ್ಯರಲ್ಲಿ ಮನಬಿಚ್ಚಿ ಹೇಳಿಕೊಳ್ಳುವುದು ಅಗತ್ಯ ಎಂದೂ ಮತ್ತೆಮತ್ತೆ ಘಂಟಾಘೋಷವಾಗಿ ತಿಳಿಸಿದ್ದಾರೆ.

ತಮ್ಮ ಬರೆಹದ ನಡುನಡುವೆ ಇತರ ಕ್ಯಾನ್ಸರ್ ರೋಗಿಗಳ ಬಗ್ಗೆ, ಅವರಿಗೆ ಆವರಿಸಿದ ವಿವಿಧ ಬಗೆಯ ಕ್ಯಾನ್ಸರ್ ಬಗ್ಗೆ ವಿವರಣೆ ನೀಡಿರುವುದು ಉಪಯುಕ್ತವಾದ ಮಾಹಿತಿ. ಹಲವು ರೋಗಿಗಳನ್ನು ಖುದ್ದಾಗಿ ಸಂಪರ್ಕ ಮಾಡಿಯೂ ವಿಷಯವನ್ನು ಗ್ರಹಿಸಿದ್ದಾರೆ. ಆ ಹಿತೈಷಿಗಳು ಕೂಡ ಇವರಿಗೆ ಸಹಕಾರ ನೀಡಿ, ತಮ್ಮ ಅನುಭವಗಳನ್ನು ಹಂಚಿಕೊಂಡಿರುವುದು ಅಭಿನಂದನೀಯ. ವಿಕಿರಣ ಚಿಕಿತ್ಸೆಯ ಸಮಯದಲ್ಲಿ ಪುಟ್ಟ ಮಕ್ಕಳಿಗೂ ಕ್ಯಾನ್ಸರ್ ರೋಗ ತಟ್ಟಿರುವುದನ್ನು ಕಂಡಾಗ ಲೇಖಕಿ ಖುದ್ದು ಬವಣೆಯನ್ನೂ ಕ್ಷಣ ಕಾಲ ಮರೆತು ಅವರಿಗಾಗಿ ಮರಗುತ್ತಾರೆ. ಇದು ಲೇಖಕಿಯ ಹೃದಯವಂತಿಕೆಗೆ ಕೈಗನ್ನಡಿಯಂತಿದೆ.

ರೋಗದಿಂದ ಮುಕ್ತರಾದ ಕೂಡಲೆ ಬಹಳಷ್ಟು ಜನ ಅವರ ಅನುಭವಗಳನ್ನು ಮರೆಯಲು ಪ್ರಯತ್ನಿಸುತ್ತಾರೆ. ಆದರೆ ಬೇರೆಯವರಿಗೆ ತಮ್ಮ ಅನುಭವ ಉಪಯುಕ್ತವಾಗಲಿ ಎನ್ನುವ ಕಾಳಜಿಯಿಂದಲೇ ಗಾಯತ್ರಿ ತಾವು ರೋಗ ವಿಮುಕ್ತರಾಗುತ್ತಿದ್ದಂತೆ ಬರೆಹದಲ್ಲಿ ತೊಡಗಿಕೊಂಡ ಸಾಹಸಿ. ಛಲ ಬಿಡದ ವಿಕ್ರಮನಂತೆ ಅದರ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹಿಸಿ ಬರವಣಿಗೆಗೆ ಕೂಡುತ್ತಾರೆ. ಇದಕ್ಕಾಗಿ ಅವರಿಗೆ 'ಭೇಷ್' ಎನ್ನುವುದು ಔಪಚಾರಿಕವಾಗುತ್ತದೆಯಷ್ಟೆ; ಎಳ್ಳಷ್ಟೂ ಸಾಲದು. ಈ ಕಾರ್ಯಕ್ಕೆ ಅವರ ಭೌತವಿಜ್ಞಾನದ ಅರಿವು ಹಾಗೂ ಬರವಣಿಗೆಯ ಪ್ರೌಢ ಅನುಭವ ಇಂಬು ಕೊಟ್ಟಿವೆ ಎನ್ನುವುದರಲ್ಲಿ ಸಂದೇಹವೇ ಇಲ್ಲ

ಯಾರಿಗೋ ರೋಗ ಬಂದಾಗ ಕುಟುಂಬದವರಿಗೆಲ್ಲ ಅದರ ಬಿಸಿ ತಟ್ಟುವುದಿಲ್ಲ. ಆದರೆ ಅಚ್ಚುಕಟ್ಟಾದ ಸಂಸಾರದಲ್ಲಿ ಪ್ರೀತಿಪಾತ್ರರೊಬ್ಬರಿಗೆ ಇಂತಹ ಘೋರ ಸಂದರ್ಭ ಬಂದೆರಗಿದಾಗ ಮನೆಯವರೆಲ್ಲರೂ ಕಂಗಾಲಾಗುತ್ತಾರೆ. ಆದರೆ ಗಾಯತ್ರಿಯ ಕುಟುಂಬದಲ್ಲಿ ಅವರ ಪತಿ, ಮಗ, ಸೊಸೆ, ಮೊಮ್ಮಕ್ಕಳು, ಮಗಳು, ಅಳಿಯ ಎಲ್ಲರೂ ಚಿಕಿತ್ಸೆಯ ಸಮಯದಲ್ಲಿ ಸಕ್ರಿಯವಾಗಿ ಭಾಗಿಯಾಗಿ ರೋಗವನ್ನು ಹೊಡೆದೋಡಿಸುವ ಕೆಲಸದಲ್ಲಿ ತಮ್ಮ ಕರ್ತವ್ಯ ಮಾಡಿದ್ದಾರೆ ಎನ್ನುವುದನ್ನು ಗಾಯತ್ರಿ ಅತ್ಯಂತ ಹೆಮ್ಮೆಯಿಂದ ಹೇಳಿಕೊಂಡಿರುವುದು ಹೃದಯಸ್ಪರ್ಶಿಯಾಗಿದೆ. ಇದನ್ನು ಓದುಗರು ಗಮನಿಸಿದಾಗ ಕಷ್ಟಕಾಲದಲ್ಲಿ ಸಹಾಯಹಸ್ತ ಚಾಚಬೇಕೆನ್ನುವ ಸಂದೇಶವೂ ಕುಟುಂಬವರ್ಗದವರಿಗೆ ತಲುಪುತ್ತದೆ. ಮನೆಯವರೆಲ್ಲರ ವೇಳಾಪಟ್ಟಿ ಬದಲಾದರೂ ಯಾರೂ ಅದನ್ನು ಚಿಂತಿಸದೆ ಸಹಜವಾಗಿ ತಮ್ಮ, ತಮ್ಮ ಪಾಲಿನ ಕೆಲಸಗಳನ್ನು ಹಂಚಿಕೊಂಡು ಕಟಿಬದ್ಧರಾಗಿ ಕೆಲಸಗಳನ್ನು ನಿಭಾಯಿಸಿ ಸುಮಾರು ಎರಡು ವರ್ಷಗಳನ್ನು ಕಳೆದಿದ್ದಾರೆ. ಅದೇ ಸಮಯದಲ್ಲಿ ಪ್ರಪಂಚಕ್ಕೆ ಹೆಮ್ಮಾರಿಯಾಗಿ ಬಂದಡರಿದ ಕೋವಿಡ್–19 ಕೂಡ ತನ್ನ ಪಾಲನ್ನು ಮೆರೆದಿರುವುದು ಮತ್ತೊಂದು ಆಯಾಮ.

ಗಾಯತ್ರಿಯ ಧನಾತ್ಮಕ ಚಿಂತನೆಯನ್ನೂ, ಮನೋಬಲವನ್ನೂ, ಅವರ ಅರಿವು ಮತ್ತು ರೋಗದ ಬಗ್ಗೆ ವಿಶ್ಲೇಷಣೆ ಮಾಡುವ ರೀತಿಯನ್ನು ವೈದ್ಯರೂ ಹಾಗೂ ಅಲ್ಲಿನ ಇನ್ನಿತರ ಸಿಬ್ಬಂದಿ ವರ್ಗದವರೂ ಮೆಚ್ಚಿದ್ದಾರೆ. ಹಲವು ಬಗೆಯ ನಿದಾನಗಳನ್ನು ಹಾಗೂ ಚಿಕಿತ್ಸೆಯನ್ನು ಒಳಗೊಂಡಿರುವ ಕ್ಯಾನ್ಸರ್ ಚಿಕಿತ್ಸೆಯ ಸುದೀರ್ಘ ಪಯಣದಲ್ಲಿ ಇದು ಬಹಳ ಮುಖ್ಯ. ಒಂದೊಂದು ಹೆಜ್ಜೆಯಲ್ಲಿಯೂ ವೈದ್ಯರು ಗಾಯತ್ರಿಗೆ ಚಿಕಿತ್ಸೆಯ ಬಗ್ಗೆ ತಾಳ್ಮೆಯಿಂದ ವಿವರಿಸಿದ್ದನ್ನೂ ಗಾಯತ್ರಿ ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಕ್ಯಾನ್ಸರ್ ವೈದ್ಯರಿಗೆ ಇಂತಹ ಪ್ರಸಂಗಗಳು ಅಪರೂಪವೇನಲ್ಲ. ಆದರೂ ಅವರು ಪ್ರತಿರೋಗಿಗೂ ವಿಷಯಗಳನ್ನು ವಿವರಿಸುವುದು ಮತ್ತು ಎಚ್ಚರಿಕೆ ನೀಡುತ್ತಾ, ಧೈರ್ಯ ತುಂಬುವುದು ಅಗತ್ಯವೂ ಹೌದು; ಅವರು ಹಾಗೆ ಮಾಡಿದ್ದಾರೆ ಕೂಡ. ಅವರ ವಿವರಣೆಗಳನ್ನು ಅರ್ಥ ಮಾಡಿಕೊಂಡು, ಸೂಕ್ತ ಪ್ರಶ್ನೆಗಳಿಂದ ಪ್ರತಿಕ್ರಿಯೆ ನೀಡುವ

ಗಾಯತ್ರಿಯವರ ನಡೆಯೂ ಅನುಕರಣೀಯ. ಹೀಗೆ ಎಲ್ಲ ರೋಗಿಗಳೂ ವೈದ್ಯರ ಜೊತೆ, ಅಲ್ಲಿಯ ಸಿಬ್ಬಂದಿಯವರ ಜೊತೆ ವರ್ತಿಸಿ, ಅವರೂ ಅದೇ ರೀತಿ ಪ್ರತಿಕ್ರಿಯಿಸಿದ್ದೇ ಆದರೆ ಕಾಯಿಲೆಯನ್ನು ಅರ್ಧ ಗೆದ್ದಂತೆಯೇ. ಚಿಕಿತ್ಸೆ, ಔಷಧಿ, ಪಥ್ಯ, ದಿನನಿತ್ಯದ ಆಹಾರ ಎಲ್ಲವೂ ಚಿಕಿತ್ಸೆಗೆ ಅತ್ಯಗತ್ಯ. ಚಿಕಿತ್ಸೆಯ ನಂತರವೂ, ಕ್ಯಾನ್ಸರ್‌ನಿಂದ ಮುಕ್ತವಾದ ನಂತರವೂ ಸಾಕಷ್ಟು ಎಚ್ಚರಿಕೆಯಿಂದಿರುವುದು ಪ್ರತಿಯೊಬ್ಬ ವ್ಯಕ್ತಿಯೂ ಅನುಸರಿಸಲೇಬೇಕಾದ ನಿಯಮವೆನ್ನುವುದನ್ನೂ ಲೇಖಕಿ ದಾಖಲಿಸಿದ್ದಾರೆ.

ಸಾಧಾರಣವಾಗಿ ಗಾಯತ್ರಿಯ ಬರವಣಿಗೆ ಬಹಳ ಸರಳ. ಆದರೆ ಈ ಕೃತಿಯಲ್ಲಿ ಗಾಯತ್ರಿಯ ಬರವಣಿಗೆಯ ಪರಿ ಬದಲಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಇದಕ್ಕೆ ಪರಿಸ್ಥಿತಿ ಹಾಗೂ ಹುದುಗಿರುವ ವಿಷಯವೇ ಕಾರಣವಿರಬಹುದು. ಕೆಲವು ವಿಷಯಗಳು ಸರಳಗೊಳಿಸಲಾಗದಷ್ಟು ಕ್ಲಿಷ್ಟ. ಮತ್ತೆ ಕೆಲವು ಅವರ ಮಾನಸಿಕ ಸ್ಥಿತಿಗೆ ಸಂಬಂಧಿಸಿದೆ. ವಿಷಯ ಗಂಭೀರವಾದಾಗ ವಾಕ್ಯಗಳು ಗಂಭೀರವಾಗಿರುವುದು ಸಹಜವಲ್ಲವೇ?

ಗಾಯತ್ರಿ ಹಾಸ್ಯ ಲೇಖಕಿ ಎನ್ನುವುದಕ್ಕೂ ಸಾಕ್ಷಿಯಂತೆ ಇಂತಹ ಗಂಭೀರ ವಿಷಯದ ಅಡಿಯಲ್ಲೂ ಅಲ್ಲಲ್ಲಿ ಹಾಸ್ಯದ ತುಣುಕುಗಳು ಮಿಂಚುವುದು ಓದುಗರಿಗೆ ಮುದ ನೀಡುತ್ತದೆ. ವಿಕಿರಣ ಚಿಕಿತ್ಸೆಯ ಸಮಯದಲ್ಲಿ ಆಸ್ಪತ್ರೆಯ ಕನ್ನಡ ಭಾಷೆ ಬಾರದ ಆಯಾ ಇವರ ಜೊತೆಗಿದ್ದ ಸೊಸೆ ಸೌಮ್ಯಳನ್ನು 'ಇದನ್ನು ಹೊತ್ಕೊಂಡು ಹೋಗ್ತೀಯಾ?' ಎಂದು ಕೇಳಿದ್ದು, ಸೌಮ್ಯನಿಗೆ ಏನೂ ಅರ್ಥವಾಗದೆ ಕಕ್ಕಾಬಿಕ್ಕಿಯಾದ ಪ್ರಸಂಗವನ್ನು ಓದಿಯೇ ಸವಿಯಬೇಕು. ಇವರ ಹಾಸ್ಯಪ್ರಜ್ಞೆಯ ಚುರುಕು ದೊಡ್ಡ ದೊಡ್ಡ ವೈದ್ಯರನ್ನೂ ಬಿಟ್ಟಿಲ್ಲ. ದೊಡ್ಡ ಕಾಯಿಲೆಯೆಂದು ಬೆಚ್ಚಿ ಬೆದರುವದರಲ್ಲಿಯೇ ಕಾಲ ಕಳೆಯದೆ ಕಠಿಣವಾದ ಚಿಕಿತ್ಸೆಯ ಹಾದಿಯಲ್ಲಿಯೂ ಹಾಸ್ಯಪ್ರಜ್ಞೆಯನ್ನು ಜಾಗೃತವಾಗಿರಿಸಿಕೊಂಡಿರುವುದು ಗಾಯತ್ರಿಯವರಿಗೆ ದೈವದತ್ತವಾದ ವರವೆಂದೇ ಹೇಳಬೇಕು. ಅದೇ ಅವಳಿಗೆ ಸಂಜೀವಿನಿಯಾಗಿದೆ ಎಂದೂ ಹೇಳಬಹುದು.

ಕ್ಯಾನ್ಸರ್ ರೋಗದ ಹೆಸರು ಕೇಳುತ್ತಲೇ ಕುಟುಂಬದವರು ಕಂಗಾಲಾಗುವುದರೊಂದಿಗೆ, ರೋಗಿ ಕಷ್ಟಪಡುವುದು, ಹಲವು ಹಂತಗಳನ್ನೂ, ಒಂದೆರಡು ಶಸ್ತ್ರಕ್ರಿಯೆಗಳನ್ನೂ ದಾಟಿದ ನಂತರವೂ ಮನೆಯಲ್ಲೇ ವೈದ್ಯಕೀಯ ಸಹಾಯಕರ ನೆರವು, ಫಿಸಿಯೋಥೆರಪಿ ಹೀಗೆ ವಿವಿಧ ಮಜಲುಗಳನ್ನು ಹಾದು ಹೋಗುವುದು ಅನಿವಾರ್ಯ. ಇವೆಲ್ಲವೂ ಈ ಕಾಡುವ ರೋಗದ ಸ್ವರೂಪವೇ ಆಗಿರುತ್ತದೆ; ಜೊತೆಗೆ ಈ ರೋಗ ಮನೆಯವರ ಕಾಳಜಿಯನ್ನೂ ಬೇಡುವುದಲ್ಲದೆ, ಅಂತ್ಯದಲ್ಲಿ ಸಾಕಷ್ಟು ಕಾಸು ಖರ್ಚು ಮಾಡಿಸುತ್ತದೆ ಎನ್ನುವುದೂ ಸತ್ಯ.

ಈ ಪುಸ್ತಕದ ಮುನ್ನುಡಿ ಬರೆದಿರುವ ಡಾ. ಪಿ.ಎಸ್. ಶಂಕರ್ ಪ್ರಸಿದ್ಧ ವೈದ್ಯರು ಹಾಗೂ ವಿಜ್ಞಾನ ಲೇಖಕರು. ಅವರ ಸುದೀರ್ಘ ಮುನ್ನುಡಿಯೂ ಕ್ಯಾನ್ಸರ್ ಬಗ್ಗೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿದೆ. ಒಟ್ಟಿನಲ್ಲಿ ವಿಭಿನ್ನವಾದ ಕಥಾನಕವುಳ್ಳ ಅಪರೂಪದ ಅಪೂರ್ವ ಕೃತಿಯನ್ನು ಓದುಗರಿಗೆ ನೀಡುವುದರಲ್ಲಿ ಗಾಯತ್ರಿ ಯಶಸ್ವಿಯಾಗಿದ್ದಾರೆ. ಈ ಕೃತಿಯನ್ನು ಎಲ್ಲರೂ ಓದಲಿ ಎಂದು ಖಂಡಿತವಾಗಿ ವಿನಂತಿಸಿದರೂ, ಮುಂದೆಂದೂ ಇಂತಹ ಕೃತಿಯನ್ನು ಬರೆಯುವ ಸಂದರ್ಭ ಗಾಯತ್ರಿಯ ಜೀವನದಲ್ಲಿ ಬಾರದಿರಲಿ ಎಂದು ಹಾರೈಸುತ್ತೇನೆ.

***

ಜೈಲು ಕಂಬಿಗಳಿಗೆ ಕಿವಿ ಇದ್ದಿದ್ದರೆ

– ಎಲ್. ಗಿರಿಜಾ ರಾಜ್

ಕಂಬಿಗಳ ಕಿಂಡಿಗಳಲಿ ಮೊಗವಿಟ್ಟು, ಕಂಬನಿಯ
ಸುರಿಸಿವೆ ಅಪರಾಧಿ ಮನಸುಗಳು

ತಪ್ಪು ಮಾಡಿದ ಕೆಟ್ಟ ಗಳಿಗೆಯ
ಶಪಿಸುತಿವೆ, ಹಪಹಪಿಸಿವೆ ಹೃದಯಗಳು!

ಯಾರದೋ ಪ್ರತೀಕ್ಷೆಯಲಿ
ಕಣ್ಣುಗಳಿವು ಬಳಲಿವೆ!
ಸತಿಯೋ, ಮಗನೋ, ಮಗಳೋ, ಪ್ರೇಯಸಿಯೋ
ಮತ್ತಾರೋ ಮನಸಿಗೆ ಆಪ್ತರಾದ ಬಂಧುಮಿತ್ರರೋ

ಕಂಬನಿಯ ಅಭಿಷೇಕ
ಕಂಬಿಗಳಿಗೆ! ತಪ್ಪು ಮಾಡುವ
ಮುನ್ನ ಒಂದು ಗಳಿಗೆ,
ಮೆದುಳು ಬಳ್ಳಿ ಚಿಂತನೆಯೆಡೆ
ಮಿಡಿದಿದ್ದರೆ, ಇಂದು ಸರಳುಗಳ ಹಿಂದೆ
ನರಳುವುದು ಬೇಕಿತ್ತೇ?

ಕಂಬಿಗಳಿಗೆ ಕಿವಿಯಿದ್ದಿದ್ದರೆ,
ಅಡೆತಡೆಯಿಲ್ಲದೆ ಹರಿದ ಕಣ್ಣೀರಿನ ಒಂದೊಂದು
ಹನಿಯ ಹಿಂದಿನ ಕತೆಗಳಿಗೆ
ಕಿವಿಯಾಗಿ! ಕಿವಿಯಿದ್ದ ಮೇಲೆ
ಹೃದಯವೂ ಇದ್ದೀತು, ದ್ರವಿಸಿ
ಒದ್ದೆಯಾಗಲು...

ರೆಪ್ಪೆ ಸೆರೆಯ ಹಿಂದೆ ಅಡಗಿದ್ದ
ಕಂಬನಿ ಉಕ್ಕಿ, ತೆರೆ ಸರಿಸಿ ಬಂದಂತೆ, ಹೊರ
ಬರಬಹುದೇ? ಕಂಬಿಗಳ ಸೆರೆ ಸರಿಸಿ?

ಸೆರೆಯಾಳಾಗಿ ಶ್ರಮಿಕನಾಗಿ ದುಡಿದುಡಿಯುತ, ಹೃದಯ
ಮೆದುವಾಗಿ ಮತ್ತೆ ಕನಸುಗಳು ಅರಳುತಿವೆ!
ಹೊಸ ಬಾಳಿಗೆ....
ಬಿಡುಗಡೆಯ ಭಾಗ್ಯವನು
ಕಾಯುತಿದೆ ಮನಸು;
ಬೇಗ ಬೇಗನೆ ಸರಿದು ಹೋಗಲಿ ಕ್ಯಾಲೆಂಡರಿನ
ಹಾಳೆಗಳು ನಾಳೆಯ ಭವಿತವ್ಯಕೆ!
ಅಪರಾಧ ಮುಕ್ತ ಹೊಸ ಜೀವನ ಪಥಕೆ.

***

ಅಂಗಾಂಗ ದಾನ ಹಾಗೂ ಕಸಿ – ಒಂದು ನೋಟ

– ಕೆ.ಆರ್. ವೆಂಕಟೇಶ್ (ಮನೋಹಂಸ)

ನಾನು ವೈದ್ಯನಲ್ಲದಿದ್ದರೂ ಈ ವಿಷಯ ಏಕೆ ಆರಿಸಿಕೊಂಡೆನೆಂದರೆ ನಾನು ಹೋದ ವರ್ಷ ಬರೆದ "ಪ್ರಕ್ಷುಬ್ಧ ಅಲೆಗಳು" ಈ ಕಾದಂಬರಿಯ ಒಂದು ಸಂಚಿಕೆಯಲ್ಲಿ ಅಂಗಾಂಗ ದಾನದ ಒಂದು ಸನ್ನಿವೇಶ ಬರುತ್ತದೆ. ಆ ಸಂಚಿಕೆಯ ನಂತರ ಸುಮಾರು ಪ್ರತಿಕ್ರಿಯೆಗಳು ಈ ಅಂಗಾಂಗ ದಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಬಂದಿದ್ದವು. ಹಾಗಾಗಿ ಅದರ ಬಗ್ಗೆ ಹೆಚ್ಚಿನ ಜ್ಞಾನ ಪಡೆಯಲು ಈ ವಿಷಯ ಆರಿಸಿಕೊಂಡೆ.

ಈ ಲೇಖನದಲ್ಲಿ ವೈದ್ಯಕೀಯ ವಿಜ್ಞಾನದ ವಿವರಗಳನ್ನು ನಾನು ಬರೆದಿಲ್ಲ. ಏಕೆಂದರೆ ಅದು ಈ ವಿಷಯದಲ್ಲಿ ಪರಿಣಿತಿ ಹೊಂದಿದ ವೈದ್ಯರಿಗೆ ಮಾತ್ರ ಸಾಧ್ಯ. ಈ ಲೇಖನವನ್ನು ಒಬ್ಬ ಸಾಮಾನ್ಯ ಮನುಷ್ಯನಿಗೆ ಅಂಗಾಂಗ ಕಸಿಯ ಬಗ್ಗೆ ಕನಿಷ್ಠ ಮಾಹಿತಿ ಹಾಗೂ ಜಾಗೃತಿ ಮೂಡಿಸುವ ಉದ್ದೇಶದಿಂದ ಬರೆಯಲಾಗಿದೆ.

ಅಂಗಾಂಗ ಕಸಿ ಎನ್ನುವುದು ಒಬ್ಬ ಆರೋಗ್ಯವಂತ ವ್ಯಕ್ತಿಯಿಂದ ಅಂಗ ಅಥವಾ ಅಂಗಾಂಶವನ್ನು ಶಸ್ತ್ರಚಿಕಿತ್ಸೆಯಿಂದ ಹೊರತೆಗೆದು ಅದನ್ನು ರೋಗದಿಂದ ಬಳಲುತ್ತಿರುವ ಇನ್ನೊಬ್ಬ ವ್ಯಕ್ತಿಯ ದೇಹಕ್ಕೆ ಅಳವಡಿಸುವ/ದೇಹದಲ್ಲಿ ಇರಿಸುವ ಒಂದು ಪ್ರಕ್ರಿಯೆ.

ಈ ಒಂದು ಪ್ರಕ್ರಿಯೆಯಲ್ಲಿ ಅಂಗ/ಅಂಗಾಂಶವನ್ನು ನೀಡುವ ಆರೋಗ್ಯವಂತ ವ್ಯಕ್ತಿಯನ್ನು 'ಅಂಗಾಂಗ ದಾನಿ' ಎಂದೂ ಅದನ್ನು ಸ್ವೀಕರಿಸುವ ರೋಗಗ್ರಸ್ಥ ವ್ಯಕ್ತಿಯನ್ನು 'ಸ್ವೀಕೃತದಾರ' ಎಂದೂ ಕರೆಯಲಾಗುತ್ತದೆ. ಸ್ವೀಕರಿಸುವ ವ್ಯಕ್ತಿಗಳ ಅಂಗ/ಅಂಗಗಳು ವಿಫಲವಾದಾಗ ಅಥವಾ ರೋಗ ಅಥವಾ ಅಪಘಾತಗಳಿಂದ ಹಾನಿಗೊಳಗಾದಾಗ ಅಂಗಾಂಗ ಕಸಿ ಅಗತ್ಯವಾಗುತ್ತದೆ.

ಕಸಿ ಮಾಡಬಹುದಾದ ಅಂಗಗಳು

- ಹೃದಯ
- ಮೂತ್ರಪಿಂಡಗಳು
- ಯಕೃತ್ತು
- ಶ್ವಾಸಕೋಶಗಳು
- ಮೇದೋಜೀರಕ ಗ್ರಂಥಿ
- ಕರುಳು
- ಮೂಳೆ ಮಜ್ಜೆ
- ಥೈಮಸ್

ಕಸಿ ಮಾಡಬಹುದಾದ ಅಂಗಾಂಶಗಳು

ಮೂಳೆಗಳು

ಸ್ನಾಯುರಜ್ಜುಗಳು

ಕಾರ್ನಿಯಾ

ಚರ್ಮ

ಹೃದಯ ಕವಾಟಗಳು

ಸಿರೆಗಳು

ಬದುಕಿರುವ ಅಂಗಾಂಗ ದಾನಿಯಿಂದ ಕಸಿ ಮಾಡಬಹುದಾದ ಅಂಗಗಳೆಂದರೆ ಮೂತ್ರಪಿಂಡ ಹಾಗೂ ಯಕೃತ್‌ನ ಒಂದು ಭಾಗ ಹಾಗೂ ಮೂಳೆ ಮಜ್ಜೆ.

ಮೆದುಳು ಸತ್ತ ಅಂಗಾಂಗ ದಾನಿಯಿಂದ ಹೃದಯ, ಎರಡೂ ಮೂತ್ರ ಪಿಂಡಗಳು, ಶ್ವಾಸಕೋಶಗಳು, ಯಕೃತ್, ಮೇದೋಜೀರಕ ಗ್ರಂಥಿ ಹಾಗೂ ಕಣ್ಣುಗಳು, ಕವಾಟಗಳು, ಸ್ನಾಯುರಜ್ಜುಗಳು ಹೀಗೆ. ವ್ಯಕ್ತಿ ಸತ್ತ ನಂತರವೂ ಯಾವುದಾದರೂ ಅಂಗದ ಜೀವಕೋಶಗಳು ಬೆಳೆಯುವ ಅಂಗವೆಂದರೆ ಯಕೃತ್. ಹಾಗಾಗಿ ಮೆದುಳು ಸತ್ತ ವ್ಯಕ್ತಿಯ ಯಕೃತ್ ಅನ್ನು ಎರಡು ಭಾಗಮಾಡಿ ಇಬ್ಬರು ರೋಗಿಗಳಿಗೆ ಕಸಿ ಮಾಡಬಹುದು.

ಅಂಗಾಂಗ ಕಸಿಯ ವಿಶ್ವದ ಇತಿಹಾಸ ಹಾಗೂ ಭಾರತದ ಇತಿಹಾಸ

ಮೊಟ್ಟಮೊದಲ ಯಶಸ್ವಿ ಅಂಗಾಂಗ ಕಸಿ ನಡೆದಿದ್ದು 1954ರಲ್ಲಿ ಬೋಸ್ಟನ್ ನಗರದ ಬ್ರಿಗಾಮ್ ಆಸ್ಪತ್ರೆಯಲ್ಲಿ ಒಂದು ಮೂತ್ರಪಿಂಡದ ಕಸಿಯ ಮೂಲಕ ಆಯಿತು. ಈ ಶಸ್ತ್ರಚಿಕಿತ್ಸೆ ನಡೆಸಿದವರು ಡಾ. ಜೋಸೆಫ್ ಮುರ್ರೆ. ಮೂತ್ರಪಿಂಡ ಅಂಗದಾನಿ ರಿಚರ್ಡ್ ಹೆರ್ರಿಕ್ ಹಾಗೂ ಇದರ ಸ್ವೀಕೃತದಾರ ಅವನ ಅವಳಿ ಸಹೋದರ ರೊನಾಲ್ಡ್ ಹೆರ್ರಿಕ್. ರೊನಾಲ್ಡ್ ಜಲಸೇನೆಯಲ್ಲಿದ್ದು ಯಾವುದೋ ಸಮಸ್ಯೆಯಿಂದ ಮೂತ್ರಪಿಂಡ ವೈಫಲ್ಯಕ್ಕೊಳಗಾಗಿತ್ತು. ಈ ಶಸ್ತ್ರಚಿಕಿತ್ಸೆ ಹಾಗೂ ಕಸಿಯ ನಂತರ 8 ವರ್ಷ ಕಾಲ ರೊನಾಲ್ಡ್ ಆರೋಗ್ಯಕರ ಜೀವನ ನಡೆಸಿದನು. ಇದು ಒಂದು ದಾಖಲೆ. ಇದಕ್ಕೂ ಮುನ್ನ ಹತ್ತಾರು ಅಂಗಾಂಗ ಕಸಿಗಳು ನಡೆದಿದ್ದರೂ ಅವೆಲ್ಲಾ ಅಂಗಾಂಗ ಕಸಿಯ ಜ್ಞಾನದ ಕೊರತೆಯಿಂದಾಗಿ ಕೆಲವು ಗಂಟೆಗಳಿಂದ ಕೆಲವು ದಿನಗಳು ಮಾತ್ರ ರೋಗಿ ಉಳಿಯುವಂತಾಗಿತ್ತು. ಯಾವುದೇ ಬಾಹ್ಯ ವ್ಯಕ್ತಿಯ ಅಂಗವನ್ನು ತಿರಸ್ಕರಿಸುವುದು ರೋಗಿಯ ದೇಹದ ಸ್ವಾಭಾವಿಕ ಗುಣವಾಗಿದ್ದುದರಿಂದ ಹಾಗೂ ಇಮ್ಯೂನೋ ಸಪ್ರೆಸೆಂಟ್ಗಳ ಆವಿಷ್ಕಾರ ಆಗ ಇನ್ನೂ ಆಗದೆ ಇದ್ದುದರಿಂದ ಅಂಗಾಂಗ ಕಸಿಯ ಪ್ರಯತ್ನಗಳು ವಿಫಲವಾಗಿದ್ದವು.

ಆದರೆ ಡಾ.ಜೋಸೆಫ್ ಈ ಯಶಸ್ವಿ ಕಸಿ ನಡೆಸಿ ರೋಗಿಯ ದೇಹದಲ್ಲಿ ಯಾವುದೇ ಇಮ್ಯೂನೋ ಸಪ್ರಸೆಂಟ್ ಬಳಸದೆ ದೀರ್ಘಕಾಲ ಆರೋಗ್ಯವಾಗಿರಲು ಕಾರಣ, ದಾನ ಪಡೆದ ವ್ಯಕ್ತಿ ದಾನ ಮಾಡಿದವನ ಅವಳಿ ಸಹೋದರನಾಗಿದ್ದು ವಂಶವಾಹಿನಿಗಳು ಒಂದೇ ಆದುದರಿಂದ ದೇಹ ಅದನ್ನು ತಿರಸ್ಕರಿಸಲಿಲ್ಲ. ಈ ವಿಶೇಷ ಸನ್ನಿವೇಶ ಬಿಟ್ಟು ಅಂಗಾಂಗ ಕಸಿಯಲ್ಲಿ ಇಮ್ಯೂನೋ ಸಪ್ರಸೆಂಟ್ ಬಳಸದೆ ರೋಗಿಯನ್ನು ವರ್ಷಗಳ ಕಾಲ ಜೀವಂತವಾಗಿಡಲು ಸಾಧ್ಯವೇ ಇರಲಿಲ್ಲ.

ಈ ಯಶಸ್ವಿ ಅಂಗಾಂಗ ಕಸಿಯ ಮುಂದಿನ ವರ್ಷಗಳಲ್ಲಿ ಡಾ. ಜೋಸೆಫ್ ಮುರ್ರೆ ಅವರಿಗೆ ವೈದ್ಯಕೀಯ ವಿಭಾಗದಲ್ಲಿ ನೊಬೆಲ್ ಪಾರಿತೋಷಕ ದೊರೆಯಿತು. ನಂತರ ಅಂಗಾಂಗ ಕಸಿಗೆ ಸಂಬಂಧಪಟ್ಟಂತೆ ಸಾಕಷ್ಟು ಸಂಶೋಧನೆಗಳು ನಡೆದು ಶಸ್ತ್ರಚಿಕಿತ್ಸೆಯ ಮುಂಚೆ ಅವುಗಳನ್ನು ಕಾಪಾಡುವುದರಿಂದ ಹಿಡಿದು ರೋಗಿಗಳು ದೇಹದಲ್ಲಿ ಯಾವುದೇ ವಿರೋಧವಿಲ್ಲದೆ ಆ ಅಂಗಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವುದರ ತನಕ ಮಹತ್ತರ ಬೆಳವಣಿಗೆಗಳು ಆದವು.

ಇನ್ನು ಭಾರತದಲ್ಲಿ ಮೊದಲ ಅಂಗಾಂಗ ಕಸಿ 1971ರಲ್ಲಿ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಮೂತ್ರಪಿಂಡದ ಕಸಿಯ ಮೂಲಕ ನಡೆಯಿತು. ನಂತರ ಮೊದಲ ಯಕೃತ್ ಕಸಿ 1998ರಲ್ಲಿ ನಡೆಯಿತು. ಇದಕ್ಕೂ ಮೊದಲು ಅಂಗಾಂಶಗಳನ್ನು ತೆಗೆದುಕೊಂಡರೆ ಭಾರತದ ಮೊದಲ ಪಾರದರ್ಶಕ ಪಟಲದ (ಕಾರ್ನಿಯಾ) ಕಸಿ 1948ರಲ್ಲಿ ಚೆನ್ನೈನಲ್ಲಿ ಡಾ. ಆರ್ ಇ ಎಸ್ ಮುತ್ತಯ್ಯ ಅವರಿಂದ ನಡೆಯಲ್ಪಟ್ಟಿತು.

ಅಂಗಾಂಗ ಕಸಿಯ ಬಗ್ಗೆ ತಿಳಿದುಕೊಳ್ಳಬೇಕಾದ ಪ್ರಮುಖ ಅಂಶಗಳು

1. ಬದುಕಿರುವಾಗ ದಾನಮಾಡಬಹುದಾದ ಅಂಗಗಳಿಗೆ ದಾನಿಗಳು ಸ್ವಇಚ್ಛೆಯಿಂದ ಸಮ್ಮತಿಸಿ ಅಂಗದಾನ ಮಾಡಬೇಕು. ಕಾನೂನಿನ ಪ್ರಕಾರ ಇದಕ್ಕೆ ಇರುವ ವಯಸ್ಸಿನ ಮಿತಿ 18–65 ವರ್ಷಗಳು.
2. ಮೆದುಳು ಸತ್ತನಂತರ ದಾನಮಾಡಬಹುದಾದ ಅಂಗಗಳಿಗೆ ಆ ವ್ಯಕ್ತಿಯ ಕುಟುಂಬದವರು, ಪೋಷಕರು ಸಮ್ಮತಿ ನೀಡಬೇಕು. ಇದಕ್ಕೆ ವಯಸ್ಸಿನ ಮಿತಿ ಇಲ್ಲ.
3. ಅಂಗಾಂಗ ದಾನಿಗೆ ಯಾವುದೇ ಮಾರಣಾಂತಿಕ ಖಾಯಿಲೆ ಇರಬಾರದು. ದಾನ ಮಾಡುವ ಮುನ್ನ ದಾನಿಯು ಹಲವು ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗಿ ವೈದ್ಯರು ಅಂಗದಾನಕ್ಕೆ ಯೋಗ್ಯ ಎಂದು ದೃಢೀಕರಿಸಿದ ನಂತರವೇ ಅಂಗದಾನಿಯು ಅಂಗದಾನಿ ಕಾರ್ಡ್ ಪಡೆಯಲು ಸಾಧ್ಯ. ಈ ಕಾರ್ಡ್ ಹಾಗೂ ಜನನ ಪ್ರಮಾಣ ಪತ್ರ ಅಥವಾ ಜನ್ಮ ದಿನಾಂಕ ದೃಢೀಕರಿಸುವ ದಾಖಲೆಯಿಲ್ಲದೆ ಅಂಗದಾನಕ್ಕೆ ಸಮ್ಮತಿ ದೊರೆಯುವುದಿಲ್ಲ.
4. ಅಂಗದಾನಿಗಳಾಗಲಿ ಅಥವಾ ಅಂಗ ಸ್ವೀಕೃತದಾರರಾಗಲಿ ಇವರ ಅಥವಾ ಇವರ ಕುಟುಂಬದವರ ಮಧ್ಯೆ ಅಂಗದಾನಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಹಣದ ವ್ಯವಹಾರ ಇರಬಾರದು. ಇದು ಕಾನೂನು ಬಾಹಿರ. ಅದರಿಂದಲೇ ಅದನ್ನು ದಾನ ಎಂದು ಕರೆಯುವುದು. ದಾನದ ಹೆಸರಿನಲ್ಲಿ ಹಣದ ವ್ಯವಹಾರ ಇರಬಾರದು. ಅಂಗದಾನದ ಸಂಪೂರ್ಣ ನಿಯಮಗಳು ಮಾನವ ಅಂಗಾಂಗ ಕಸಿ ಕಾಯಿದೆ 1994ರಲ್ಲಿ ಲಭ್ಯವಿದೆ.
5. ಅಂಗದಾನ ವೈದ್ಯಕೀಯ ಪ್ರಕ್ರಿಯೆ ಆದರೂ ಇದಕ್ಕೆ ಸಂಬಂಧಿಸಿದಂತೆ ಕೆಲವು ಸರ್ಕಾರದ ನಿಯಮಗಳು ಇವೆ ಅವುಗಳನ್ನು ಪಾಲಿಸಬೇಕು. ಉದಾ.. ಅಂಗಾಂಗ ಕಸಿ ಮಾಡಬಯಸುವ ಆಸ್ಪತ್ರೆಗಳು ಸರ್ಕಾರದಿಂದ ದೃಢೀಕರಣ ಪತ್ರ ಪಡೆದಿರಬೇಕು. ಅಂಗಾಂಗ ಕಸಿಗೆ ಬೇಕಾದ ಎಲ್ಲಾ ಸೌಲಭ್ಯಗಳು ಮತ್ತು ಅದರ ಬಗ್ಗೆ ನಿಪುಣತೆ ಹೊಂದಿರುವ ವೈದ್ಯರು ಇದ್ದರೆ ಮಾತ್ರ ಪರವಾನಗಿ ದೊರೆಯುವುದು. ಇಷ್ಟಬಂದಂತೆ ಆಸ್ಪತ್ರೆಗಳು ಅಂಗಾಂಗ ಕಸಿ ಮಾಡುವ ಹಾಗಿಲ್ಲ.
6. ಅಂಗ ಸ್ವೀಕೃತದಾರರು ಭರಿಸಬೇಕಾದ ಖರ್ಚು ಕೇವಲ ವೈದ್ಯಕೀಯ ಪ್ರಕ್ರಿಯೆಗಳಿಗೆ ಅಂದರೆ ವೈದ್ಯಕೀಯ ಪರೀಕ್ಷೆಗಳು, ಪೂರ್ವ ತಯಾರಿ, ಶಸ್ತ್ರಚಿಕಿತ್ಸೆ, ಔಷಧಿಗಳು ಹಾಗೂ ಆಸ್ಪತ್ರೆಯ ಕೊಠಡಿ ಹೀಗೆ. ವೈದ್ಯರು ಅಂಗಕ್ಕೆ ಬೆಲೆ ಕಟ್ಟಿ ಸ್ವೀಕೃತದಾರರಿಂದ ದುಡ್ಡು ವಸೂಲಿ ಮಾಡುವ ಹಾಗಿಲ್ಲ. ಅಂಗ ಸ್ವೀಕೃತದಾರರೂ ಸಹ ದುಡ್ಡಿನ ಆಮಿಷ ತೋರಿಸಿ ಯಾವುದೇ ರೀತಿಯ ಪ್ರಭಾವ ಬೀರುವ ಹಾಗಿಲ್ಲ.

ಇನ್ನು ವೈದ್ಯಕೀಯ ಅಂಶಗಳಿಗೆ ಬರುವುದಾದರೆ ಒಬ್ಬ ವ್ಯಕ್ತಿಯು ಮೆದುಳು ಸತ್ತವನೆಂದು ಘೋಷಣೆಯಾದ ಮೇಲೆಯೇ ಅಂದರೆ ವೈದ್ಯರು ದೃಢೀಕರಿಸಿದ ನಂತರವೇ ಅಂಗಾಂಗ ದಾನದ ಪ್ರಕ್ರಿಯೆ ಆರಂಭಿಸಲು ಸಾಧ್ಯ. ನಂತರ ಕಾನೂನು ಚೌಕಟ್ಟಿನಲ್ಲಿ ಕೆಲವು ಪತ್ರಗಳಿಗೆ ಹಾಗೂ ಕೆಲವು ಫಾರ್ಮ್ ಗಳಿಗೆ ಸಹಿ ಹಾಕಬೇಕಾಗುವುದು.

ಮೆದುಳು ಸತ್ತ ನಂತರ ತಂತಾನೇ ಯಾವ ಅಂಗಗಳೂ ಕಾರ್ಯನಿರ್ವಹಿಸಲು ಅಸಾಧ್ಯವಾಗಿರುವುದರಿಂದ ಅವುಗಳನ್ನು ಜೀವಂತವಾಗಿರಿಸಲು ಆಮ್ಲಜನಕದ ಪೂರೈಕೆಯಾಗಬೇಕಾದ ಕಾರಣ ಕೃತಕ ಉಸಿರಾಟದ ಅಗತ್ಯವಿರುತ್ತದೆ. ಹಾಗಾಗಿ ಅಂಗಗಳು ಸಾಯದೇ ಇರುವ ಹಾಗೆ ಅವುಗಳನ್ನು ಜೀವಂತವಾಗಿಡುವುದು ಬಹಳ ಮುಖ್ಯವಾಗುತ್ತದೆ.

ಮೆದುಳು ಸತ್ತ ವ್ಯಕ್ತಿಯ ಎರಡು ಮೂತ್ರಪಿಂಡಗಳನ್ನು ಇಬ್ಬರು ಸ್ವೀಕೃತದಾರರು ಒಂದೊಂದು ಮೂತ್ರಪಿಂಡ ಪಡೆದು ಆರೋಗ್ಯಕರ ಜೀವನ ನಡೆಸಬಹುದು. ಯಕೃತ್ ಎರಡು ಭಾಗ ಮಾಡಿ ಇಬ್ಬರು ಸ್ವೀಕೃತದಾರರಿಗೆ ಕಸಿ ಮಾಡಬಹುದು.

ಆದರೆ ಬದುಕಿರುವಾಗ ಅಂಗದಾನ ಮಾಡಲಿಚ್ಛಿಸುವವರು ಒಂದು ಮೂತ್ರಪಿಂಡ ಹಾಗೂ ಯಕೃತ್ ನ ಒಂದು ಭಾಗ ಮಾತ್ರ ದಾನ ಮಾಡಬಹುದು.

ಅಂಗ ದಾನಿಗಳು ಹಾಗೂ ಅಂಗ ಸ್ವೀಕತದಾರರು ಈ ಪ್ರಕ್ರಿಯೆಯ ಮುನ್ನ ಹಲವಾರು ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ. ಅದರಲ್ಲಿ ಮೊದಲ ಹಾಗೂ ಪ್ರಮುಖವಾದುದು ರಕ್ತಪರೀಕ್ಷೆ. ದಾನಿಯ ರಕ್ತದ ಗುಂಪು ಹಾಗೂ ಸ್ವೀಕೃತದಾದರರ ರಕ್ತದ ಗುಂಪು ಹೊಂದಾಣಿಕೆಯಾದರೆ ಮಾತ್ರ ಕಸಿಯ ಪ್ರಕ್ರಿಯೆ ಮುಂದುವರೆಯಲು ಸಾಧ್ಯ.

ಒಮ್ಮೆ ಮೆದುಳು ಸತ್ತ ವ್ಯಕ್ತಿಯ ಅಂದರೆ ಅಂಗದಾನಿಯ ದೇಹದಿಂದ ಅಂಗಗಳನ್ನು ಹೊರಗೆ ತೆಗೆದ ನಂತರ ಅವುಗಳನ್ನು ತೊಳೆದು ರಕ್ತದಿಂದ ಮುಕ್ತಗೊಳಿಸಿ ನಂತರ ಎಲೆಕ್ಟ್ರೋಲೈಟ್‌ಗಳು ಮತ್ತು ಪೋಷಕಾಂಶಗಳನ್ನು ಒಳಗೊಂಡಿರುವ, ವಿಶೇಷವಾಗಿ ತಯಾರಾದ ಮಂಜುಗೆಡ್ಡೆಯ ಶೀತವಿರುವ ಸಂರಕ್ಷಣಾ ದ್ರಾವಣದಲ್ಲಿ ಇರಿಸಲಾಗುತ್ತದೆ. ನಂತರ ಅಂಗಗಳನ್ನು ಕ್ರಿಮಿನಾಶಕ ಗುಣವಿರುವ ಕಂಟೈನರ್ ಗಳಲ್ಲಿ ಇರಿಸಲಾಗುತ್ತದೆ, ಆರ್ದ್ರ ಮಂಜುಗಡ್ಡೆಯಲ್ಲಿ ಪ್ಯಾಕ್ ಮಾಡಲಾಗುತ್ತದೆ. ನಂತರ ಅಂಗಾಂಗ ಸ್ವೀಕರಿಸುವವರ ಕಸಿ ಕೇಂದ್ರಕ್ಕೆ ಸಾಗಿಸಲಾಗುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ದಾನಿಯ ದೇಹದಿಂದ ಹೊರಗೆ ತೆಗೆದು ವಿಶೇಷ ಸಂರಕ್ಷಣಾ ಕಂಟೈನರ್‌ನಲ್ಲಿ ಇರಿಸಿದ ನಂತರ ಆಯಾ ಅಂಗಗಳನ್ನು ಜೀವಂತವಾಗಿರಿಸಲು ಅವುಗಳದೇ ನಿರ್ದಿಷ್ಟ ಅವಧಿಗಳಿವೆ. ಅವು ಈ ಕೆಳಕಂಡಂತಿವೆ.

ಹೃದಯ ಹಾಗೂ ಶ್ವಾಸಕೋಶಗಳು 4 ರಿಂದ 6 ಗಂಟೆಗಳು, ಯಕೃತ್ 6ರಿಂದ 12 ಗಂಟೆಗಳು, ಮೂತ್ರಪಿಂಡ 36 ಗಂಟೆಗಳು, ಕರುಳು ಹಾಗೂ ಮೇದೋಜೀರಕ ಗ್ರಂಥಿ 6 ಗಂಟೆಗಳು ಹೀಗೆ. ಈ ಅವಧಿಯನ್ನು ಮತ್ತಷ್ಟು ಹೆಚ್ಚಿಸಲು ವಿಶ್ವದಾದ್ಯಂತ ಸಂಶೋಧನೆಗಳು ನಡೆಯುತ್ತಿವೆ.

ಭಾರತದಲ್ಲಿ ಅಂಗಾಂಗ ಕಸಿಗಳ ಬೇಡಿಕೆ ಹಾಗೂ ಪೂರೈಕೆಗೆ ಬಂದರೆ ಕಸಿ ಮಾಡಬಹುದಾದ ಎಲ್ಲಾ ಅಂಗಾಂಗಗಳನ್ನು ತೆಗೆದುಕೊಂಡರೆ ವರ್ಷಕ್ಕೆ 3,00,000 ಅಂಗಾಂಗಳ ಬೇಡಿಕೆಯಿದೆ. ಆದರೆ ಇದರಲ್ಲಿ ಸರಾಸರಿ ಶೇಕಡಾ 5ರಷ್ಟು ಮಾತ್ರ ಪೂರೈಕೆಯಾಗುತ್ತಿದೆ. ಉದಾಹರಣೆಗೆ ಮೂತ್ರಪಿಂಡಗಳಿಗೆ ವರ್ಷಕ್ಕೆ 2,00,000 ಬೇಡಿಕೆ ಇದೆ. ಆದರೆ ಕಸಿಯಾಗುತ್ತಿರುವುದು ಕೇವಲ 10,000.

ಕೆಲವು ದಾಖಲೆಗಳು

- ವಿಶ್ವದ ಅತ್ಯಂತ ಹಿರಿಯ ಅಂಗದಾನಿ (ಮೆದುಳು ಸತ್ತ) ವರ್ಜೀನಿಯಾದ 95 ವರುಷದ ಪುರುಷ– ಯಕೃತ್ ದಾನ.
- ಬದುಕಿರುವಾಗಲೇ ಅತ್ಯಂತ ಹಿರಿಯ ಅಂಗದಾನಿ ಬ್ರಿಟನ್ನಿನ 85 ವರ್ಷದ ಮಹಿಳೆ– ಮೂತ್ರಪಿಂಡ ದಾನ.
- ವಿಶ್ವದ ಅತ್ಯಂತ ಕಿರಿಯ ಅಂಗದಾನಿ ಕೇವಲ ಹುಟ್ಟಿ 74 ನಿಮಿಷವಾಗಿದ್ದ ಮಗು (ಮೆದುಳು ಸತ್ತ).
- ಭಾರತದ ಅತ್ಯಂತ ಹಿರಿಯ ಅಂಗದಾನಿ ಮಾಯಾ ಸೋಲಾಂಕಿ ಎಂಬ 78 ವರ್ಷದ ಮಹಿಳೆ (ಮೆದುಳು ಸತ್ತ). ಆಕೆಯ ಯಕೃತ್ ಹಾಗೂ ಕಿಡ್ನಿಗಳನ್ನು ದಾನ ಮಾಡಲಾಯಿತು.
- ಭಾರತದ ಅತ್ಯಂತ ಕಿರಿಯ ಅಂಗದಾನಿ ಸೂರತ್‌ನ ನಾಲ್ಕು ದಿನಗಳ ಮಗು. ಆ ಮಗು ಮೆದುಳು ಸತ್ತ ನಂತರ ಅದರ ಅಂಗಾಂಗಳನ್ನು ಆರು ವಿವಿಧ ಸ್ವೀಕೃತದಾರರಿಗೆ ದಾನ ಮಾಡಲಾಯಿತು.

ಸಾಮಾನ್ಯ ಜನರಲ್ಲಿ ಅಂಗಾಂಗ ಕಸಿಗಳ ಬಗ್ಗೆ ಜಾಗೃತಿ ಮೂಡಿಸಿ ಅದರ ಬಗ್ಗೆ ಶಿಕ್ಷಣ ನೀಡುವ ಅವಶ್ಯಕತೆ ಬಹಳ ಇದೆ. ಇದರ ಜೊತೆ ಜೊತೆಗೆ ಅಂಗಾಂಗ ದಾನದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಸಂಪೂರ್ಣವಾಗಿ ಹೊರದೂಡುವ ಅವಶ್ಯಕತೆ, ಅನಿವಾರ್ಯತೆ ಎದುರಾಗಿದೆ.

ಅಂಗಾಂಗ ದಾನದ ಬಗ್ಗೆ ಸಾಮಾನ್ಯವಾಗಿ ಕಂಡುಬರುವ ತಪ್ಪು ಕಲ್ಪನೆಗಳು

ಕಲ್ಪನೆ 1. – ಬದುಕಿರುವ ವ್ಯಕ್ತಿ ಅಂಗದಾನ ಮಾಡಿದರೆ ಭವಿಷ್ಯದಲ್ಲಿ ಆರೋಗ್ಯದಲ್ಲಿ ಬಹಳ ಏರುಪೇರಾಗುತ್ತದೆ .

ಸತ್ಯ : ಪರೀಕ್ಷೆಗಳನ್ನು ನಡೆಸಿದ ನಂತರವೇ ಅಂಗಾಂಗ ಹೊರತೆಗೆಯುವುದರಿಂದ ಇದಕ್ಕೆ ಆಸ್ಪದವಿಲ್ಲ. ವೈದಕೀಯ ಸೂಚನೆಗಳನ್ನು ಪಾಲಿಸಿದರೆ ಯಾವುದೇ ತೊಂದರೆ ಆಗುವುದಿಲ್ಲ

ಕಲ್ಪನೆ 2. – ಧಾರ್ಮಿಕ ದೃಷ್ಟಿಕೋನದಿಂದ ನೋಡುವುದಾದರೆ ಮೆದುಳು ಸತ್ತ ವ್ಯಕ್ತಿಯ ಅಂಗದಾನ ಮಾಡಿದರೆ ಅವನಿಗೆ ಸದ್ಗತಿ ದೊರೆಯುವುದಿಲ್ಲ. ಆ ವ್ಯಕ್ತಿ ಮುಂದಿನ ಜನ್ಮದಲ್ಲಿ ಅಂಗವಿಕಲನಾಗಿ ಹುಟ್ಟುತ್ತಾನೆ/ಳೆ.

ಸತ್ಯ : ಮುಂದಿನ ಜನ್ಮವೆನ್ನುವುದು ಮನುಷ್ಯರ ಗ್ರಹಿಕೆಗೆ ದೂರವಾದುದು. ಈ ಕಲ್ಪನೆಗೆ ದೃಢೀಕರಣ ಇಲ್ಲದ ಕಾರಣ ಅದು ಕೇವಲ ಮೂಢನಂಬಿಕೆ ಎಂದು ಕರೆಯಲಾಗುತ್ತದೆ.

ಕಲ್ಪನೆ 3. – ಕೇವಲ ಹೃದಯ, ಯಕೃತ್ ಹಾಗೂ ಮೂತ್ರಪಿಂಡಗಳನ್ನು ಮಾತ್ರ ಅಂಗಾಂಗ ಕಸಿ ಮಾಡಬಹುದು.

ಸತ್ಯ : ಇದಕ್ಕೂ ಮೇಲ್ಪಟ್ಟು ಮೊದಲೇ ಸೂಚಿಸಿದಂತೆ ಹಲವಾರು ಅಂಗಾಂಗಗಳ ಹಾಗೂ ಅಂಗಾಂಶಗಳನ್ನು ಕಸಿ ಮಾಡಬಹುದು.

ಕಲ್ಪನೆ 4. – ಯಾವುದೇ ಸಣ್ಣ ಖಾಯಿಲೆ ಇದ್ದರೂ ಅಂಗದಾನ ಮಾಡುವ ಹಾಗಿಲ್ಲ.

ಸತ್ಯ : ಹಾಗೇನಿಲ್ಲ. ದಾನ ಮಾಡುವ ಅಂಗ ಹಾಗೂ ಕೆಲವು ಅಗತ್ಯವಾದ ನಿಯತಾಂಕಗಳು ಸರಿಯಿದ್ದರೆ ಸಾಕು. ಉದಾಹರಣೆಗೆ.. ಅನಿಮಿಯಾ ಇರುವವರು ರಕ್ತದಾನ ಮಾಡುವ ಹಾಗಿಲ್ಲ. ಆದರೆ ಅವರು ದಾನ ಮಾಡುವ ಅಂಗ ಆರೋಗ್ಯವಾಗಿದ್ದರೆ ಅಂಗದಾನ ಮಾಡಬಹುದು.

ಇಂದಿನ ದಿನಗಳಲ್ಲಿ ವಿಶ್ವದ ಜನತೆ ಹೆಚ್ಚು ಹೆಚ್ಚು ಅಂಗಾಂಗ ದಾನಗಳಿಗೆ ಮುಂದಾಗಬೇಕು. ಇದರ ಬಗ್ಗೆ ಹೆಚ್ಚಿನ ಶಿಕ್ಷಣ ದೊರೆಯಬೇಕು ಮತ್ತು ಜಾಗೃತಿ ಮೂಡಬೇಕು.

***

ನಮ್ಮಪ್ಪ

– ಶೀಲಾ ಅರಕಲಗೂಡು

ಕಂಗಳಿಗೆ ಕಾಣಿಸದ ತಂಪಾದ ಗಾಳಿಯೊಲು
ತಿಂಗಳಿನ ಬೆಳಕಿನೊಲು ನಮ್ಮಪ್ಪ ನಮಗೆ ।
ರಂಗು ರಂಗಿನ ಬದುಕು ಸಾರು ಮಜ್ಜಿಗೆ ನಡುವೆ
ಸಂಗದಲ್ಲಿರಲವರು ನಗೆಯ ಬುಗ್ಗೆ ॥ 1 ॥

ಬಡತನದೊಳಿರಲೇನು ಕನಸಿಗಿರಲಿಲ್ಲ ಬರ
ಕಡಲಂತೆ ನಾವೆಯನು ದಾಟಿಸಿದರವರು ।
ಕಡೆಯುತ್ತಲೊಡಲನ್ನು ಬೆಣ್ಣೆಯನು ಹಂಚುತ್ತ
ಬಿಡದಂತೆ ನಮ್ಮನ್ನು ಬೆಳೆಸಿದವರು ॥ 2 ॥

ಹಾಲನ್ನು ನಮಗಿತ್ತು ನೀರನ್ನು ಕುಡಿಯುತ್ತ
ಬಾಳನ್ನು ತೇಯುತ್ತ ಗಂಧವನು ಸೂಸಿ ।
ಕಾಲ ಪರಿವೆಯ ತೊರೆದು ದುಡಿಮೆಯಲೆ ಮೈ ಮರೆತು
ಸೋಲುತ್ತ ಗೆಲಿಸಿದರು ಪಾಠ ಕಲಿಸಿ ॥ 3 ॥

ಹೆಣ್ಣು ಗಂಡುಗಳೆಂಬ ಭೇದವನು ತೋರದೆಯೆ
ಬಣ್ಣಗಳ ತುಂಬಿದರು ನಮ್ಮೆಲ್ಲರೊಳಗೆ ।
ಹಣ್ಣುಗಳ ಸವಿಯನ್ನು ತುಂಬಿದರು ಬಾಳಿನೊಳು
ಕಣ್ಣು ಕೊಟ್ಟರು ವಿದ್ಯೆ ರೂಪದೊಳಗೆ ॥ 4 ॥

ಹೊಡೆಯದೆಯೆ ಬಯ್ಯದೆಯೆ ಸರಸದಲಿ ತಿದ್ದುತ್ತ
ಸಡಗರಿಸಿ ನಮ್ಮೆಲ್ಲ ಗೆಲುವುಗಳ ಮುದದಿ ।
ಪಡೆದೆಲ್ಲ ನೋವುಗಳನೊಳಗೊಳಗೆ ನುಂಗುತ್ತ
ಕೊಡಿಸಿ ಹೋಗಿಹರಲ್ಲ ಸುಧೆಯ ಹಾದಿ ॥ 5 ॥

ಹಿರಿ ಕಿರಿಯರೆಲ್ಲರೊಳು ಸಮರಸದಿ ಬಾಳಿದರು
ಕರಗಿ ಹೋಗುವ ಮಧುರ ಸಕ್ಕರೆಯ ರೀತಿ ।
ಮರೆಮಾಚಿ ಹೋಗಿತ್ತು ನಿಜ ವಯಸು ನಸು ನಾಚಿ
ಬಿರಿದಂಥ ಸುಮವಾಗಿ ತೋರಿ ನೀತಿ ॥ 6 ॥

ಮೊಮ್ಮಕ್ಕಳಿಗೆ ಸೊಗದಿ ಕಥೆಗಳನು ಹೇಳುತ್ತ
ತಮ್ಮದೇ ರೀತಿಯಲಿ ಪಾಠ ಕಲಿಸಿದರು ।
ತಮ್ಮ ಚಿಂತನೆಗಳನು ಜೀವನದೊಳಳವಡಿಸಿ
ನೆಮ್ಮದಿಯ ಸೂತ್ರವನು ಕಂಡರವರು ॥ 7 ॥

ನುಡಿದಂತೆ ನಡೆದವರು ದಿನನಿತ್ಯ ನಡೆದವರು
ದೃಢ ದೇಹದಾರೋಗ್ಯ ಸರಳ ಬದುಕಿಂದ ।
ಕೆಡದಂತೆ ಜೀವನದ ಸಮತೋಲ ಸಾಧಿಸುತ
ಕಡೆ ತನಕ ನಗುತಿದ್ದು ನಲವಿನಿಂದ ॥ 8 ॥

ಶತಮಾನಕಿನ್ನಾರು ವರುಷಗಳು ಬೇಕಿತ್ತು
ಗತಿಸಿಯೇ ಬಿಟ್ಟರಲ ನಮ್ಮನ್ನು ಬಿಟ್ಟು ।
ಮಿತಿಯಿರದ ಮಮತೆಯನು ಸುರಿಸುತ್ತ ತೆರಳಿದರು
ಮತಿ ನೀತಿ ಸಂಪತ್ತು ನಮಗೆ ಕೊಟ್ಟು ॥ 9 ॥

ನಮ್ಮಪ್ಪ ನಮ್ಮಮ್ಮ ನಮಗಿವರೆ ಮಾದರಿಯು
ನಮ್ಮ ಭಾಗ್ಯದ ಕದವ ತೆರೆದು ಹರಸಿಹರು ।
ನಮ್ಮೊಳಗೆ ತಾವಿಳಿದು ತಮ್ಮತನವನೆ ತೊರೆದು
ಹೆಮ್ಮೆಯಲಿ ಕಾಪಿಟ್ಟು ಹೋದರವರು ॥ 10 ॥

****

ಪ್ರವಾಸ ಕಥನ

ಜಪಾನೀಯರ ಪವಿತ್ರ ಪರ್ವತ ಫ್ಯೂಜಿಯಾ ಮ

- ನಾಗರತ್ನ ಚಂದ್ರಶೇಖರ್

ನಿಸರ್ಗದ ಚೆಲುವನ್ನು ಹೆಚ್ಚಿಸುವ ಆಭರಣಗಳೆಂದರೆ ನದಿ, ಸರೋವರಗಳು, ಬೆಟ್ಟಗುಡ್ಡಗಳು, ಪರ್ವತಗಳು, ದಟ್ಟ ಕಾಡುಗಳು, ಇವುಗಳ ಮಧ್ಯೆ ಸಂಚಾರ ಮಾಡುವಾಗ ಸಿಗುವ ಸಂತೋಷ ನೆಮ್ಮದಿ ಶಾಂತಿಯನ್ನು ಅನುಭವಿಸಿಯೇ ತಿಳಿಯಬೇಕು. ಪ್ರವಾಸಿಗಳು ಇಂತಹ ರಮ್ಯ ತಾಣಗಳನ್ನು ಅರಸುತ್ತ ದೇಶ ವಿದೇಶಗಳನ್ನು ಪರ್ಯಟನೆ ಮಾಡುತ್ತಲೇ ಇರುತ್ತಾರೆ. ಇಂಥ ಒಂದು ಅವಕಾಶ ನಮಗೆ ಇತ್ತೀಚೆಗೆ ಸಿಕ್ಕಿದ್ದು ಜಪಾನ್ ಪ್ರವಾಸದಲ್ಲಿ.

ಜಪಾನ್, ಏಷ್ಯಾ ಖಂಡದ ಒಂದು ಪುಟ್ಟ ಸುಂದರ ದ್ವೀಪರಾಷ್ಟ್ರ. ಪ್ರತಿ ವರ್ಷ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಈ ಪುಟ್ಟ ದೇಶವಿಡೀ ಸಕೂರ ಹೂವಿನ ಕಣ್ಮನ ಸೆಳೆಯುವ ವನ ದೇವಿಯ ನೋಟ. ಇದು ಚೆರಿಬ್ಲಾಸಂ ಕಾಲವೆಂದೇ ಪ್ರಸಿದ್ಧಿಯಾಗಿದೆ. ನಮ್ಮ ವಿಮಾನ ಟೋಕಿಯೋ ತಲುಪಿದಾಗ ಸ್ವಲ್ಪ ಮಳೆ, ಚಳಿ, ಜೋರಾದ ಗಾಳಿ. ಮರುದಿನ ನಮ್ಮ ಗೈಡ್ ಹಿರೋಶಿ ಹೇಳಿದಂತೆ "ಯು ಆರ್ ಲಕ್ಕಿ, ಯು ಆರ್ ಲಕಿ" ಅಂತ ವಾರ ಪೂರ್ತಿ ಸೂರ್ಯದೇವ ಪ್ರಸನ್ನನಾಗಿದ್ದ. ಹಾಗಾಗಿ ಸುಪ್ತ ಜ್ವಾಲಾಮುಖಿಯೊಂದನ್ನು ದೂರದಿಂದಲಾದರೂ ದರ್ಶಿಸುವ ಅದೃಷ್ಟ ಸಿಕ್ಕಿತು. ಟೋಕಿಯೋದಿಂದ ಸುಮಾರು ನೂರು ಕಿಲೋ ಮೀಟರ್ ದೂರದಲ್ಲಿರುವ ಮೌಂಟ್ ಫ್ಯೂ ಜಿ ಜಪಾನಿನ ಎತ್ತರವಾದ ಪರ್ವತ ಶಿಖರ. 3,776 ಮೀಟರ್ ಅಂದರೆ 12,388 ಅಡಿ ಎತ್ತರವಿದ್ದು ಇದು ವರ್ಷದ ಐದು ತಿಂಗಳು ಪೂರ್ತಿ ಹಿಮದಿಂದ ಮುಚ್ಚಿ ಹೋಗಿರುತ್ತದೆ. ಶಂಕುವಿನಾಕಾರದಲ್ಲಿ ಏಕಾಂಗಿಯಾಗಿ ನಿಂತಿರುವ ಈ ಸುಂದರ ಪರ್ವತದಲ್ಲಿ ಸುಮಾರು ಒಂದು ಲಕ್ಷ ವರ್ಷಗಳಷ್ಟು ಹಿಂದಿನಿಂದಲೂ ಅಗ್ನಿ ಪರ್ವತ ಚಟುವಟಿಕೆ ಪ್ರಾರಂಭವಾಗಿರಬಹುದು ಎನ್ನಲಾಗಿದೆ.

ಮೌಂಟ್ ಫ್ಯೂಜಿಯಲ್ಲಿ 1707ರಲ್ಲಿ ಕೊನೆಯ ಅಗ್ನಿ ಪರ್ವತ ಸಿಡಿದಿತ್ತು. ಆಗ ಸುತ್ತಮುತ್ತ ಎರಡು ಕಿಲೋಮೀಟರ್ ವರೆಗೆ ನಾಲ್ಕು ಮೀಟರಿನಷ್ಟು ಎತ್ತರಕ್ಕೆ ಲಾವಾದ ಬೂದಿ ಸಂಗ್ರಹವಾಗಿತ್ತು. ಈ ಕುರಿತ ಮಾಹಿತಿಗಳನ್ನು ಚಿತ್ರಗಳು ವಿಡಿಯೋ ಪ್ರದರ್ಶನಗಳ ಮೂಲಕ ತಿಳಿಸುವ 'ಫ್ಯೂಜಿ ವರ್ಲ್ಡ್ ಹೆರಿಟೇಜ್' ಕಟ್ಟಡ 2013ರಲ್ಲಿ ಸ್ಥಾಪಿತವಾಗಿದೆ. 2013ರಲ್ಲಿ ಫ್ಯೂಜಿಯನ್ನು



ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಲಾಗಿದೆ. ಈ ಪರ್ವತ ಜಪಾನಿಯರಿಗೆ ಆಧ್ಯಾತ್ಮಿಕ ಮಹತ್ವವುಳ್ಳದ್ದಾಗಿದ್ದು, ಜೀವನದಲ್ಲಿ ಒಮ್ಮೆಯಾದರೂ ಅದನ್ನು ಏರುವ ಮಹತ್ವಾಕಾಂಕ್ಷೆ ಇದೆ. ಪ್ರತಿ ವರ್ಷ ದೇಶ ವಿದೇಶಗಳಿಂದ ಬರುವ ಲಕ್ಷಾಂತರ ಜನ ಈ ಪರ್ವತವನ್ನು ಏರುತ್ತಾರೆ. ಇದಲ್ಲದೆ ಕಲಾವಿದರು, ಕವಿಗಳು, ಬರಹಗಾರರಿಗೆ ಇದು ಸ್ಫೂರ್ತಿಯ ಚಿಲುಮೆಯಾಗಿದೆ. ಹೆಚ್ಚಾಗಿ ಜಪಾನಿನ ಸ್ಥಳೀಯ ಧರ್ಮವಾದ ಶಿಂಟೋಯಿಸಂನಲ್ಲಿ ಪವಿತ್ರ ಪರ್ವತವೆಂದು ಇದನ್ನು ಪರಿಗಣಿಸಲಾಗಿದೆ. ಹಾಗಾಗಿ ಇದು ಧಾರ್ಮಿಕ ಆಚರಣೆಗಳಿಗೂ, ತೀರ್ಥಯಾತ್ರೆಗೂ ಒಂದು ತಾಣವೆನಿಸಿದೆ. 2023ರಲ್ಲಿ ಎರಡು ಲಕ್ಷ ಪರ್ವತಾರೋಹಿಗಳು ಎರಡು ತಿಂಗಳಲ್ಲಿ ಫ್ಯೂಜಿಯನ್ನು ಏರಿದ್ದರು. ಕ್ರಿಸ್ತಶಕ 660ರಲ್ಲಿ ಸನ್ಯಾಸಿ ಒಬ್ಬರು ಪ್ರಪ್ರಥಮವಾಗಿ ಇದರ ಆರೋಹಣವನ್ನು ಮಾಡಿದ್ದರು. 1867ರಲ್ಲಿ ಲೇಡಿ ಫ್ಯಾನ್ನಿ ಪಾರ್ಕ್ಸ್ ಆರೋಹಣ ಮಾಡಿದ ಮೊಟ್ಟಮೊದಲ ಮಹಿಳೆ. ಚೆರಿ ಹೂಗಳು, ಪ್ರಶಾಂತವಾದ ದೇವಾಲಯಗಳು, ಹಿಮದಿಂದ ಆವೃತವಾದ ಅದ್ಭುತ ಶಿಖರಗಳು ಸೇರಿದಂತೆ ಭೂ ದೃಶ್ಯಗಳ ಸೌಂದರ್ಯದ ಅದ್ಭುತ ಲೋಕ ಇಲ್ಲಿ ತೆರೆದುಕೊಳ್ಳುತ್ತದೆ.

ಟೋಕಿಯೋದಿಂದ ನೇರ ಬಸ್ಸುಗಳು, ರೈಲುಗಳು ಹಾಗೂ ಟ್ಯಾಕ್ಸಿಗಳ ಸೇವೆ ಇದೆ. ಶಿಖರವು ಸಮುದ್ರ ಮಟ್ಟದಿಂದ 3776 ಮೀಟರ್ ಎತ್ತರದಲ್ಲಿದ್ದು ಇದರ ಮೇಲ್ಭಾಗದ ಕುಳಿ (ಜ್ವಾಲಾಮುಖಿ ಸಿಡಿದ) ಭಾಗ 600 ಮೀಟರ್ ವ್ಯಾಸ, 200 ಮೀಟರ್ ಆಳವಾಗಿದೆ. ಇದರ ಸುತ್ತಳತೆ ನಾಲ್ಕು ಕಿಲೋಮೀಟರ್ ಇದ್ದು, ಸುಮಾರು ಒಂದು ಗಂಟೆ ಮೂವತ್ತು ನಿಮಿಷಗಳಲ್ಲಿ ಒಂದು ಪ್ರದಕ್ಷಿಣೆಯನ್ನು ಮುಗಿಸಬಹುದು. ಶಿಖರದಲ್ಲಿ ಒಂದು ಚಿಕ್ಕ ಅಂಚೆ ಕಚೇರಿಯೂ ಇದೆ. ಇಲ್ಲಿಂದ ಅಂಚೆ ಕಾರ್ಡ್ ಕೂಡ ಕಳಿಸಬಹುದು. ಮೌಂಟ್ ಫ್ಯೂಜಿ ಐದು ಸುಂದರ ಸರೋವರಗಳಾದ ಆಶೀ, ಕವಾಗುಚಿ, ಯಮನಾಕ ಸೈಕೋ, ಮೋಟೋಸು ಗಳಿಂದ ಸುತ್ತುವರೆದಿದೆ . ಇವುಗಳ ಸುತ್ತಮುತ್ತ ಬಿಸಿನೀರಿನ ಬುಗ್ಗೆಗಳು, ವಿಶ್ರಾಂತಿ ಶಿಬಿರಗಳು, ಅನೇಕ ದೇವಾಲಯಗಳು ಇವೆ.

ಈ ಪರ್ವತವನ್ನು ಫ್ಯೂಜಿಯಾಮ, ಫ್ಯೂಜಿಸ್ಯಾಮ್ ಎಂದೂ ಕರೆಯಲಾಗುತ್ತದೆ. 'ಕಾಗುಯಾ' ಹೆಸರಿನ ರಾಜಕುಮಾರಿಯ ನೆನಪಿಗಾಗಿ ಇದನ್ನು ಕರೆಯಲಾಗಿದೆ ಎಂಬ ಜಾನಪದ ಕಥೆಯೂ ಇದೆ. ಹಾನ್ಸು ದ್ವೀಪದಲ್ಲಿ ಇರುವ ಈ ಪರ್ವತಕ್ಕೆ ಅನೇಕ ಆರೋಹಣ ಮಾರ್ಗಗಳಿವೆ. ಫ್ಯುಜಿನೋಮಿಯ, ಶುಭಶಿರಿ ಮಾರ್ಗಗಳಿಗಿಂತ ಯೋಶಿಡೋ ಜನಪ್ರಿಯ ಮಾರ್ಗವೆನಿಸಿದೆ. ಜುಲೈನಿಂದ ಸೆಪ್ಟೆಂಬರ್ ಮಧ್ಯಭಾಗದವರೆಗೂ ಬರುವ ಪ್ರವಾಸಿಗಳಿಗೆ ಅಲ್ಲಲ್ಲಿ ತಂಗಲು ವಿಶ್ರಾಂತಿ ತಾಣಗಳು, ನೀರು, ಊಟ ತಿಂಡಿ ವ್ಯವಸ್ಥೆಗಳಿವೆ. ಶಿಖರವನ್ನು ಚಾರಣ ಮಾಡಲು 30ರಿಂದ 40 ಗಂಟೆಗಳು ಬೇಕಾಗಬಹುದು. ಹಿಂದೆ ಸಮುರಾಯಿಗಳು ತರಬೇತಿಗಾಗಿ ಈ ಪರ್ವತದ ತಪ್ಪಲಿನ ಪ್ರದೇಶವನ್ನು ಬಳಸುತ್ತಿದ್ದರು. ತೀರ ಇತ್ತೀಚೆಗೆ ಜಪಾನ್ ಮತ್ತು ಅಮೆರಿಕದ ಮಿಲಿಟರಿ ಶಿಬಿರಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ.

ಫ್ಯೂಜಿಯ ಎಂಟನೇ ಹಂತ ಹಾಗೂ ಅದರಿಂದ ತುದಿಯವರೆಗೆ ಫ್ಯೂಜಿಸಾನ್ ಹೊಂಗು ಸೆಂಗನ್ ಟೈಶ ಅವರ ಒಡೆತನದಲ್ಲಿದೆ ಸಾವಿರದ ಮುನ್ನೂರಕ್ಕೂ ಹೆಚ್ಚು ದೇವಾಲಯಗಳು ಆತನ ನಿರ್ವಹಣೆಗೆ ಒಳಪಟ್ಟಿವೆ. 2013ರಿಂದ ಇಲ್ಲಿ ಆರೋಹಿಗಳಿಂದ 1000 ಯೆನ್ ಗಳನ್ನು ಸ್ವೀಕರಿಸಲಾಗುತ್ತದೆ. 1606ರಲ್ಲಿ ಸಕಿಗಹರಾ ಕದನವನ್ನು ಗೆದ್ದ ಯಡೋ ಅವಧಿಯ ಶೋಗನ್ ಟುಕುಗಾವ ಇಯಾಸು ಮುಖ್ಯ ಸಭಾಂಗಣದಂತಹ ಸುಮಾರು 30 ಕಟ್ಟಡಗಳನ್ನು ಎಂಟನೇ ನಿಲ್ದಾಣದಿಂದ ಮೇಲಕ್ಕೆ ನಿರ್ಮಿಸಿದನು. ಇದು ದೇವತೆಗಳ ವಾಸಸ್ಥಾನವೆಂದು ನಂಬಲಾಗಿದ್ದು ಪ್ರಾಚೀನ ಕಾಲದಿಂದ ಪವಿತ್ರ ಪರ್ವತವೆಂದು ಪರಿಗಣಿಸಲ್ಪಟ್ಟಿದೆ. ದಕ್ಷಿಣ ಭಾಗದಲ್ಲಿ ಸುಮಾರು 170 ಕಿಲೋಮೀಟರ್‌ನಷ್ಟು ನಡಿಗೆಯ ಹಾದಿಯನ್ನು 2021ರಲ್ಲಿ

ನಿರ್ಮಿಸಲಾಯಿತು. ಈ ಪರ್ವತದ ಕಾಡು ಹಾದಿಯಲ್ಲಿ ಬೆಳೆದಿರುವ ಮರಗಳ ಬೇರುಗಳು ಭೂಮಿಯ ಒಳಗೆ ಇಳಿಯದೇ ಭೂಮಿಯಿಂದ ಮೇಲಕ್ಕೆ ಚಾಚಿ ಬೆಳೆದಿರುವುದನ್ನು ಕಾಣಬಹುದು. ಅಗ್ನಿ ಪರ್ವತದಿಂದ ಉಕ್ಕಿ ಹರಿದ ಲಾವಾರಸ ತಣ್ಣಗಾದ ಮೇಲೆ ಅದರಲ್ಲಿದ್ದ ಖನಿಜಗಳು ಹಾಗೂ ಬೂದಿಯಿಂದ ಸುತ್ತಲಿನ ಮಣ್ಣು ಬಹಳ ಫಲವತ್ತಾಗಿದೆ. ಅದರಲ್ಲಿ ಬೆಳೆಯುವ ಚಹಾದ ಎಲೆಗಳಿಗೆ ತನ್ನದೇ ಆದ ವಿಶಿಷ್ಟ ರುಚಿ, ಪರಿಮಳ ಇರುತ್ತದೆ .

ನಾವು ನಾಲ್ಕನೇ ಹಂತದವರೆಗೂ ಬಸ್ಸಿನಲ್ಲಿ ಪ್ರವಾಸ ಮಾಡಿ ಅತಿ ಹತ್ತಿರದಿಂದ ಫ್ಯೂಜಿ ಪರ್ವತವು ಸಂಜೆಯ ಸೂರ್ಯ ಕಿರಣಗಳಿಂದ ಶೋಭಿಸುತ್ತಿರುವುದನ್ನು ಕಣ್ತುಂಬಿಕೊಂಡೆವು.

***

ಬೆರಗು

– ಹು.ವಾ.ಶ್ರೀಪ್ರಕಾಶ್

ಬೆರಗು ಆಹಾ ಎಂಥ ಬೆರಗು
ಬ್ರಹ್ಮಾಂಡವೊಂದು ಬೆರಗು
ಬ್ರಹ್ಮಾಂಡದೊಳಗೆ ಕಣಕಣವೂ ಬೆರಗೇ!

ತಿರುಗುವ ಭುವಿ ಗ್ರಹಗಳು ಬೆರಗು
ಲಕ್ಷೋಪಲಕ್ಷ ಜೀವಿಗಳು ಬೆರಗು
ಗಿಡದಲರಳುವ ಹೂವು ಬೆರಗು
ಮರ ಕೊಡುವ ಹಣ್ಣು ಬಲು ಬೆರಗು

ತಾಯ ಗರ್ಭದ ಮಗು ಬೆರಗು
ಹುಳು ಚಿಟ್ಟೆಯಾಗುವುದು ಬೆರಗು
ಮಣ್ಣಲಿ ಕಂಪಿರುವುದು ಬೆರಗು
ಜಲದಿಂದ ಬೆಳಕಪಡೆವುದು ಬೆರಗು

ಪಂಚಭೂತಗಳು ಬಲು ಬೆರಗು
ತ್ರಿಗುಣಗಳ ಮೇಲಾಟವದು ಬೆರಗು
ಮಗು ಮುದಿಯಾಗುವುದು ಬೆರಗು
ಹುಟ್ಟು ಸಾವುಗಳಾಟ ಅತಿ ಬೆರಗು

ನೋಟದಲಿ ಪ್ರೀತಿ ಬೆರಗು
ಮನಸುಗಳ ಸೆಳೆತ ಬೆರಗು
ಸ್ವಾರ್ಥ ಮರೆವ ಪರಿ ಬೆರಗು
ಜಗದೊಳಗಿನೀ ನಾಟಕ ಬೆರಗು

***

ರಾಗ–ಕವನ ಮಿಲನ

– ಶೀಲಾ ಅರಕಲಗೂಡು

ನಿನ್ನಯ ರಾಗವದೂ ಎದೆಯೊಳಗೇ
ಪದಗಳ ಮೂಡಿಸುತಾ ಬಿರಿಯುತಿದೆ
ಓ ಇನಿಯಾ
ಬೇಗನೆ ಬಹೆಯಾ
ಸೇರುವ ಹೊಮ್ಮಿಸಿ ಸವಿಯ ॥ ಪಲ್ಲವಿ ॥

ಸುರಿದಿದೆ ಮಳೆ ತಬ್ಬುತಲಿಳೆ ಸುಧೆಯನು ಹರಿಸಿ
ಬಿಡದಲೆ ನಾ ಬರುವೆನು ಬಳಿ ಕಾತರಿಸುತಲಿ
ಸುಮವರಳಿದೆ ಸಂಗಮದಲಿ ಘಮವನು ಹರಡಿ
ಅಂತೆಯೆ ನಾ ನಿನ್ನೊಡಲಲಿ ಮಧುರದಿ ಪಾಡೀ
ಹೊಸ ಹರುಷವ ತರುವಾ
ನವ ಭಾವವ ಮೆರೆವಾ
ಜನವದು ಕೇಳಲಿ ಪದವಾ ॥ ಚರಣ 1 ॥

ರಾಗದ ಸವಿ ಕವನದ ಛವಿ ಸೇರುತಲಿರಲಿ
ನಾದದ ತೆರೆ ಪದದಲಿ ಸೆರೆಯಾಗುತಲಿರಲಿ
ನವಿಲಿನ ಸಿರಿ ಸಾವಿರ ಗರಿ ನಿರುತರವಿರಲಿ
ಮಳೆಬಿಲ್ಲಿನ ಬಣ್ಣಗಳೊಲು ಹೊಳೆಯುತಲಿರಲೀ
ತಡ ಮಾಡದೆ ಬಾರಾ
ನಲ್ಮೆಯ ನೀ ತೋರಾ
ಹಾಡದು ಸಾಗಲಿ ದೂರಾ ॥ ಚರಣ 2 ॥

***

ಯತ್ನ ಮತ್ತು ವಿಫಲತೆ – ಲೇಖನಮಾಲೆ–4

ವರ ಪರೀಕ್ಷೆ

– ಮಾಧುರಿ ಕೃಷ್ಣ

ಬಹಳ ಉತ್ಸಾಹದಿಂದ ಲೇಖಕಿಯರ ಸಂಘದ ಸಾಹಿತ್ಯ ಮಂಥನದ ಕಾರ್ಯಕ್ರಮದಲ್ಲಿ ಕುಳಿತಿದ್ದೆ. ಬ್ಯಾಗಿನಲ್ಲಿಟ್ಟ ಮೊಬೈಲ್ ಮೇಲಿಂದ ಮೇಲೆ ರಿಂಗಣಿಸಲು ಶುರುವಾಯ್ತು. ತುಸು ಬೇಸರದಿಂದಲೇ ಎತ್ತಿ ನೋಡಿದೆ. ತಮ್ಮನದ್ದು! ಪರವಾಗಿಲ್ಲ, ಆ ಮೇಲೆ ಮಾಡಿದ್ರಾಯ್ತು ಎಂದು ಒಳಗಿಡಲು ಹೋದರೆ ಪುನಃ ಕರೆಯಿತು. ಓಹ್! ಇದೇನೋ ತುರ್ತು ಸಮಾಚಾರ ಎಂದುಕೊಂಡೇ ಪಕ್ಕದಲ್ಲಿ ಕುಳಿತವರ ಕ್ಷಮೆ ಕೇಳುತ್ತ ಸಭೆಯ ಹಿಂಭಾಗದ ಸಭಾಂಗಣದ ಪ್ರವೇಶ ದ್ವಾರಕ್ಕೆ ಬಂದೆ.

"ಅದೆಷ್ಟು ಬಾರಿ ನಿಂಗೆ ಕಾಲ್ ಮಾಡುವುದು ಮಾರಾಯ್ತೀ, ಎತ್ತುವುದೇ ಇಲ್ಲ!" ತಮ್ಮನ ಆಕ್ಷೇಪಣೆ ಬಂತು. "ಆವತ್ತು ನೀನೊಂದು ಜಾತಕ ಕಳಿಸಿದ್ದೀಯಲ್ಲ, ಚೆನ್ನಾಗಿ ಹೊಂದಿಕೊಳ್ಳುತ್ತೆ, ಗೋತ್ರವೂ ಸರಿಯಾಗಿದೆ... “

ಮನಸ್ಸಲ್ಲೇ ಗೊಣಗಿಕೊಂಡೆ, 'ಇಷ್ಟನ್ನು ಹೇಳಲು ಇವನಿಗೆ ಈಗಲೇ ಅರ್ಜೆಂಟಾಗಬೇಕೇ!'

"ಆಯ್ತು, ನಾನೀಗ ಯಾವುದೋ ಸಭೆಯಲ್ಲಿದ್ದೇನೆ, ಆಮೇಲೆ ಮಾತಾಡುವಾ" ಎಂದು ಹೇಳುವಷ್ಟರಲ್ಲಿ , "ಹೇ ಕೇಳಿಲ್ಲೀ.." ತಮ್ಮ ಅವಸರದಿಂದ ಕಿರುಚಿದ. “ಆ ಹೆಣ್ಣಿನ ಕಡೆಯ ಮೂರು ಆಟೋ ಜನರು ಆಗಲೇ ನಿಮ್ಮನೇ ಬಾಗಿಲಲ್ಲಿದ್ದಾರಂತೆ. ಬೆಲ್ ಮಾಡಿದರೆ ಯಾರೂ ಬಾಗಿಲು ತೆರೆಯುತಿಲ್ಲ ಎಂದು ನಂಗೆ ಮಾಡಿದ್ದಾರೆ. ಎಲ್ಲಿಗೆ ಸವಾರಿ ಹೋಗಿದ್ದೀಯಾ. ಬೇಗ ಹೋಗು ಮನೆಗೆ, ನಮ್ಮ ಕುಮಾರನಿಗೂ ಬೇಗ ನಿಮ್ಮ ಮನೆಗೆ ಹೋಗಲು ತಿಳಿಸಿದ್ದೇನೆ" ಎಂದು ಒಂದೇ ಉಸಿರಲ್ಲಿ ಹೇಳಿದ

'ಅಯ್ಯೋ ಕೋಟಿಲಿಂಗೇಶ್ವರನೇ!' ಎಂದುಕೊಂಡು, ಅದಾರನ್ನೋ ಇಳಿಸಿ ಹೊರಟಿದ್ದ ಆಟೋ ಕಡೆಗೆ ಓಡೋಡಿ ಹೋದೆ .ಸಭಾಂಗಣದಿಂದ ಚಪ್ಪಾಳೆ ಜೋರು ಜೋರಾಗಿ ಕೇಳಿ ಬರುತಿತ್ತು.

"ಹಾಂ... ಹಾಂ... ಮನೆಗೆ ಹೊರಟಾಯ್ತು ಮಾರಾಯಾ, ಯಾಕಿಷ್ಟು ಅವಸರದಿಂದ ಅವರನ್ನು ಮನೆಗೆ ಕಳಿಸಿದ್ದು? ಮೊದಲೇ ನಂಗೆ ಹೇಳಬಾರದಿತ್ತೇ" ಒಟ್ಟಾರೆ ನಂಗೆ ಗೊಂದಲ.

"ನಾನೇನು ಕಳಿಸಿಲ್ಲ ಮಾರಾಯ್ತೀ.. ಇನ್ನಾರಿಗೋ ವಧು ತೋರಿಸಲು ನಿಮ್ಮ ಬಡಾವಣೆಗೆ ಬಂದಿದ್ದರಂತೆ, ಹಾಗೇ ನಿಮ್ಮ ವರನನ್ನೂ ನೋಡಿಬಿಡುತ್ತೇವೆ ಎಂದು ನನಗೆ ಫೋನು ಮಾಡಿದರು. ಆದಷ್ಟು ಬೇಗ ಮನೆಗೆ ಹೋಗು!" ಎಂದವನೇ ತಮ್ಮ ಫೋನ್ ಕಟ್ ಮಾಡಿದ.

ತಲೆಯಲ್ಲಿ ನೂರು ಯೋಚನೆಗಳು ತುಂಬಿಕೊಂಡುವು. 'ಅಲ್ಲಾ, ಮೂರು ಆಟೋ ಜನರು ನಿಂತು ಕಾಯಲಾದರೂ ಜಾಗವಿದೆಯೇ ನಮ್ಮ ಪಟ್ಟಣದ ಮನೆ ಮುಂದೆ, ಮಿನಿಮಮ್ ಕಾರ್ ಪಾರ್ಕಿಂಗಿಗಷ್ಟೇ ಜಾಗ ಬಿಟ್ಟು ಮತ್ತೆಲ್ಲ ಕಟ್ಟಿಬಿಡುತ್ತೇವೆ, ನಾವು ಪಟ್ಟಣಿಗರು!

"ಸ್ವಲ್ಪ ಬೇಗ ಹೋಗಪ್ಪ !"ಎಂದೆ ಆಟೋ ಡ್ರೈವರಿಗೆ. "ಇನ್ನೆಷ್ಟು ಬೇಗ ಡ್ರೈವ್ ಮಾಡಬೇಕು. ಟ್ರಾಫಿಕ್ ಕಾಣ್ಸೋದಿಲ್ಲವೇ?" ಡ್ರೈವರನ ಸಿಡುಕು ನುಡಿಗೆ ಬಾಯಿ ಮುಚ್ಚಿಕೊಂಡೆ.

'ಹೌದು.. ಮನೆಯಲ್ಲಿ ಹಾಲಾದ್ರೂ ಇದೆಯೇ ಕಾಫಿ ಮಾಡಲು' ಎಂದುಕೊಳ್ಳುವಷ್ಟರಲ್ಲಿ ಬೆಳಿಗ್ಗೆ ಕಾಫಿಪುಡಿ ಮುಗಿದು ಹೋಗಿದ್ದು ನೆನಪಾಗಿ ಎದೆ ಧಸಕ್ಕೆಂದಿತು!

ಇದ್ದುದರಲ್ಲೇ ಧೈರ್ಯ ತಂದುಕೊಳ್ಳುವ ಪ್ರಯತ್ನ ಮಾಡುತ್ತ, "ಇಲ್ಲೇ ಯಾವ್ದಾದ್ರೂ ಅಂಗಡಿ ಮುಂದೆ ಸ್ವಲ್ಪ ನಿಲ್ಸಪ್ಪ!" ಎಂದು ಡ್ರೈವರನ್ನು ವಿನಂತಿಸುವುದರೊಳಗೆ ಅವನು, "ಅಡ್ರೆಸ್ಸ್ ಬಂದಾಯ್ತು.. ಇಳ್ಕಳಿ!" ಎಂದುಬಿಟ್ಟ.

"ಆಂ....", ಕಣ್ಣರಳಿಸಿ ನೋಡಿದೆ. ಮನೆ ಏನೋ ನಂದೇ. ಆದರೆ ಇಷ್ಟು ಜನಾ ಯಾಕೆ ಕಾಣಿಸ್ತಿದ್ದಾರೆ?

"ಬೇಗ ಬಾಡ್ಗೆ ಕೊಡಿ ಅಮ್ಮಾ, ನಂಗೆ ಲೇಟಾಗ್ತದೆ!" ಎಂದಾಗ ಎಚ್ಚೆತ್ತು ತಡಕಾಡಿ ನೂರರ ನೋಟು ಹಿಡಿದೆ. 90 ರೂ. ಆಗಿತ್ತು, ಚಿಲ್ಲರೆ ಇಲ್ಲ! ಎಂದವನೇ ಆಟೋ ಹೊರಡಿಸಿಕೊಂಡು ಹೋಗೋ ಹೊತ್ತಿಗೆ, "ಹೋ... ಬಂದರು... ಬಂದೇಬಿಟ್ಟರು!" ಎನ್ನುತ್ತ ಬಾಗಿಲಲ್ಲೇ ನಿಂತು ಬೆಲ್ ಮಾಡುತ್ತಲೇ ಇದ್ದ ಮೂರು ಆಟೋ ಮಂದಿ ನನ್ನನ್ನು ಸ್ವಾಗತಿಸಲು ಗೇಟಿಗೆ ಬಂದರು. ಹೇಗೋ ಅವರ ಮಧ್ಯೆ ಜಾಗ ಮಾಡಿಕೊಂಡು ಹೋಗಿ ಬೀಗ ತೆಗೆದ ನನ್ನನ್ನು ಅಲ್ಲೇ ಬಿಟ್ಟು ಅವರೆಲ್ಲಾ ಮನೆಯೊಳಗೆ ನುಗ್ಗಿದರು.

"ವ್ಹಾ... ಮನೆ ಭಾರೀ ಚೆಂದವಿದೆ. ಕಿಟಿಕಿಗಳು ದೊಡ್ಡ ದೊಡ್ಡದಾಗಿ ಗಾಳಿ ಬೆಳಕು ಯಥೇಷ್ಟ! ಸೋಫಾ ನೋಡು, ಎಷ್ಟು ಮೆತ್ತಗೆ. ಕೂತ್ಗಂಡು ನೋಡೇ, ಈ ಗಾಜಿನ ಡೈನಿಂಗ್ ಟೇಬಲ್ಲಂತೂ ನಂಗೆ ಭಾಳಾ ಖುಷಿಯಾಯ್ತು!"ಎಂದು ಹೇಳುತ್ತ ಒಬ್ಬಾಕೆ, "ಎಷ್ಟು ಕೊಟ್ರ.??" ಎಂದಳು. ಇನ್ಯಾರೋ ಫ್ಯಾನ್ ಸ್ವಿಚ್ಚ್ ಹಾಕಿಯೇ ಬಿಟ್ಟರು. "ಅಬ್ಬ, ಈಗ ಜೀವ ಬಂತು! ಹೊರ ಬಿತ್ತು ಮತ್ತೊಂದು ಧ್ವನಿ.

ನಾನೋ ಬಾಗಿಲಿಗೆ ಸಿಕ್ಕಿಸಿದ ಬೀಗದ ಎಸಳನ್ನು ಇನ್ನೂ ತೆಗೆಯುತ್ತಲೇ ಇದ್ದೆ.

"ಯಾಕೆ? ಒಬ್ಬರೇ ಇದ್ದೀರಾ ಮನೆಯಲ್ಲಿ.. ಮದುವಣಿಗ ಎಲ್ಲಿ?"ಎಂದು ಸುತ್ತಮುತ್ತ ಹುಡುಕುತ್ತ, "ಕನ್ಯೆ ಕರೆ ತಂದಿದ್ದೀವಿ, ಇಗೋ ಇವಳೇ, ನೋಡಿಬಿಡಿ. ಹೋಗಮ್ಮ, ಅವ್ರ ಕಾಲಿಗೆ ಬೀಳು, ಅವ್ರ ಆಶೀರ್ವಾದ ನಿಂಗೆ ಆವಶ್ಯ ಬೇಕು!"

ನನ್ನ ಮನೆಯಲ್ಲೇ ನಾನು ಬಾಗಿಲ ಬಳಿಯಲ್ಲೇ ಅವಾಕ್ಕಾಗಿ ನಿಂತಿದ್ದೆ. ಕಣ್ಣೋ ತೆರೆದ ಬಾಗಿಲಿಂದಾಚೆ ಗೇಟಿನ ಬಳಿ ಗುಡು ಗುಡಾಯಿಸಿಕೊಂಡು ಬಂದು ನಿಲ್ಲುತಿದ್ದ ರಾಯಲ್ ಎನ್‌ಫೀಲ್ಡ್‌ನಲ್ಲಿದ್ದ ಸೋದರಳಿಯನಿಗೆ 'ಹೋಗು, ವಾಪಾಸು ಹೊರಟು ಹೋಗು, ಹೆಲ್ಮೆಟ್ ಏರಿಸಿಕೋ" ಎನ್ನುತ್ತಲೇ ಇತ್ತು! ಬೈಕು ಕಿಕ್ ಹೊಡೆಸಿಕೊಂಡು ಕಣ್ಮರೆಯಾದ ಮೇಲಷ್ಟೇ ಉಸಿರು ಎಳೆದುಕೊಂಡು ಮನೆಯೊಳಗೆ ತಿರುಗಿ ನೋಡಿದೆ.

***

ತಾಯಂದಿರ ದಿನಕ್ಕಾಗಿ

ಮರುಜನ್ಮ

– ಅನ್ನಪೂರ್ಣ ಸುಬ್ಬರಾವ್

ನನ್ನ ಗರ್ಭದ ಏಳುಸುತ್ತಿನ ಕೋಟೆಯಲಿ
ನಿನ್ನನಿಟ್ಟು ಕಣ್ರೆಪ್ಪೆಯಂತೆ ಕಾಯುತಿದ್ದೆ
ನಡೆದರೆ ನೋವಾಗುವುದೇ ಕಂದ ಎಂದು
ದಿನಕ್ಕೆರಡು ಬಾರಿ ಕೇಳುತಿದ್ದೆ...

ಅಷ್ಟೇ ಆತಂಕ ಎಲ್ಲರಿಗೂ ಹೇಳಿದ್ದೇ ಹೇಳಿದ್ದು
ಕೆಳಗೆ ಕೂಡಬೇಡ, ದಡ ದಡ ಓಡಾಡಬೇಡ,
ಮಹಡಿ ಮೆಟ್ಟಿಲು ಹತ್ತಿ ಇಳಿಯಬೇಡ
ಗಾಡಿಯಲ್ಲಿ ಕುಳಿತು ಓಡಾಡಬೇಡ...

ಕಾಫಿ ವಾಸನೆ ಮೂಗಿಗೆ ಬಡಿವಹಾಗಿಲ್ಲ
ಊಟ, ತಿಂಡಿ, ನೀರು ಸೇರುವಂತಿಲ್ಲ..
ವಾಸನೆಗೆ, ವಾಕರಿಕೆ, ಉಬ್ಬಳಿಕೆ ದಿನವೆಲ್ಲ
ಮೂರು ತಿಂಗಳು ವಾಂತಿ, ಗುಳಿಬಿದ್ದ ಕೆನ್ನೆ...

ಹೊಟ್ಟೆ ಬೆನ್ನಿಗಂಟಿದೆ, ಅಸ್ತಿಪಂಜರವಾಗಿದೆ
ಇನ್ನೆಷ್ಟು ದಿನಗಳು, ದೂಡುವದು ಬರಿಹೊಟ್ಟೆ
ಹೊಟ್ಟೆಯಲ್ಲಿನ ಕುಡಿ ದಕ್ಕುವುದು ದಿಟವೇ..?
ಆದರದು ಚೀರುತ್ತಿದೆ ನಾನಿರುವೆನೆಂದು...

ಅಮ್ಮ ಎದ್ದೇಳು... ತಿನ್ನು ಹಸಿವಾಗುತ್ತಿದೆ
ನೀನು ಮಲಗಿದರೆ, ನನಗೂ ನಿದ್ದೆ ಬಂದೀತು
ನರನಾಡಿಗಳಲಿ ಶಕ್ತಿ ಚೇತನವು ಹರಿದಾಡಿ
ತಿಂದದ್ದೆಲ್ಲವನು ದಕ್ಕಿಸಿಕೊಂಡು ಹೋದೆ....

ಬಸುರಿ ಬಯಕೆಗಳೆಲ್ಲ ಒಂದೊಂದೇ ತೀರಿಸಿ
ಗಾಳಿ ತುಂಬಿದ ಬಲೂನಿನಂತಾದೆ ದಿನದಿನಕೆ
ಬದಲಾದ ಅವತಾರಕ್ಕೆ ನಾನೇ ಬೆರಗಾದೆ
ಶುರುವಾಯ್ತು ಮಿಸುಕಾಟ ಒದೆಯುವಾಟ...

ಈಜುತಿತ್ತು, ಒದೆಯುತ್ತ ಮಾತು ಆಲಿಸುತಿತ್ತು
ಇಷ್ಟೇ ಏನು ನನ್ನ ಪ್ರಪಂಚ...? ಕೇಳುತಿತ್ತು
ಇಲ್ಲ, ಬಾವಿಯ ಕಪ್ಪೆಯಂತೆ ಬದುಕಲಾರೆ..!!
ಬೇಗ ಹೊರನೂಕೆಂದು ಜಾಡಿಸುತ್ತಿತ್ತು....

ಬೇಡ ಮಗು, ಅವಸರಪಡಬೇಡ..
ಹೊರಪ್ರಪಂಚಕ್ಕೆ ನೀನಿನ್ನು ಅಣಿಯಾಗಿಲ್ಲ.
ಸಮಯ ಬಂದಾಗ ನಾನೇ ಕರೆತರುವೆ
ನೆಮ್ಮದಿಯಿಂದ ಇರು, ಸಮಾಧಾನಿಸುತ್ತಿದ್ದೆ....

ನವಮಾಸಗಳು ಉರುಳಿ ಹೋದವು.
ನಾನಾದರೂ ಇನ್ನೆಷ್ಟು ದಿನ ಸಹಿಸುವುದು
ದೇಹವೊಂದಿಡಿಯಾಗಿ, ನರನಾಡಿ ಬಿಗಿಯಾಗಿ
ಉಸಿರಿಗೆ ಉಸಿರುಕೊಟ್ಟು ಗೆದ್ದು ಬೀಗಿದೆ..

ಒಂದು ಜೀವದಲಿ ಜೀವ ಹುಟ್ಟುವ ಬಗೆಯು
ಜೀವ ಬಾಯಿಗೆ ಬಂದು ಬದುಕಿದಾಗೆ
ನನ್ನ ಚೀರಾಟವೆಲ್ಲ ಕಂದನಳುವಲ್ಲಿ ಲೀನ
ಮುದ್ದು ಮುಖ ನೋಡಿ ನೋವೆಲ್ಲವೂ ಮಾಯ...

ಜೀವಕ್ಕೆ ಜೀವ ಕೊಡುವುದು ಹೆಣ್ತನವಂತೆ
ಜನ್ಮ ಕೊಡುವ ತಾಯಿ ಮರುಜನ್ಮ ಪಡೆದಂತೆ.
ಮಗುವಿಗೆ ಜನ್ಮ ಕೊಟ್ಟು ಮರುಜನ್ಮ ಪಡೆದ
ಎಲ್ಲ ತಾಯಂದಿರಿಗೆ ಈ ಕವನ ಸಮರ್ಪಣೆ.

ಎಲ್ಲ ತಾಯಂದಿರಿಗೆ ಶುಭಾಶಯಗಳು

***

ಎಲೆಕ್ಷನ್ನೂ... ಪ್ರೇಮನ ಕಾಲು ಚೈನೂ...

– ಟಿ.ಎಸ್.ಶ್ರವಣ ಕುಮಾರಿ

ಇದೇನು, ಒಂದಕ್ಕೊಂದು ಅರ್ಥಾರ್ಥಕ್ಕೆ ಸಂಬಂಧವಿಲ್ಲದ ವಿಷಯಗಳನ್ನು ಜೋಡಿಸಿದ್ದೀರಲ್ಲ ಎನ್ನುತ್ತೀರೇನೋ. ಇರಲಿ ಬಿಡಿ ಮುಂದೆ ಇಡೀ ಲೇಖನವಿದೆಯಲ್ಲ, ಅವೆರಡಕ್ಕೂ ಹೇಗೆ ಸಂಬಂಧವೆಂದು ಹೇಳಲು.

ಪ್ರೇಮ ಬೇರಾರೂ ಅಲ್ಲ; ನಮ್ಮ ಮನೆಯ ಆಧಾರ ಸ್ಥಂಭ. ಪ್ರತಿದಿನ ಬೆಳಗು ನಮಗೆ ಶುಭವಾಗುವುದು ಅವಳ ದರ್ಶನ ಮಾತ್ರದಿಂದಲೇ. ಇದಾವ ದೇವ ಕನ್ನಿಕೆ ಎಂದು ಹುಬ್ಬೇರಿಸಬೇಡಿ. ದಿನಂಪ್ರತಿ ಮನೆ ಬಾಗಿಲಿಗೆ ನೀರು ಹಾಕಿ, ಕಸ ಬಳಿದು, ಒರೆಸಿ, ಪಾತ್ರೆಗಳನ್ನೆಲ್ಲಾ ತೊಳೆದಿಟ್ಟು, ಬಟ್ಟೆ ಒಗೆದು, ತೆಂಗಿನಕಾಯಿ ತುರಿದು, ತರಕಾರಿ ಹದಮಾಡಿಕೊಟ್ಟು, ಜೊತೆಗೆ ಇನ್ನೂ ಏನಾದರೂ ಹೇಳಿದರೆ ನಕಾರ ಸೂಚಿಸದೆ ಮಾಡುತ್ತಾ ದಿನದ ಶುಭಾರಂಭ ಮಾಡುವವಳು ನಮ್ಮ ಮನೆಯ ಆಧಾರ ಸ್ಥಂಭವಲ್ಲದೆ ಮತ್ತೇನು?!

ಈ ನಮ್ಮ ಪ್ರೇಮ ಎಲ್ಲದರಲ್ಲೂ ಅಚ್ಚುಕಟ್ಟು. ಬೆಳಗ್ಗೆ ಬರುವಾಗಲೇ ಚಂದವಾಗಿ ಮುಖ ತೊಳೆದು, ಲಕ್ಷಣವಾಗಿ ಬೊಟ್ಟಿಟ್ಟುಕೊಂಡು, ಮಿತವಾಗಿ ಅಲಂಕರಿಸಿಕೊಂಡು, ಜಡೆ ಹಾಕಿಕೊಂಡು, ಸಿಕ್ಕರೆ ಹೂವನ್ನೂ ಮುಡಿದುಕೊಂಡೇ ಮನೆಯೊಳಗೆ ಹೆಜ್ಜೆಯಿಡುವುದು. ಸೀರೆಯನ್ನಾದರೂ ಅಷ್ಟೇ, ಮ್ಯಾಚಿಂಗ್ ಬ್ಲೌಸ್‌ನೊಂದಿಗೇ ಉಡುವುದು. ಬಳೆಯಿಲ್ಲದ ಅವಳ ಕೈಗಳನ್ನು ನಾನು ಇದುವರೆಗೂ ನೋಡಿಲ್ಲ. ಅಂತೆಯೇ ಸೆರಗನ್ನು ಕಟ್ಟಿ, ನೆರಿಗೆಯನ್ನು ಸಿಕ್ಕಿಸಿಕೊಂಡು ಕೆಲಸ ಮಾಡುವಾಗ ಕಾಲು ಬೋಳು ಬೋಳಾಗಿ ಕಾಣುವುದೆಂದು ಸದಾ ಕಾಲುಚೈನು ಧರಿಸಿರುತ್ತಿದ್ದಳು.

ಧರಿಸಿರುತ್ತಿದ್ದಳು ಎಂದೆ; ಏಕೆಂದರೆ ಎಷ್ಟೋ ವರ್ಷಗಳಿಂದ ಎಡೆಬಿಡದೆ ಧರಿಸುತ್ತಿದ್ದು, ಸವೆದು ಹೋಗಿದ್ದ ಆ ಕಾಲುಚೈನು, ಈಗ ತಿಂಗಳ ಹಿಂದೆ ಅವಳು ಮನೆಯೊರೆಸುತ್ತಿರುವಾಗ ಕಣ್ಣೆದುರೇ ಕೊಂಡಿ ಮುರಿದು ಕಳಚಿಕೊಂಡು ಅವಳೆದುರೇ ಅಸುನೀಗಿತು. ಅದಕ್ಕೆ ತನ್ನ ತಾಳಿಯಷ್ಟೇ ಪ್ರಾಶಸ್ತ್ಯ ನೀಡಿದ್ದ ಪ್ರೇಮನಿಗೆ ದುಃಖವೋ ದುಃಖ. "ಕಾಲು ನೋಡ್ಕಂಡ್ರೆ ಬರಿ ಅಣೆ, ಬರಿ ಕತ್ತು ನೋಡ್ದಂಗಾಯ್ತದಕ್ಕ" ಎಂದು ತನ್ನ ದುಃಖ ತೋಡಿಕೊಂಡಳು. "ಅದಕ್ಕಷ್ಟೊಂದು ಬೇಜಾರ್‍ಯಾಕೆ? ಇನ್ನೊಂದು ಹೊಸತು ತಂದು ಹಾಕ್ಕೋ" ಅಂದೆ. "ಅಷ್ಟು ಸುಲುಭ್ವಾ ಅಕ್ಕ? ಅಳೇದ್ರ ಮ್ಯಾಲೆ ಇನ್ನೂ ಐದು ಸಾವ್ರ ಮಡಗ್ಬೇಕು ಕಣಕ್ಕ. ನಿನ್ನೆ ವೋಗಿ ಕೇಳ್ಕಂಡ್ಬಂದಿ. ಇಡಿಗಂಟಾಗಿ ಅಷ್ಟೊಂದು ದುಡ್ಡು ಎಲ್ಲಿಂದ ಕೊಟ್ಟೇನು? ಇನ್ನೈದಾರು ತಿಂಗ್ಳು ದುಡ್ಡು ಕೂಡಿಕ್ಕೋಬೇಕು" ಎಂದು ಅಲವತ್ತುಕೊಂಡಳು.

'ಹೋಗಲಿ, ನಾನೇ ಐದು ಸಾವಿರ ಕೊಟ್ಟು ತಿಂಗಳು ತಿಂಗಳೂ ಹಿಡಿದುಕೊಂಡರೆ ಹೇಗೆ' ಎಂದುಕೊಂಡರೂ ಹೋದ ತಿಂಗಳಿನ್ನೂ ನನ್ನಿಂದ ಹತ್ತು ಸಾವಿರ ಸಾಲ ತೆಗೆದುಕೊಂಡಿದ್ದಾಳೆ, ತಿಂಗಳು ತಿಂಗಳೂ ಸಾವಿರ ರೂಪಾಯಿ ಮುರಿದುಕೊಳ್ಳುವ ಒಪ್ಪಂದದ ಮೇಲೆ. ಈಗ ಇದನ್ನೂ ಕೊಟ್ಟರೆ ಮುಗಿಯುವುದು ಇನ್ನೂ ಒಂದೂ ಕಾಲು ವರ್ಷದ ಕತೆ. ಅವಳಾಗೇ ಕೇಳಿದರೆ ನೋಡೋಣ' ಎಂದುಕೊಂಡು ಸುಮ್ಮನಾದೆ. ಅದೇಕೋ ಕೇಳಲಿಲ್ಲ; ಅವಳಿಗೂ ಸಂಕೋಚವಾಯಿತೇನೋ, ಸುಮ್ಮನಿದ್ದಳು. 'ನಾನಾಗೇ ಅವಳ ಸಾಲವನ್ನು ಹೆಚ್ಚು ಮಾಡುವುದೇಕೆ' ಎಂದು ನಾನೂ ಸುಮ್ಮನಿದ್ದೆ. ಆದರೂ ಎರಡು ಮೂರು

ದಿನಕ್ಕೊಮ್ಮೆಯಾದರೂ ಕಾಲುಚೈನಿನ ಪ್ರಸಂಗ ಮಾತಿನಲ್ಲಿ ಬಾರದೇ ಇರುತ್ತಿರಲಿಲ್ಲ. ಈಗವಳು ಮೊದಲಿನಂತೆ ಪಾದವನ್ನು ಕಾಣುವಂತೆ ನೆರಿಗೆಯನ್ನು ಮೇಲಕ್ಕೆ ಸಿಕ್ಕಿಸದೆ, ಆದಷ್ಟೂ ಪಾದ ಮುಚ್ಚುವಷ್ಟು ಮಾತ್ರ ಸಿಕ್ಕಿಸಿಕೊಂಡು ಕೆಲಸ ಮಾಡತೊಡಗಿದಳು.

"ಎಲೆಕ್ಸನ್ನಿಗೆ ಊರಿಗೆ ವೋಗ್ಬೇಕಕ್ಕ" ಎಂದಳು ಎರಡು ದಿನದ ಹಿಂದೆ. "ಯಾಕೆ ಊರಿಗ್ಹೋಗ್ಬೇಕು? ಇಲ್ಲೇ ಕಾರ್ಡ್ ಮಾಡ್ಸಿಕೊಳ್ಳೋದಲ್ವಾ" ಎಂದೆ. ಎಲೆಕ್ಷನ್ನಿನ ನೆಪ ಹಾಕಿಕೊಂಡು ಇವಳು ಎರಡು ಮೂರು ದಿನ ಹೋದರೆ ನಮ್ಮ ಗತಿ ಏನು ಎನ್ನುವುದು ನನ್ನ ಚಿಂತೆ. "ಇಲ್ಲಕ್ಕಾ, ಊರಲ್ಲಿ ಒಂದನ್ನೆರ್ಡು ಗುಂಟೆ ಜಮೀನದೆ. ಸರ್ಕಾರಿ ಸೈಟಿಗೂ ಅರ್ಜಿ ಆಕ್ಕೊಂಡಿದೀನಿ. ಸಿಕ್ರೆ, ಸರ್ಕಾರ ದುಡ್ಡು ಕೊಡ್ತದಂತಲ್ಲ ಒಂದ್ಸಣ್ಣ ಮನೆ ಕಟ್ಕಳೋಣಾಂತ. ಅಲ್ಲಿನ ಕಾರ್ಡ್ ಇಲ್ದಿದ್ರೆ ಯಾವ ಕೆಲ್ಸಕ್ಕೂ ಕಷ್ಟ ಆಯ್ತದೆ" ಎಂದಳು. "ಅದೂ ಸರೀನೇ" ಎಂದುಕೊಂಡು "ಆಯ್ತು, ಅಲ್ಲೇ ಟೆಂಟ್ ಹಾಕ್ಕೊಂಡು ಕೂತ್ಬಿಡಬೇಡ. ಬೇಗ ವಾಪಸ್ಸು ಬಂದ್ಬಿಡು" ಎಂದು ಅಹವಾಲನ್ನು ಸಲ್ಲಿಸಿದೆ. "ಇಂದಿನ್ದಿನ ವೋಗಿ ಮಾರ್ನೆ ದಿನ ಬಂದ್ಬಿಡ್ತೀನಿ ಕಣಕ್ಕ" ಎಂದಾಗ "ಹಿಂದಿನ್ದಿನ ಯಾಕೆ? ಅವತ್ತು ಹೋದ್ರೆ ಸಾಲ್ದಾ" ಅಂದದ್ದಕ್ಕೆ, "ಇಲ್ಲಕ್ಕ ಇಂದಿನ್ದಿನ್ವೇ ವೋಗಿ ನಮ್ಮ ಸೋಮಣ್ಣ ಯಾರಿಗೇಳ್ತಾನೋ ಕೇಳ್ಕಂಡು ವೋಟ್ ಆಕ್ಬೇಕು" ಎಂದವಳೇ ಆಡಿದ ಮಾತಿನಂತೆ ಹಿಂದಿನ ದಿನವೇ ಊರಿನ ಬಸ್ಸು ಹತ್ತಿದಳು.

ಹೇಳಿದಂತೆ ನಾಲ್ಕನೆಯ ದಿನ ಕೆಲಸಕ್ಕೆ ಹಾಜರಾಗಿ ಮಾಮೂಲಿ ಸ್ಟೈಲಿನಲ್ಲೇ ನೆರಿಗೆಯನ್ನು ಮೇಲಕ್ಕೆತ್ತಿ ಸಿಕ್ಕಿಸಿದಳು. ಕಾಲಲ್ಲಿ ಫಳಫಳ ಹೊಳೆಯುತ್ತಿದ್ದ ಭರ್ಜರಿಯಾಗಿದ್ದ ಹೊಚ್ಚ ಹೊಸ ಬೆಳ್ಳಿಯ ಕಾಲುಚೈನು!! "ಇದೇನು ಪ್ರೇಮ ಎಲೆಕ್ಷನ್ನಿಗೇಂತ ಹೋದವ್ಳು ಭರ್ಜರಿಯಾಗಿರೋ ಕಡಗಾನೇ ಕಾಲಿಗೆ ಹಾಕ್ಕೊಂಡು ಬಂದಿದೀಯಲ್ಲ" ಎಂದೆ. ಚೈನಿನಷ್ಟೇ ಹಲ್ಲನ್ನೂ ಹೊಳೆಯಿಸುತ್ತಾ "ಔದಕ್ಕಾ,, ವಂದು ಪಾರ್ಟಿನವ್ರು ಎಲ್ಡು, ಇನ್ನೊಂದು ಪಾರ್ಟಿನವ್ರು ಮೂರು ಸಾವ್ರ ಕೊಟ್ರು ವೋಟು ಆಕಾಕೆ. ಅದ್ರಾಗೆ ತಗಂಡೆ" ಎಂದಳು. "ಎರೆಡು ಪಾರ್ಟಿಯವರೂ ಅಷ್ಟೊಂದು ದುಡ್ಡು ಕೊಟ್ರಾ? ಇಬ್ರ ಹತ್ರಾನೂ ದುಡ್ಡು ಇಸ್ಕೊಂಡ್ಯಾ?" ಎಂದೆ ಅಚ್ಚರಿಯಿಂದ. "ಅಳ್ಳೀಲೆಲ್ಲಾ ಕೊಡ್ತಾರೆ ಕಣಕ್ಕಾ, ಸಿಟೀಲೇ ಕಾಸು ಬಿಚ್ಚಾಕಿಲ್ಲ" ಎಂದಳು. "ಪರ್ವಾಗಿಲ್ಲ ಬಿಡು, ಹೊಡ್ದೆ ಛಾನ್ಸು. ವೋಟು ಯಾರಿಗ್ಹಾಕ್ದೆ?" ಎಂದೆ ಕುತೂಹಲದಿಂದ.

"ವೋಟಾ, ನಮ್ಮ ತಿಮ್ಮಣ್ಣಂಗ್ಹಾಕ್ದೆ" ಎಂದಳು ನಗುತ್ತಾ. "ಅವನ್ಯಾವ ಪಾರ್ಟಿ" ಎಂದಿದ್ದಕ್ಕೆ, "ಅವ್ನು ಯಾವ ಪಾರ್ಟಿಯೂ ಇಲ್ಲಕನಕ್ಕ. ಸ್ವಸಂತ್ರವಾಗಿ ನಿತ್ಕಂಡವ್ನೆ. ನಾವು ಚಿಕ್ಹುಡ್ರಾಗಿದ್ದಾಗ ನಮ್ಮ ಬೀದೀಲೇ ಕ್ವನೇ ಮನೇಲಿದ್ದ. ನಮ್ಗೆಲ್ಲಾ ಶಾನೆ ಎಲ್ಪ್ ಮಾಡ್ತಿದ್ದ. ನಾವು ಮಕ್ಳಿಗೆಲ್ಲಾ ತಿನ್ನಕ್ಕೆ ಕಡ್ಲೆ, ಬೆಲ್ಲ, ತೆಂಗಿನಕಾಯಿ ಚೂರು ಎಲ್ಲಾ ಕೊಡ್ತಿದ್ನಾ. ಬಾಳ ವಳ್ಳೋನು ಕಣಕ್ಕ. ಇವ್ರಿಬ್ರೂ ಬಂದು ದುಡ್ಡು ಕೊಟ್ಟೋದ್ಮ್ಯಾಕೆ ಬಂದು 'ತಂಗ್ಯಮ್ಮಾ, ನಾನೂ ಸ್ವಸಂತ್ರವಾಗಿ ನಿಂತಿದೀನಿ. ಠೇವ್ಣಿ ವೊಂಟೋಯ್ತದೆ. ಅವ್ಮಾನ ಆಯ್ತದೆ. ನಾನೇನೂ ದುಡ್ಡು ಕೊಡ್ನಾರೆ, ನಿನ್ವೋಟು ನಂಗೇ ಆಕವ್ವ' ಅಂತ ಕೇಳ್ಕಂಡ್ನಾ. ಇರ್ಲಿ ಬಿಡು ಪಾಪ ಅಂತ ಅವನ್ಗೇ ಆಕ್ದಿ. ಅವ್ನ ಗುರ್ತು ತೆಂಗಿನ ಕರಟ ಕಣಕ್ಕ" ಅಂದಳು.

"ಅಂತೂ ಚುನಾವಣೆ ಲೆಕ್ಕದಲ್ಲಿ ನಿನ್ನ ಕಾಲ್ಗೊಂದು ಹೊಸ ಬೆಳ್ಳಿ ಚೈನು ಬಂತೂನ್ನು" ಅಂದೆ. "ಊ ಕಣಕ್ಕ. ಅಷ್ಟು ದುಡ್ಡು ಸಾಕಾಗ್ನಿಲ್ಲ. ನಮ್ಮವ್ವನೂ 'ತಗಳೋದು ತಗಂತಿದೀಯ. ಮುಂದಿನ ಎಲೆಕ್ಸನ್ ಬರಾದು ಇನ್ನೈದು ವರ್ಸಕ್ಕೆ. ಗಟ್ಟಿಯಾಗಿರಾದೇ

ತಗಾ ಮಗಾ' ಅಂತೇಳಿ ತನಿಗ್ ಬಂದ ದುಡ್ಡಲ್ಲಿ ಎರೆಡ್ಸಾವ್ರ ಎತ್ಕೊಟ್ಟು. ನಿನ್ನೆ ಊರಲ್ಲೇ ಈಸ್ಕೊಂಡಿ. ನಮ್ಮವ್ನೂ ಬಂದಿದ್ಲು ಜತೀಗೆ. ಎಂಗದೆ ನೋಡಿ ಇನ್ನೈದು ವರ್ಸ ಏನೇನೂ ಯೋಸ್ನೆ ಇಲ್ಲ. ಯಾರಾರೂ ಗೆಲ್ಲಿ; ಯಾರಾರೂ ಸೋಲ್ಲಿ ಬುಡಿ" ಎನ್ನುತ್ತಾ ಮತ್ತೊಮ್ಮೆ ಖುಷಿಯಿಂದ ತನ್ನ ಕಾಲನ್ನು ನೋಡಿಕೊಂಡು ಹುರುಪಿನಿಂದ ಪೊರಕೆಯನ್ನೊಮ್ಮೆ ಒದರಿ ತನ್ನ ಕೆಲಸವನ್ನು ಮುಂದುವರೆಸಿದಳು.

ಈ ಸರ್ಕಾರ ಐದು ವರ್ಷ ಬಾಳತ್ತೋ ಇಲ್ವೋ ಗೊತ್ತಿಲ್ಲ, ಪ್ರೇಮನ ಕಾಲುಚೈನಂತೂ ಖಂಡಿತವಾಗಿಯೂ ಬಾಳತ್ತೆ ಎಂದುಕೊಂಡ ನಾನು ಬಿಟ್ಟ ಕಣ್ಣು ಬಾಯಿ ಬಿಟ್ಟುಕೊಂಡು ನಿಂತೇ ಇದ್ದೆ.

***

ಮುಕ್ತಕಗಳು

ರಹಸ್ಯ

– ಪೂರ್ಣಿಮ ಭಗವಾನ್

ಪ್ರಕ್ರಿಯೆಯು ನಿರ್ಧರಿಸುವುದು ನಿಮ್ಮ ಭವಿತವ್ಯ
ಸಕ್ರಿಯಾತ್ಮಕ ಚಟುವಟಿಕೆ ನಿರಂತರದಿ
ಚಕ್ರದೊಲು ಸುತ್ತುತಿರೆ ಫಲಿತಾಂಶ ನಿಶ್ಚಿತವು
ಶುಕ್ರದೆಸೆ ಆರಂಭ ನೇತ್ರತನಯೆ.

ವ್ಯಸ್ತತೆಯು ಮಾಯವಾಗಿ ಮೂಡುವುದು ಶಿಸ್ತದುವೆ
ಹಸ್ತಗತವಾಗುತಲಿ ಬಯಕೆಗಳು ಬೇಗ
ಸುಸ್ತು ನೀರಡಿಕೆಗಳಿಗವಕಾಶ ಇರದಲ್ಲಿ
ಹಸ್ತದಲೆ ಸಕಲವಿದೆ ನೇತ್ರತನಯೆ.

ಆಕರ್ಷಣೆಯ ನಿಯಮ ಎಳೆದು ತರುವುದು ಫಲವ
ಆಕರ್ಷಿಸುತ ಮನದೊಳಿಹ ಭಾವಗಳನು
ಚಾಕಚಕ್ಯತೆ ನೆಲೆಸಿಹುದು ಮನದಂಗಳದಿ
ತಾಕಲಾಟಕೆ ಅಂತ್ಯ ನೇತ್ರತನಯೆ.

ಸಂಶಯವ ಬದಿಗಿರಿಸಿ ಚಿಂತನೆಯ ಒಡಲಿನಲಿ
ಆಶಯವ ಮುಂದಿರಿಸಿ ಕನಸನ್ನು ಕಾಣೆ
ಭಾಷೆಯದು ಅವ್ಯಕ್ತ ಮಾನಸಿಕ ಚಿತ್ರಣವು
ಔಷಧಿಯು ಭಾವನೆಗೆ ನೇತ್ರತನಯೆ.

ಚಿದ್ರೂಪ ಸಾಕಾರಗೊಳೆ ಕಣ್ಣ ಮುಂದಿರಲು
ತದ್ರೂಪ ಪಡೆಯುವುದು ಸನಿಹದಲೆ ಇಹುದು
ಭದ್ರವಾಗಿರೆ ಗುರಿಯು ಮುನ್ನಡೆಯಲವಕಾಶ
ಛಿದ್ರಗೊಳಿಸದಿರದನು ನೇತ್ರತನಯೆ.

ಕಲ್ಪನೆಯೆ ಮೂಲವೆಲ್ಲದಕು ಎಂಬರಿವಿನಲಿ
ಅಲ್ಪತೆಯ ಒಗೆಯುತಲಿ ಮನದಿಂದ ದೂರ
ಕಲ್ಪನೆಯು ನಿಚ್ಚಳವು ಆಗಾಮಿ ಸೆಳೆತವದು
ಬಲ್ಪಡಿಸಿ ಸಂಚಯನ ನೇತ್ರತನಯೆ.

ಜಾಯಮಾನವ ಬದಲಿಸುತ ದುಸ್ತರವನಳಿಸಿ
ಆಯಕಟ್ಟನು ವಿಸ್ತರಿಸಿ ವೀಕ್ಷಿಸುತಲಿ
ಪಾಯ ಹಾಕಿದರೆ ಏಳಿಗೆ ಅಭಿವೃದ್ಧಿಗಳು
ಕಾಯುವುವು ಸಕಲರನು ನೇತ್ರತನಯೆ.

ಸಂಪನ್ನತೆಯ ಬಗೆಗೆ ಕೇಂದ್ರೀಕರಿಸಿ ಮನವ
ಸಂಪತ್ತು ಜೊತೆಯಾಗಿಹುದೆಂಬ ಕನಸು
ಸಂಪನ್ನಗೊಳಿಸುವುದು ಸಿರಿತನದ ಬದುಕನ್ನು
ಕಂಪನವು ಇಲ್ಲದಲೆ ನೇತ್ರತನಯೆ.

ಧನ್ಯವಾದವ ಹೇಳಿ ಪಡೆದಿರುವ ಎಲ್ಲದಕು
ಅನ್ಯ ಸಂಗತಿ ಬಿಡಿರಿ ಯೋಚನೆಯ ಜೊತೆಗೆ
ಮನ್ನಿಸುವ ಮಾಡುವುದು ಅದೃಶ್ಯ ಶಕ್ತಿಯದು
ಧನ್ಯತೆಯು ಬಳಿಸಾರಿ ನೇತ್ರತನಯೆ.

ದಕ್ಕುವುದು ಸಂತಸವು ನಿಖರತೆಯು ಬಳಿಯಿರಲು
ಫಕ್ಕನೇ ಬಿಡಬೇಡಿ ಫಲವು ದೊರಕದಿರೆ
ಚಿಕ್ಕದೋ ದೊಡ್ಡದೋ ಗಳಿಕೆಯಲಿ ಮನವಿರಲಿ
ಹಕ್ಕಿ ಹಾರಾಟವದು ನೇತ್ರತನಯೆ.

***

ಎಲೆ ಅಡಿಕೆ – ತಾಂಬೂಲ

– ಶಾಂತಾ ನಾಗಮಂಗಲ

ಪೂಜೆ ಪುರಸ್ಕಾರಗಳಲ್ಲಿ ದೇವರಿಗೆ ನೈವೇದ್ಯವಾಗಿ, ಮದುವೆ ಮುಂಜಿಯಂತಹ ಸಮಾರಂಭಗಳಲ್ಲಿ ಮಂಗಳದ ತಾಂಬೂಲ ವಾಗಿ, ಪತಿಪತ್ನಿಯರ ನಡುವೆ ರಸಿಕತೆಯ ಭೋಗಸಾಮಗ್ರಿಯಾಗಿ, ಕೆಲವರಲ್ಲಿ ಚಟವಾಗಿ, ಕಂಡ ಕಂಡಲ್ಲಿ ರಸ್ತೆ, ಗೋಡೆಗಳನ್ನು ಅಸಹ್ಯಗೊಳಿಸುವ ಜಗಿದು ಉಗಿಯುವ ವಸ್ತುವಾಗಿ... ಬಳಕೆಯಲ್ಲಿರುವ ತಾಂಬೂಲ ನಮ್ಮ ಭಾರತೀಯರ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ಎಷ್ಟರಮಟ್ಟಿಗೆ ಇದು ಹಾಸುಹೊಕ್ಕಾಗಿದೆ ಎಂದರೆ, ಪುರಂದರದಾಸರು ಶ್ರೀಹರಿಗೆ ಲಕ್ಷ್ಮಿದೇವಿಯ ಕೈಯಿಂದ ಚಿಕ್ಕಣಿ ಅಡಿಕೆ, ಕೇದಿಗೆ ಕಾಚು, ಏಲಕ್ಕಿ ಲವಂಗಗಳಿಂದ ಕೂಡಿದ ಎಲೆಯನ್ನು ಮಡಿಸಿ, "ತಾಂಬೂಲವೋ ಕೊಳ್ಳೋ ಕಮಲವದನನೇ..." ಎಂದು ಹಾಡುತ್ತಾ ತಾಂಬೂಲ ಕೊಡಿಸಿ ಆದಿ ದಂಪತಿಗಳ ಶೃಂಗಾರದ ಪರಿಯನ್ನು ಬಣ್ಣಿಸಿದ್ದಾರೆ.

ವೀಳೆಯದಲ್ಲಿ ಮುಖ್ಯವಾಗಿರೋದು ವಿಳ್ಯೇದೆಲೆ. ವೀಳಯದ ಎಲೆ ವಿಳ್ಯೇದೆಲೆ.. ಆಗಿರಬಹುದು. ವಿಳ್ಯೇದೆಲೆ ನಮ್ಮ ಭಾರತ ನೆಲದ ಸ್ವಂತ ಎಲೆಯೇ? ವೇದಕಾಲದಲ್ಲಿ ವಿಳ್ಯೇದೆಲೆ ಇತ್ತೆ? ಸಂಸ್ಕೃತ ರಾಮಾಯಣ–ಮಹಾಭಾರತಗಳಲ್ಲಿ ಇದರ ಪ್ರಸ್ತಾಪ ಕಂಡು ಬರುತ್ತದೆಯೇ?.... ಇಲ್ಲ, ಇಲ್ಲೆಲ್ಲೂ ವೀಳಯದ ಪ್ರಸ್ತಾಪವೇ ಇಲ್ಲ.

ಭಾರತದ ಮಣ್ಣಲ್ಲಿ ಮಣ್ಣಿನ ಗಂಧದಂತೆಯೇ ಬೆರೆತು ಒಂದಾಗಿರುವ ವಿಳ್ಯೇದೆಲೆ ಅಷ್ಟು ಪ್ರಾಚೀನವಲ್ಲ ಎನ್ನುತ್ತಾರೆ ಪ್ರಸಿದ್ಧ ಸಸ್ಯಶಾಸ್ತ್ರಜ್ಞರಾದ ಶ್ರೀಯುತ ಬಿ.ಜಿ.ಎಲ್.ಸ್ವಾಮಿಯವರು. ಅವರು ಹೇಳುವಂತೆ ಮೊಟ್ಟಮೊದಲಿಗೆ 'ತಾಂಬೂಲ' ಈ ಶಬ್ದದ ಪ್ರಯೋಗ ಕಂಡುಬರುವುದು ಗುಪ್ತರ ಕಾಲದ ಶಾಸನವೊಂದರಲ್ಲಿ. ಬಾರ್ಹುತ್, ಸಾಂಚಿ, ಬೋಧಗಯಾ, ನಾಗಾರ್ಜುನಕೊಂಡ, ಗಾಂಧಾರ ಮೊದಲಾಡೆಗಳಲ್ಲಿ ದೊರಕಿರುವ ಗುಪ್ತರ ಶಿಲಾ ಶಿಲ್ಪಗಳಲ್ಲೂ ವಿಳ್ಳೆಯದೆಲೆಯ ಯಥಾವತ್ತಾದ ಚಿತ್ರಗಳು ಕೊರೆದಿರುವುದು ಕಂಡುಬಂದಿದೆ. ಗುಪ್ತರ ಕಾಲದ ಸುಮಾರು ಸಾ.ಶ ೪೭೫ರ ಶಾಸನವೊಂದರಲ್ಲಿ ಈ ಶಬ್ದದ ಪ್ರಯೋಗವಿದೆ

ತಾರುಣ್ಯಯಾ ಕಾನ್ತ್ಯುಪಚಿತೋಽಪಿ

ಸುವರ್ಣಹಾರ ತಾಂಬೂಲ ಪುಷ್ಪವಿಧಿನಾ–

ಸಮಲಂಕೃತೋಽಪಿ ...

ಹೀಗೆ ಸಾಗುವ ಆ ಶಾಸನ ಪದ್ಯದಲ್ಲಿ ಯುವತಿಯರ ಅಲಂಕಾರ ಸಾಮಗ್ರಿಯಾಗಿ ತಾಂಬೂಲ ಬಳಕೆಯಾಗುತ್ತಿದ್ದ ಉಲ್ಲೇಖವಿದೆ. ವೀಳೆಯವನ್ನು ತಿಂದು ಕೆಂಪಾಗುವ ತುಟಿಗಳು ಅವರ ಚೆಲುವನ್ನು ಹೆಚ್ಚಿಸುತ್ತಿತ್ತು ಎನ್ನುವುದು ಇಲ್ಲಿನ ತಾಂಬೂಲ ಶಬ್ದಪ್ರಯೋಗದ ಅಭಿಪ್ರಾಯ.

ಗುಪ್ತರ ಕಾಲವನ್ನು ಸುಮಾರು ಸಾ.ಶ. ೩ನೇ ಶತಮಾನದಿಂದ ೬ನೇ ಶತಮಾನದವರೆಗೂ ಗಣಿಸುತ್ತಾರೆ. ನಂತರದ ವರಾಹಮಿಹಿರನ ಬೃಹತ್ ಸಂಹಿತೆಯಲ್ಲೂ ತಾಂಬೂಲವನ್ನು ಕುರಿತಾದ ಮೂರು ಶ್ಲೋಕಗಳಿರುವುದನ್ನು ಗಮನಿಸಬಹುದು.

ಸಾ.ಶ. ೬೮೫ರ ಸುಮಾರಿನ ಧನಿಕನ ನಗರ ಶಾಸನದಲ್ಲಿ –

ವ್ಯಾಲೋಲಲೋಚನ ಜಲಾಪ್ಲುತಿನಾ ತಾಂಬೂಲ ರಾಗರಹಿತಾಧರಭಾ

ಯಸ್ಯ ಕೋಪಶ್ಚಕಾರ ತಾನಿ ವದನಾನ್ಯರಿ ಸುಂದರೀನಾಮ್ ॥

'ಒಬ್ಬ ರಾಜನ ಕೋಪಜನ್ಯವಾದ ವೀರಪರಾಕ್ರಮಗಳಿಂದಾಗಿ ಶತ್ರುಗಳ ಕಡೆಯ ಹೆಂಗಸರ ಕಣ್ಣುಗಳಲ್ಲಿ ನೀರುಕ್ಕಿ ಹರಿದು, ಅವರ ತಾಂಬೂಲ ರಾಗರಂಜಿತವಾದ ತುಟಿಗಳು ಬಣ್ಣಗೆಟ್ಟು ಅವರ ಮುಖಗಳು ಅಂದಗೆಟ್ಟಿದ್ದವು...' ಎಂಬ ಅರ್ಥ ಕೊಡುವ ಈ ಪದ್ಯವೂ ತಾಂಬೂಲವು ನಾರೀಮಣಿಗಳ ಅಲಂಕಾರ ಪ್ರಸಾಧನವಾಗಿ ಬಳಸುತ್ತಿದ್ದ ಪರಿಪಾಟಿ ಸಾ.ಶಕೆಯ ಸುಮಾರು ೭ನೇ ಶತಮಾನದ ಹೊತ್ತಿಗೆ ಭಾರತದಲ್ಲಿ ಇತ್ತು ಎಂದು ತಿಳಿಯಲಡ್ಡಿಯಿಲ್ಲ.

ಇದಕ್ಕೆ ಪೂರಕವಾಗಿ ಶಂಕರಭಗವತ್ಪಾದರ ಸೌಂದರ್ಯಲಹರಿಯಲ್ಲಿ ಬರುವ ಒಂದು ಪದ್ಯದಲ್ಲಿ ,

ವಿಶಾಖೇಂದ್ರೋಪೇಂದ್ರೈಃ ಶಶಿವಿಶದಕರ್ಪೂರಶಕಲಾ

ವಿಲೀಯಂತೇ ಮಾತಃ ತವವದನ ತಾಂಬೂಲಕಬಲಾಃ ॥

ಎಂಬ ವರ್ಣನೆಯಿದೆ. "ತವವದನ ತಾಂಬೂಲಕಬಲ" ಎಂದರೆ ದೇವಿಯ ಬಾಯಿಯಲ್ಲಿರುವ ವೀಳೆಯ ಎಂದರ್ಥ. ಇಲ್ಲಿಯ ಸಂದರ್ಭ ಬೇರೆ. ಅದರ ವಿವರಣೆ ಇಲ್ಲಿ ಅಪ್ರಸ್ತುತ. ನಮಗೆ ಪ್ರಸ್ತುತವಾದದ್ದು ಸಾ. ಶಕೆಯ ಸುಮಾರು ೭–೮ನೇ ಶತಮಾನದಲ್ಲಿದ್ದ ಶಂಕರರ ಕಾಲಕ್ಕೆ ತಾಂಬೂಲ ಭಾರತದಲ್ಲಿ ವ್ಯಾಪಕವಾಗಿತ್ತು ಎನ್ನುವ ಸಂಗತಿ ಮಾತ್ರ. "ವದನ ತಾಂಬೂಲ ಕಬಲ"– ಇದು ಮುಂದೆ ಕುಮಾರವ್ಯಾಸನಲ್ಲಿ ಬಾಯ್ದಂಬುಲವಾಗಿ ಬಳಕೆಗೊಂಡಿರುವುದನ್ನು ಕಾಣಬಹುದು.

ಬಿ.ಜಿ.ಎಲ್.ಸ್ವಾಮಿಯವರು ಸಾಮಾನ್ಯ ಶಕೆಯ ೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ದಕ್ಷಿಣ ಭಾರತದ ಬೇಸಾಯದಲ್ಲಿ ವೀಳೆಯದೆಲೆ, ಅಡಿಕೆಗಳು ಮುಖ್ಯವಾದ ಬೆಳೆಗಳಾಗಿತ್ತೆಂಬುದು ಶಾಸನಾಧಾರಗಳಿಂದ ತಿಳಿಸುತ್ತಾರೆ. ಮುಖ್ಯವಾಗಿ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಎಲೆ ಅಡಿಕೆ ತೋಟಗಳಿಂದ ನಿಬಿಡವಾಗಿದ್ದವು ಎಂಬುದನ್ನು ಶಾಸನಗಳು ಪ್ರಮಾಣೀಕರಿಸಿವೆ ಎನ್ನುತ್ತಾರೆ ಸ್ವಾಮಿಯವರು. ಉದಾಹರಣೆಗೆ –

- ಗದಗ ತಾಲ್ಲೂಕು ಹೊಸೂರಿನಲ್ಲಿರುವ ಮೊದಲನೇ ಜಗದೇಕಮಲ್ಲನ ಶಾಸನದಲ್ಲಿ, ಆಯ್ಚಗಾವುಂಡನು ತನ್ನ ಹೆಂಡತಿಯ ಹೆಸರಿನಲ್ಲಿ ಬಸದಿಯೊಂದನ್ನು ಕಟ್ಟಿಸಿ ಅಡಿಕೆ ತೋಟವೊಂದನ್ನು ದತ್ತಿಯಾಗಿ ಕೊಟ್ಟ ಸುದ್ದಿಯನ್ನು ಉಲ್ಲೇಖಿಸಿಲಾಗಿದೆ.
- ರಾಮೇಶ್ವರ ದೇವರ ಅಂಗರಂಗ ಭೋಗಕ್ಕಾಗಿ ೫೦೦ ವರ್ತಕರು ಒಂದೊಂದು ಕಟ್ಟು ವೀಳೆಯದೆಲೆಯ ಮೇಲೆ ಒಂದೊಂದು ಕಾಣಿಯನ್ನು (ತುಂಡುಭೂಮಿ) ದತ್ತಿಯಾಗಿ ಬಿಟ್ಟ ವಿಷಯ ದಾಖಲಾಗಿದೆ.
- ರಾಜರಾಜಚೋಳ ಗಂಗನ ಶಾಸನವೊಂದು ಮದುವೆ ಸಮಾರಂಭಗಳಲ್ಲಿ ಎಲೆ ಅಡಿಕೆಯ ತಾಂಬೂಲವನ್ನು ವಿನಿಮಯ ಮಾಡಿಕೊಳ್ಳುವ 'ಹಳೆಯ' ಪದ್ಧತಿಯನ್ನು ಹೇಳುತ್ತದೆ.
- ನಾಲ್ಕನೆ ವಿಕ್ರಮಾದಿತ್ಯನ 'ಹುಲ್ಲೂರು' ಶಾಸನದಲ್ಲಿ 'ಎಕ್ಕವಟ್ಟಿಗೆ', 'ಪಳಿಕೆಳೆ' ಎಂಬೆರಡು ವೀಳೆಯದ ರಖಮುಗಳ (ಜಾತಿ) ಉಲ್ಲೇಖವಿದೆ.

ಸುಮಾರು ೧೦-೧೨ನೇ ಶತಮಾನದ ಹೊತ್ತಿಗೆ ಭಾರತದಾದ್ಯಂತ ಎಲೆಅಡಿಕೆಗಳು ಬಹುಮುಖವಾಗಿ ಹರಡಿಕೊಂಡವು. ಶುಭಾಶುಭ ಕರ್ಮಗಳಲ್ಲಿ ಅದು ಅನಿವಾರ್ಯವಾಯಿತು. ಬಳಿಕ 'ತಾಂಬೂಲ' ಸೇವನೆಯು ಒಂದು ಭೋಗ ಎಂದು ಪರಿಗಣಿಸಲ್ಪಟ್ಟಿತು.

೧೨ನೇ ಶತಮಾನದ ಚಾಲುಕ್ಯ ಸೋಮೇಶ್ವರನ "ಮಾನಸಲ್ಲೋಸ"ದಲ್ಲಿ, ೧೭ನೇ ಶತಮಾನದ ಗಾಗಾಭಟ್ಟನ "ತಾಂಬೂಲ ಮಂಜರಿ"ಯಲ್ಲಿ ತಾಂಬೂಲವು ಅಷ್ಟಭೋಗಗಳಲ್ಲಿ ಒಂದು ಎಂಬ ವಿವರಣೆಗಳು ಸಿಗುತ್ತವೆ.

ಸಮಾಜದಲ್ಲಿ ಇದರ ಬಹುಮುಖವಾದ ಉಪಯೋಗ ಹೆಚ್ಚುತ್ತಿದ್ದಂತೆ, ನಿಧಾನವಾಗಿ ವೀಳೆಯವು ವಾಣಿಜ್ಯದ ಸರಕಾಗಿ ಆದಾಯದ ಮೂಲವೂ ಆಯಿತು.

ವೈದ್ಯಕೀಯವಾಗಿಯೂ ಇದರ ಪ್ರಯೋಜನವಿದೆ ಎಂಬ ವಿಷಯ, ಸಾಮಾನ್ಯ ಶಕೆಗೂ ಪೂರ್ವದ ಆಯುರ್ವೇದ ಗ್ರಂಥಗಳಲ್ಲಿಯೂ ವೀಳೆಯದ ಉಲ್ಲೇಖವಿರುವುದಾಗಿಯೂ ಹೇಳುತ್ತಾರೆ. ಪಟ್ಟಾಗಿ ಸಮಾರಾಧನೆಯ ಊಟ ಹೊಡೆದ ಮೇಲೆ ಅರಗಣೆಗೆ ಅಂತ ವೀಳಯ ಸೇವಿಸೋದು ಗೊತ್ತಿರುವಂಥದ್ದೇ. ಹಸಿವಾದಾಗ ಇದು ಒಂದು ಮಟ್ಟಕ್ಕೆ ಹಸಿವನ್ನು ಅಡಗಿಸುತ್ತದೆ ಎಂದೂ ಹೇಳುವುದುಂಟು. ಒಟ್ಟಿನಲ್ಲಿ ಹಲವು ವೈದ್ಯದ ಪ್ರಯೋಜನಗಳು ಇದಕ್ಕೆ ಸೇರಿವೆ.

ಒಟ್ಟಿನಲ್ಲಿ ಬಿಜಿಎಲ್ ಸ್ವಾಮಿಯವರು ಹೇಳುವಂತೆ ಇದು ಮೂಲತಃ ನಮ್ಮ ದೇಶದ ಬೆಳೆಯಲ್ಲ. ಆದರೆ ನಮ್ಮ ಸಂಸ್ಕೃತಿಯ ಎಲ್ಲಾ ರಂಗಗಳಲ್ಲೂ ವ್ಯಾಪಿಸಿರುವುದು ಕಂಡುಬರುತ್ತದೆ.

ಹಾಗಿದ್ದರೆ ಇದು ಬಂದದ್ದೆಲ್ಲಿಂದ?

ಮೆಡಿಟರೇನಿಯನ್ ಸಮುದ್ರ ತೀರದಿಂದ ಹಿಡಿದು ಭಾರತದ ಪಶ್ಚಿಮ ತೀರದ ಸಿಲೋನನ್ನು ತಲುಪಿ, ಅಲ್ಲಿಂದ ಪೂರ್ವದ ತೀರವನ್ನು ಬಳಸಿ, ದಕ್ಷಿಣಾಭಿಮುಖವಾಗಿ ರಂಗೂನ್, ಸಿಂಗಪುರಗಳನ್ನು ಹಾಯ್ದು ಜಾವ, ಸುಮಾತ್ರ, ಬೋರ್ನಿಯೋ ಇವುಗಳ ಸುತ್ತುಮುತ್ತಲಿನ ಪ್ರದೇಶಗಳನ್ನು, ದ್ವೀಪಗಳನ್ನು ಸೇರುವ ಕಡಲ ವಾಣಿಜ್ಯ ಮಾರ್ಗವು ಸಾಮಾನ್ಯ ಶಕೆಯ ಮೊದಲ ಶತಮಾನದಿಂದಲೇ ಬಳಕೆಯಲ್ಲಿತ್ತು. ಈ ವಾಣಿಜ್ಯೋದ್ಯಮದಲ್ಲಿ ಪ್ರಯತ್ನಪೂರ್ವಕವಾಗಿಯೋ, ತಾನಾಗಿಯೋ ಸಸ್ಯಗಳು, ಸಸ್ಯೋತ್ಪನ್ನಗಳು ಹಾಗೆ ಹೀಗೆ ಸಂಚರಿಸಿ ಹರಡುತ್ತಿದ್ದುದ್ದು ಸ್ವಾಭಾವಿಕವೇ ಆಗಿತ್ತು. ಆಗ್ನೇಯ ಏಷಿಯಾ ದೇಶಗಳಲ್ಲಿ ಸ್ವಾಭಾವಿಕವಾದ ಬೆಳೆಯಾದ ವೀಳೆಯದೆಲೆ ಮತ್ತು ಅಡಿಕೆಯು ಹೀಗೆ ಕಡಲ ವಾಣಿಜ್ಯ ಮಾರ್ಗದ ಮೂಲಕ ಮಲೇಶಿಯಾ ಮೊದಲಾದ ದೇಶಗಳಿಗೆ ಬಂದಿರಬಹುದು. ಸಾಮಾನ್ಯ ಶಕೆಯ ಮೊದಲ ಶತಮಾನಗಳಲ್ಲಿ ಮಲೇಶಿಯಾದ ಕಡೆಯಿಂದ ಎಲೆಯಡಕೆಗಳು ಭಾರತಕ್ಕೆ ಬಂದು ನೆಲೆಸಿದವು ಎಂಬುದು ಸ್ವಾಮಿಯವರ ಅಭಿಪ್ರಾಯವಾಗಿದೆ. ಭಾರತದಲ್ಲಿ ವೀಳೆಯದೆಲೆ ಮತ್ತು ಅಡಕೆಗಳು ಒಟ್ಟೊಟ್ಟಿಗೆ ತೂರಿಕೊಂಡಿದೆ ಎಂಬುದು ಅವರ ಅಭಿಮತವಾಗಿದೆ. (ಆಕರ: ಸಾಕ್ಷಾತ್ಕಾರದ ಹಾದಿಯಲ್ಲಿ, ಬಿ.ಜಿ.ಎಲ್.ಸ್ವಾಮಿ)

ಇದಕ್ಕೆ ಅವರು ಕೊಡುವ ಕಾರಣ ವೀಳೆಯದೆಲೆಗಾಗಲೀ, ಅಡಕೆಗಾಗಲೀ ಭಾರತೀಯ ಮೂಲದ ಹೆಸರುಗಳೇ ಇಲ್ಲ ಎಂಬುದು.

ಮಲೇಶಿಯ ಮೂಲದ 'ತೆಂಬಲ್' ನಿಂದ ಹುಟ್ಟಿದ ಪದ ತಾಂಬೂಲ. ವಿಳ್ಳೇದೆಲೆಗೆ ಮಲೇಶಿಯದ ಪರ್ಯಾಯ ಬತಾತ್, ವತಾತ್. ಇದೇ ರೀತಿಯ ಶಬ್ದಗಳು ಸಿಂಗಪುರ್, ಬರ್ಮಾ ದೇಶಗಳಲ್ಲೂ ಇವೆ. ಇಲ್ಲಿಂದಲೇ ತಮಿಳಿನ ವೆತ್ತಲೆ, ಮಲೆಯಾಳಂನ ವೆಟ್ರಿಲೆ, ಕನ್ನಡದ ವಿಳ್ಳೇದೆಲೆ... ಬಂದಿರಬೇಕು ಅಂತ ಊಹಿಸ್ತಾರೆ. ಸಂಸ್ಕೃತದ ನಾಗವಲ್ಲಿ ಇತ್ತೀಚಿನದಿರಬೇಕು ಎಂಬ ಅಭಿಪ್ರಾಯ ಸ್ವಾಮಿಯವರದಾಗಿದೆ.

ಸಾಮಾನ್ಯ ಶಕೆ ಹತ್ತನೇ ಶತಮಾನದ ನಂತರದ ಕಾವ್ಯಗಳಲ್ಲಂತೂ ಹೇರಳವಾಗಿ ತಾಂಬೂಲದ ಪ್ರಯೋಗ ಕಂಡುಬರುತ್ತದೆ. ಇದಕ್ಕೆ ದೊಡ್ಡ ಉದಾಹರಣೆಯಾಗಿ ನಮ್ಮ ಕುಮಾರವ್ಯಾಸನೇ ಇದ್ದಾನೆ-

ವೀಳೆಯವ ತಾ ಕೊಂಡು ಕುರುಭೂಪಾಲ ಪಾರ್ಥರಿಗಿತ್ತು

ಎನಲು ತಂಬುಲ ಸೂಸೆ ನಗುತ

ಇಂಥಾ ಮಾತುಗಳನ್ನು ಆಡಿದ್ದಾನೆ. ಕೃಷ್ಣನಿಗೂ ಹವ್ಯಕರಂತೆ ಜಗಿದು ಕಟವಾಯಿಂದ ರಸ ಒಸರುವಷ್ಟು ವೀಳೆಯವನ್ನು ಹಾಕಿಸಿದ್ದಾನೆ. ತನ್ನನ್ನು ಕಾಣಲು ಬಂದವರಿಗೆ ಕೃಷ್ಣನಿಂದ ವೀಳೆಯ ಕೊಡಿಸಿದ್ದಾನೆ.

ಇನ್ನು ಶೃಂಗಾರದ ಸನ್ನಿವೇಶಗಳಲ್ಲಂತೂ ತಾಂಬೂಲದ ರಾಗ -ಅನುರಾಗಕ್ಕೆ ಪೂರಕವಾಗಿ ಬಂದಿದೆ. ದ್ರೌಪದಿಯ ಸ್ವಯಂವರಕ್ಕಾಗಿ ಬಂದ ರಾಯರ ಬೀಡಿಗಾಗಿ ಪಟ್ಟಣವೊಂದನ್ನು ರಚಿಸಿ, ಅಲ್ಲಿ ಒದಗಿಸಿದ ಸೌಕರ್ಯಗಳಲ್ಲಿ ಅನೇಕ ಶೃಂಗಾರೋತ್ತೇಜಕ ಭೋಗಸಾಮಗ್ರಿಗಳನ್ನೂ ಇರಿಸಿರುತ್ತಾನೆ.

ವರಜವಾಜಿಯ ಶೃಂಗಗಳ

ರ್ಪುರದ ತವಲಾಯಿಗಳ ಸಾದಿನ

ಭರಣಿಗಳ ಮೃಗನಾಭಿಗಳನಡಕಿದರು ಬಂಡಿಯಲಿ ।

ತವಲಾಯಿ ಶಬ್ದಕ್ಕೆ ಕರ್ಪುರದ ಬಿಲ್ಲೆ, ಕರ್ಪುರದ ಭರಣಿ, ವೀಳೆಯ... ಈ ಮೂರೂ ಅರ್ಥಗಳಿವೆ. ಕರ್ಪುರ ಅಂದರೆ ಬಹುಶಃ ವೀಳೆಯದ ಜೊತೆಗೆ ಹಾಕುವ ಪಚ್ಚಕರ್ಪುರವೇ. ಅಂದರೆ ತಂಬುಲವೂ ಇಲ್ಲಿ ಸೇರಿದೆ ಎಂದಾಯ್ತು. ಭೋಗವಾಗಿ ಮಾತ್ರವಲ್ಲದೆ ಈ ವೀಳೆಯ ರಣರಂಗದಲ್ಲಿ ರಣವೀರರಿಗೆ ಪಂಥಾಹ್ವಾನವಾಗಿ, ಉತ್ಸಾಹವರ್ಧಕವಾಗಿ ಕೆಲಸಮಾಡಿರೋದನ್ನು ಕಾಣಬಹುದು.

ಕುಡಿತೆಯಲಿ ಕರ್ಪುರವ ಸುರಿಸುರಿ

ದೊಡನೆ ಸಾದು ಜವಾಜಿಲೇಪವ

ಮುಡಿವ ಹೊಸಹೂಗಳನು ವರಗಂಧಾನುಲೇಪನದ ।

ಉಡುಗೊರೆಯ ವೀಳೆಯವ ರತ್ನದ

ತೊಡಿಗೆಗಳಲಾ ಪಟುಭಟರ ವಂ

ಗಡವ ಮನ್ನಿಸಿ ನಿನ್ನ ಮಗನನುವಾದನಾಹವಕೆ ॥

ಯುದ್ಧಕ್ಕೆ ಹೊರಡುವ ಮುನ್ನ ಸೈನಿಕರಿಗೆ ಈ ರೀತಿಯ ಉಪಚಾರಗಳ ಮೂಲಕ ಗೌರವವನ್ನು ರಾಜನಾದವನು ತೋರಿಸಿ, ಅವರ ಉತ್ಸಾಹವನ್ನು ಹೆಚ್ಚಿಸಿ ಕಳುಹಿಸುವ ಪದ್ಧತಿ ಇತ್ತು. ಇಲ್ಲಿ ವೀಳಯ ಇರೋದನ್ನು ಗಮನಿಸಬಹುದು.

ಈಗ ಚಾಲ್ತಿಯಲ್ಲಿರುವ ದುರುಳರ ಕೂಟದಲ್ಲಿ ಒಬ್ಬರ ಜೀವವನ್ನು ಕೊಲ್ಲಲು ಸುಪಾರಿ ಕೊಡೋ ಪದ್ಧತಿಯಲ್ಲೂ ಸುಪಾರಿ ಶಬ್ದ ವೀಳಯವನ್ನೇ ಸೂಚಿಸುವುದು.

ಬಾಯತಂಬುಲ... ಎನ್ನುವ ಪ್ರಯೋಗವನ್ನೂ ನಾವು ಕಾವ್ಯದಲ್ಲಿ ಕಾಣುತ್ತೇವೆ. ಅದು ಪ್ರೀತಿ, ಸ್ನೇಹ, ಆಶೀರ್ವಾದ, ಜೊತೆಗೆ ಎಂಜಲು ಎನ್ನುವ ಹೀನಾರ್ಥದಲ್ಲೂ ಬಳಕೆಯಾಗಿರೋದನ್ನು ಕಾಣಬಹುದು.

ಕುಮಾರವ್ಯಾಸ ಭಾರತದ ಕರ್ಣಪರ್ವದಲ್ಲಿ, ಕರ್ಣನ ಸಾವಿಗೆ ನೇಮವನ್ನು ಕೊಟ್ಟು ಕಳುಹಿಸುತ್ತಾ ಧರ್ಮರಾಯ, "ಮುದದಲಿ ಬಾಯತಂಬುಲವನಿತ್ತು ತಮ್ಮನ ಮತ್ತೆ ತಕ್ಕೈಸಿ" ಅರ್ಜುನನ್ನು ಆಶೀರ್ವದಿಸಿ ಕಳುಹಿಸಿದರೆ, ಪಸಾಯಿತರನ್ನು "ಕರ್ಪುರದ ವೀಳೆಯ" ವನಿತ್ತು ಕಳುಹಿಸುತ್ತಾನೆ.

ಹಸ್ತಿನಾವತಿಗೆ ಸಂಧಿಗೆ ಬಂದ ಕೃಷ್ಣ, ಕರ್ಣನ ಹುಟ್ಟಿನ ಗುಟ್ಟನ್ನು ಕರ್ಣನನಿಗೆ ಬಯಲು ಮಾಡುತ್ತಾ, "ದುರ್ಯೋಧನನ ಬಾಯ್ದಂಬುಲಕೆ ಕೈಯಾನುವರೇ" ಎಂದು ಹೀನಾಯವನ್ನು ತೋರಿಸಲು ಬಳಸಿದ್ದಾನೆ.

ವೀಳಯದ ಮೂಲಕ ಸಂದರ್ಭಗಳ ಸ್ವಾರಸ್ಯವು ಹೆಚ್ಚಿರೋದನ್ನು ಕಾವ್ಯದಲ್ಲಿ ಗಮನಿಸಬಹುದು. ತೊರವೆಯ ನರಹರಿಯ ಕನ್ನಡ ರಾಮಾಯಣದಲ್ಲೂ ತಾಂಬೂಲವು ಹಲವಾರು ಪದ್ಯಗಳಲ್ಲಿ ನುಸುಳಿದೆ. ಪ್ರಸಂಗದ ಪರಿಣಾಮಕ್ಕೆ ಪೂರಕವಾಗಿದೆ. ಕನ್ನಡ, ಸಂಸ್ಕೃತ ಕಾವ್ಯಗಳನ್ನು ಆಧರಿಸಿ ಈ ಲೇಖನವನ್ನು ಮತ್ತೂ ವಿಸ್ತರಿಸಬಹುದು.

ಎಲ್ಲಿಂದಲೋ ಬಂದ ಎಲೆ ಅಡಿಕೆ ಈಗ ನಮ್ಮ ಮಣ್ಣಲ್ಲಿ ಬೇರೂರಿ ನಿಂತು ವಿಜೃಂಭಿಸಿದೆ. ಸಂಸ್ಕೃತಿಯ ಎಲ್ಲಾ ಆಯಾಮಗಳಲ್ಲೂ ತಾನೇತಾನಾಗಿ ಹಬ್ಬಿ ಹರಡಿದೆ.

***

ಪ್ರವಾಸ ಕಥನ



ಓಹೋ ಹಿಮಾಲಯ

- ಮಹಾಬಲ

ಕಳೆದ ತಿಂಗಳು ನಮ್ಮ ಬಹು ವರ್ಷಗಳ ಹಂಬಲವಾದ ನೇಪಾಳದ ಪ್ರವಾಸ ಈಡೇರಿದ್ದು ಒಂದು ಸಂತಸಕರ ಅನುಭವವಾಗಿತ್ತು. ಏಪ್ರಿಲ್ ೧೭ನೆಯ ತಾರೀಖು ರಾಮನವಮಿಯ ದಿನ ಅಯೋಧ್ಯೆಯಲ್ಲಿ ಬಾಲರಾಮನ ದರ್ಶನದಿಂದ ಪ್ರವಾಸ ಆರಂಭವಾಗಿತ್ತು. ಮಾರನೆಯ ದಿನ ಗೋರಖ್‌ಪುರ ಮೂಲಕ ನೇಪಾಳ ಗಡಿ ಸ್ಥಳ ಸುನ್ನೈನಿ ತಲುಪಿ ಅಲ್ಲಿ ತಪಾಸಣೆ ಅಧಿಕಾರಿಗಳಿಗೆ ನಮ್ಮ ಆಧಾರ್ ಕಾರ್ಡ್ ತೋರಿಸಿ ಲಗೇಜು ಗಳನ್ನು ಸ್ಕ್ಯಾನ್ ಪರೀಕ್ಷೆಗೆ ಒಡ್ಡಿ ಹೊರಬಂದೆವು. ಲುಂಬಿನಿ, ಪೋಖರಾ, ಮನೋಕಾಮನಾ ಕಠಮಂಡುಗಳಲ್ಲಿ ಬುದ್ಧವಿಹಾರ, ದೇವಸ್ಥಾನಗಳ ವೀಕ್ಷಣೆ ಮುಗಿಸಿದ್ದರೂ ಹಿಮಾಲಯದ ಪರ್ವತ ಶ್ರೇಣಿಗಳ ವೀಕ್ಷಣೆಯ ಪ್ರವಾಸದತ್ತಲೇ ನಮ್ಮಲ್ಲಿ ಹಲವರ ಗುರಿ ನೆಟ್ಟಿತ್ತು. ಮೌಂಟನ್ ಪ್ರವಾಸಕ್ಕೆ ನೋಂದಾಯಿಸಿಕೊಂಡು ಪ್ರತ್ಯೇಕ ಶುಲ್ಕ ಹತ್ತು ಸಾವಿರ ರೂಪಾಯಿ ನೀಡಿದೆವು.

ಮಾರನೆಯ ದಿನ ಬೆಳಗಿನ ಜಾವ ಐದು ಗಂಟೆಗೆ ಕಠಮಂಡುವಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದೆವು. ವಿಮಾನ ನಿಲ್ದಾಣದ ಭದ್ರತಾ ಪ್ರಕ್ರಿಯೆಗಳನ್ನು ಮುಗಿಸಿ, ಯೇತಿ ಏರ್‌ಲೈನ್ಸ್‌ನ ಎವರೆಸ್ಟ್ ಪ್ರವಾಸಕ್ಕಾಗಿ ಕಾತರಿಸುತ್ತಿದ್ದೆವು. ಹವಾಮಾನ ಪ್ರತಿಕೂಲವಾಗದಿರಲಿ, ವಿಮಾನಯಾನ ರದ್ದಾಗದಿರಲಿ ಎಂಬುದೇ ಎಲ್ಲ ಹಿಮಾಲಯ ದರ್ಶಕರ ಹಾರೈಕೆಯಾಗಿತ್ತು. ಏಕೆಂದರೆ ಕೇವಲ ಹದಿನೈದು ದಿನಗಳ ಹಿಂದಿನ ಪ್ರವಾಸದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ವಿಮಾನಯಾನವೇ ರದ್ದಾಗಿತ್ತು. ಮತ್ತೊಂದು ವಿಷಾದದ ಸಂಗತಿಯೆಂದರೆ ಅಂಥ ಪರಿಸ್ಥಿತಿಯಲ್ಲಿ ವಿಮಾನಯಾನ ಸಂಸ್ಥೆಯವರು ಸ್ವೀಕರಿಸಿದ ಯಾವುದೇ ಮೊತ್ತವನ್ನು ವಾಪಸು ಮಾಡುವುದಿಲ್ಲ ಎಂಬುದು.

ಅಂತೂ ಹವಾಮಾನ ಅನುಕೂಲಕರವಾಗಿ ಆರೂಕಾಲು ಗಂಟೆಗೆ ವಿಮಾನದೊಳಕ್ಕೆ ಪ್ರವೇಶ ದೊರಕಿತು. ತುಂಬ ಚಿಕ್ಕ ವಿಮಾನ. ಪ್ರತಿಯೊಬ್ಬರಿಗೂ ಕಿಟಕಿ ಬದಿಯ ಆಸನ ನೀಡಲಾಗಿತ್ತು. ನಮ್ಮ ತಂಡದಲ್ಲಿ ಬಂದಿದ್ದ ೨೭ ಪ್ರವಾಸಿಗರಲ್ಲಿ ನಾಲ್ಕು ಜನ ಮಾತ್ರ ಈ ಯಾನಕ್ಕೆ ಆಸಕ್ತಿ ತೋರಲಿಲ್ಲ. ಕಿಟಕಿ ಬದಿಯ ನಮ್ಮ ಆಸನವನ್ನು ಆಕ್ರಮಿಸಿದ ತಕ್ಷಣ ಹಿಮಾಲಯ ಶ್ರೇಣಿಯ ಒಂದು ನಕ್ಷೆಯನ್ನು ಪ್ರತಿಯೊಬ್ಬರಿಗೂ ನೀಡಲಾಯಿತು. ಅದರಲ್ಲಿ ಪರ್ವತದ ಹೆಸರು, ಅದರ ಎತ್ತರ (ಮೀಟರು

ಹಾಗೂ ಅಡಿಗಳಲ್ಲಿ) ಮುಂತಾದ ವಿವರಗಳಿದ್ದವು. ಆ ನಕ್ಷೆಯನ್ನು ಕೈಯಲ್ಲೇ ಇರಿಸಿಕೊಳ್ಳಬೇಕೆಂದೂ, ಪರ್ವತಗಳನ್ನು ಗುರುತಿಸಲು ಅದರಿಂದ ಸಹಾಯವಾಗುವುದೆಂದೂ ತಿಳಿಸಲಾಯಿತು. ರನ್ ವೇ ಸಂಚಾರದ ಹಂಗು ಕಳೆದುಕೊಂಡ ವಿಮಾನ ನಭಕ್ಕೆ ಜಿಗಿಯಿತು.

ದೂರದಲ್ಲಿ ಪರ್ವತಶ್ರೇಣಿ ಅಚ್ಚುಕಟ್ಟಾಗಿ ಜೋಡಿಸಿಟ್ಟ ಸಕ್ಕರೆ ಅಚ್ಚಿನಂತೆ ಕಾಣುತ್ತಿತ್ತು. ವಿಮಾನ ಆದಷ್ಟೂ ಹತ್ತಿರದಿಂದ ಮೊದಲು ಎಡದಿಂದ ಬಲಕ್ಕೆ ಚಲಿಸುವುದೆಂದೂ ನಂತರ ಬಲದಿಂದ ಎಡಕ್ಕೆ ಚಲಿಸುವುದೆಂದೂ, ಎಲ್ಲರಿಗೂ ವೀಕ್ಷಿಸಲು ಸಮಾನ ಅವಕಾಶ ಇರುತ್ತದೆಂದೂ ಸಿಬ್ಬಂದಿ ತಿಳಿಸಿದರು.

ಶುಭ್ರ ನೀಲಾಕಾಶ, ಡಿಕ್ಕಿ ಹೊಡೆವ ಮೋಡಗಳ ತುಂಟಾಟವ ಲೆಕ್ಕಿಸದೆ ಅಚಲವಾಗಿ ನಿಂತ ಬೆಟ್ಟ ಒಂದೊಂದೂ ರಮ್ಯಲೋಕಕ್ಕೆ ಕೊಂಡೊಯ್ದಿತು. ಸಿಬ್ಬಂದಿ ಆಗಾಗ್ಗೆ ಬಂದು ತನ್ನ ಮಧುರ ಕಂಠದಲ್ಲಿ ಇದು ಗಣೇಶ್ ಹಿಮಲ್, ಅದು ಲಾಂಗ್ಟಾಂಗ್, ಅದರ ಪಕ್ಕ ಇರುವುದು ಶೀಶ ಪಾಂಗ್ಮ, ಛೋಬಾ ಭಾಮರೆ ಪರ್ವತದ ಪಕ್ಕ ಇರುವುದೇ ಗೌರಿಶಂಕರ ಎಂದು ವಿವರಣೆ ನೀಡಿದ್ದೇ ಅಲ್ಲದೆ ನೀಡಿದ್ದ ನಕ್ಷೆಯ ಸಹಾಯದಿಂದ ನಾವೇ ಛುಗಿಮಗೊ, ಕಾರ್ಯೋಲಿಂಗ್, ಪುಮೊರಿ ಮತ್ತು ಮುಖ್ಯವಾಗಿ ನೇಪಾಳಿ ಭಾಷೆಯಲ್ಲಿ ಸಾಗರಮಾತಾ ಎಂದು ಹೆಸರಾದ ಮೌಂಟ್ ಎವರೆಸ್ಟ್ ಮುಂತಾದ ಶಿಖರಗಳನ್ನು ಗುರುತಿಸಿದಾಗ ನಮ್ಮ ಸಂತಸ ಎಡ್ಮಂಡ್ ಹಿಲರಿ ತೇನ್ಸಿಂಗ್‌ಗಿಂತ ಕಡಿಮೆಯೇನಿರಲಿಲ್ಲ.

ಕಾಂಚನಜುಂಗ, ಮಕಾಲುಗಳೂ ಕೊನೆಯಾಗಿ ನಮ್ಮ ಕಣ್ಣ ತುಂಬಿದವು. ಈ ಬೃಹತ್ ಪರ್ವತಗಳಲ್ಲಿ ಛೋಟಾ ಭಾಮರೆ ಮಾತ್ರ ೧೯೫೮೭ ಅಡಿ. ಉಳಿದವೆಲ್ಲ ೨೦೦೦೦ ಸಾವಿರ ಅಡಿ ಮೀರಿದವೇ.

ಸಂತಸದ ಗಳಿಗೆಗೂ ಮಿತಿ ಇರುತ್ತದೆ ಅಲ್ಲವೆ? ವಿಮಾನ ಎಡ ಬಲದ ಸುತ್ತಾಟ ಮುಗಿಸಿ ಹಿಮಾಲಯ ಶ್ರೇಣಿಯ ಭವ್ಯತೆಯನ್ನೂ, ಸೌಂದರ್ಯವನ್ನೂ ನಮ್ಮ ಚಿತ್ತಭಿತ್ತಿಯಲಿ ಅಚ್ಚೊತ್ತಿ ಧರೆಗಿಳಿಯಿತು. ನಾವೆಲ್ಲ ಏನೋ ದೊಡ್ಡ ಸಾಹಸ ಮಾಡಿದವರಂತೆ ವಿಮಾನಯಾನ ಸಂಸ್ಥೆಯವರು ಪ್ರತಿಯೊಬ್ಬರಿಗೂ ಪ್ರಮಾಣಪತ್ರ ನೀಡಿದರು. ಸೌಜನ್ಯದಿಂದ ಮಾರ್ಗದರ್ಶನ ಮಾಡಿದ ಸಿಬ್ಬಂದಿಗೆ ವಿಶೇಷ ವಂದನೆ ಸಲ್ಲಿಸಿ ವಾಪಸು ವಾಸ್ತವ್ಯದ ಹೋಟೆಲಿನತ್ತ ಚಲಿಸಿದೆವು.

***

ಬಿಟ್ಟ ಬಾಣ ಮುಂದೊತ್ತು

– ವೆಂಕಟೇಶ ಕಾಮತ್

ಬೆಳಗ್ಗಿನಿಂದ ಸಂಜೆ ರಾತ್ರಿ ದಿನದ 24 ಘಂಟೆಗಳೂ ಸಾಲದೆಂಬಂತೆ ನಿಮ್ಮ ಮೊಬೈಲಿನಲ್ಲಿ ಕಾಣಿಸಿಕೊಳ್ಳುವುದು ಈ ಮುಂದೊತ್ತುಗಳು. ಇಂದಿನ ದಿನಗಳಲ್ಲಿ ಹಿಂದೆಮುಂದೆ ಯೋಚಿಸದೆ ಒಬ್ಬರು ಇನ್ನೊಬ್ಬರ ಗುಂಪುಗಳಿಗೆ ಈ ಮುಂದೊತ್ತು ಕಳಿಸುವುದು ಒಟ್ಟಾರೆ ದಿನಚರಿಯ ಅವಿಭಾಜ್ಯ ಅಂಗವಾಗಿದೆ.

ಸಾಮಾಜಿಕ ಕಳಕಳಿ, ಅರೋಗ್ಯ, ವ್ಯಾಯಾಮ, ಅಡುಗೆ, ಹೊಸರುಚಿ, ನಗೆಹನಿ, ಸಂಗೀತ ಇತ್ಯಾದಿಗಳೊಂದಿಗೆ ರಾಜಕೀಯ ಪ್ರಚಾರ–ಅಪಪ್ರಚಾರ ಇವುಗಳು ನಿಮ್ಮ ವಾಟ್ಸಾಪ್ ಭಂಡಾರವನ್ನು ಎಷ್ಟರಮಟ್ಟಿಗೆ ತುಂಬುವುದೆಂದರೆ, ಈಗ ಈ ಜ್ಞಾನ ವಾಟ್ಸಾಪ್ ವಿಶ್ವವಿದ್ಯಾಲಯ ಅಥವಾ ವಾಟ್ಸಾಪ್ ಯೂನಿವರ್ಸಿಟಿಯ ಮಾತೆ ಎಂದು ಒಬ್ಬರನೊಬ್ಬರು ಆಡಿಕೊಳ್ಳುತ್ತಾರೆ.

ಹೆಚ್ಚಿನ ಗುಂಪು ವೇದಿಕೆಗಳಲ್ಲಿ ಮುಂದೊತ್ತು ನಿಷೇಧವನ್ನು ಹೇರಲಾಗುತ್ತದೆ. 'ತನ್ನ ಮರಿ ಹೊನ್ನಮರಿ, ಪರರ ಮರಿ ಕಾಗೆಮರಿ' ಎಂಬ ಗಾದೆಯಂತೆ ಎಲ್ಲರೂ ತಮ್ಮ ಅನಿಸಿಕೆ ಮುಂದೊತ್ತು ಅತ್ಯಗತ್ಯ ವಿಷಯ, ಎಲ್ಲರಲ್ಲೂ ಹಂಚಿಕೊಳ್ಳಲೇ ಬೇಕಾದಂತದ್ದು ಎಂದುಕೊಂಡು ಬೇರೆಯವರದನ್ನು ಅನಾವಶ್ಯಕ ಎಂದು ಹೀಗೆಳೆಯುತ್ತಾರೆ.

ಈ ಎಲ್ಲ ಮುಂದೊತ್ತುಗಳ ವಿಡಿಯೋ, ಸಂಗೀತ, ವಿಚಾರಧಾರೆ ಒಬ್ಬ ಸಾಮಾನ್ಯ ಮನುಷ್ಯನಿಗೆ ನೂರು ಶೇಕಡಾ (100%) ಓದಲು ಸಾಧ್ಯವೇ ಇಲ್ಲ. ನನ್ನ ಅಂದಾಜು 10–20–30 ಶೇಕಡಾ ಓದಬಹುದೇನೋ.

ಇನ್ನೊಂದೇನೆಂದರೆ ಒಂದೇ ವಿಷಯ, ಚಿತ್ರ, ಜೋಕ್, ಕಥೆ ಒಬ್ಬರಿಗಿಂತ ಹೆಚ್ಚು ಮಂದಿ ಕಳಿಸುತ್ತಾರೆ. ಮುಂದೊಂದು ದಿನ ನಿಮ್ಮ ಮೊಬೈಲಿನ ತಂತ್ರಜ್ಞಾನವೇ ಒಮ್ಮೆ ಬಂದ ಮೆಸೇಜ್ ಇನ್ನೊಮ್ಮೆ ಬಂದಾಗ 'ಇದು ಈಗಾಗಲೇ ಬಂದಿದೆ, ಇಂತಹವರು ಈ ಸಮಯ ಇದನ್ನು ನಿಮಗೆ ಕಳಿಸಿ, ನೀವು ಓದಿ ಇಲ್ಲವೇ ಓದುವುದಿಲ್ಲವೆಂದು ನಿರ್ಧರಿಸಿ ಆಗಿದೆ' ಎಂಬ ಸಂಕೇತವನ್ನು ಸೂಚಿಸಬಹುದು.

ಕೆಲವೊಮ್ಮೆ ಕೆಲವು ಸಂದೇಶಗಳು ವೈರಲ್ ಆಗಿ ನಿಮಿಷಗಳಲ್ಲಿ ಎಲ್ಲೆಡೆ ಹಬ್ಬುತ್ತವೆ. ಇವು ವೇದ ಪುರಾಣಗಳಲ್ಲಿ ಖಾಂಡವ ವನ ಸುಡಲು ಬಿಟ್ಟ ಅಸ್ತ್ರ, ಅಶ್ವತ್ಥಾಮನ ಬ್ರಹ್ಮಾಸ್ತ್ರ, ಋಷಿ ಮುನಿಗಳು ಕೊಟ್ಟ ಶಾಪಗಳಂತೆ ಇವನ್ನು ಹಿಂತೆಗೆದುಕೊಳ್ಳಲು ಆಗದು. ಆದರೆ ಒಂದು ಉಪಶಮನ ಒಂದು ಸಮಾಧಾನ ಇದರ ತೀಕ್ಷ್ಣತೆಯನ್ನು, ಪರಿಹಾರವನ್ನು ಒದಗಿಸುತ್ತದೆ ಎಂದು ಹೇಳುವ ಮಾತುಗಳು ಇಲ್ಲಿ ನೆನಪಿಗೆ ಬರುತ್ತವೆ.

ದುಷ್ಯಂತನ ವಿರಹದಲ್ಲಿ ಸ್ವಪ್ನವಿಹಾರದಲ್ಲಿದ್ದ ಶಕುಂತಲೆಗೆ ದುಷ್ಯಂತ ಮರೆಯಲೆಂದು ಶಾಪವು ಅಭಿಜ್ಞಾನ ಉಂಗುರವನ್ನು ನೋಡಿದೊಡನೆ ನೆನಪು ಮರುಕಳಿಸುವುದೆಂದು ಪರಿಹಾರವು ಒಂದು ಉದಾಹರಣೆ.

ಇಂದು ಮುಂದೊತ್ತಿನಲ್ಲಿ ಕಾಣಿಸುವ 'ಕಳೆದುಹೋಗಿದ್ದಾರೆ' ಇಲ್ಲವೇ 'ರಕ್ತ ಬೇಕಾಗಿದೆ;, 'ಇವರನ್ನು ಗುರುತಿಸಿ ಇವರ ಮನೆ ತಲುಪುವಂತೆ ಮಾಡಿ' ಮತ್ತು ವಿವಾಹ ಸಂಬಂಧ ಸಹಾಯ ಕೊಡುವ ವೇದಿಕೆ, ಸಂಸ್ಥೆಗಳು. ಎಷ್ಟೋ ಕಡೆ ಹುಡುಗ ಸೂಕ್ತವೆಂದು ಕಂಡು ವಿಚಾರಿಸಿದಾಗ ಆತನಿಗೆ ಮದುವೆ ಆಗಿ ಒಂದು ಕೆಲವೊಮ್ಮೆ ಎರಡು ಮಕ್ಕಳೂ ಇವೆ ಎಂದೂ ತಿಳಿದು ಬರುತ್ತದೆ. ಮಾಹಿತಿ ಕೇಂದ್ರಗಳು ವಿವರಗಳನ್ನು ಪಡೆದು ಕೂಡಕೂಡಲೇ ತಿದ್ದುಪಡಿ ಮಾಡಿ ನವೀಕರಿಸಬೇಕು.

ಒಂದು ಸುದ್ದಿ – ಸುಧೀರ್ ಎಂಬ ವ್ಯಕ್ತಿಯ ಸಂಸಾರ ಸಹಿತ ಕಾರು ಅಪಘಾತಕ್ಕೀಡಾಗಿ 4 ಕಿಡ್ನಿ/ಮೂತ್ರಪಿಂಡಗಳು ಲಭ್ಯವಿದೆ. ಈ ಮಾಹಿತಿ ಬೇಗನೆ ಹೆಚ್ಚು ಜನರಿಗೆ ತಲುಪಿಸಿ, ಅಗತ್ಯವಿರಬಹುದು.. ಎಂಬ ಮಾಹಿತಿಯೊಡನೆ ಮೂರು ಮೊಬೈಲ್ ಸಂಖ್ಯೆಯನ್ನು ನಮೂದಿಸಲಾಗಿದೆ. ಸುಧೀರ್ ಎಂದೊಡನೆ ಎದೆ ಝಲ್ ಎಂದಿತು ನಮ್ಮ ಬ್ಯಾಂಕಿನಲ್ಲಿ ಒಬ್ಬ ಸುಧೀರ್ ಎಂಬ ಮದ್ಯವ್ಯಸನಿ, ನನ್ನ ಪರಿಚಯಕ್ಕಿಂತ ಸ್ವಲ್ಪ ಹೆಚ್ಚಿನ ಆತ್ಮೀಯತೆ ಬೆಳೆಸಿದವನಿದ್ದ. ಅವನು ಬೇಗನೇ ಆಫೀಸರ್ ಹುದ್ದೆಗೆ ಉತ್ತೀರ್ಣನಾದರೂ ಬಹಳ ಸಲ ಲಾಸ್ ಆಫ್ ಪೇ ರಜೆ ಹಾಕಿ ತಿಂಗಳುಗಟ್ಟಲೆ ಬ್ಯಾಂಕಿಗೆ ಬಾರದೆ ಇರುತ್ತಿದ್ದ. ನನ್ನ ಬಗ್ಗೆ ಇವನಿಗೆ ಬಹಳ ಒಳ್ಳೆಯ ಅಭಿಪ್ರಾಯ ಇತ್ತು. ಜನ ಏನೇ ಆಡಿಕೊಂಡರೂ ನಾನು ಆತನನ್ನು ಗೌರವಿಸುತ್ತಿದ್ದೆ. ಅವನ ಬಗ್ಗೆ ಅವನ ದೌರ್ಬಲ್ಯದ ಬಗ್ಗೆ ನನಗೆ ಕಾಳಜಿ ಕನಿಕರ ಇತ್ತು.

4–5 ವರುಷಗಳ ಹಿಂದೆ ಈ ಸುಧೀರ್ ಅಪಘಾತದ ಸುದ್ದಿ ಓದಿದೊಡನೆ, ಕೊಟ್ಟ ಸಂಖ್ಯೆಗೆ ಫೋನಾಯಿಸಿದಾಗ ನಾನು ಅದು ಬಹಳ ಹಳೆಯ ಸುದ್ದಿ, ನನ್ನ ಗೆಳೆಯನಾದ ಸುಧೀರ್ ಅಲ್ಲ ಎಂದು ಸಮಾಧಾನದ ನಿಟ್ಟುಸಿರು ಬಿಟ್ಟರೂ.. ಈ 4–5 ವರುಷಗಳಲ್ಲಿ ಈ ಸುಧೀರ್ ಸುದ್ದಿ 5–6 ಬಾರಿ ಆದರೂ ಎಲ್ಲೆಲ್ಲಿಂದಲೋ ನನಗೆ ಮತ್ತೆ ಮತ್ತೆ ಬಂದಿದೆ. ನಾನು ಇದನ್ನು ಕಳಿಸಿದವರು ಕೂಡಲೇ ಇದನ್ನು ನಿಲ್ಲಿಸಿ ಎಂದು ವಿನಂತಿಸಿದರೂ ಅದು ಓಡಾಡುತ್ತಲೇ ಇದೆ.

ಇಲ್ಲಿಯವರೆಗೆ 10–12 ಬಾರಿ ನಮಗೆ ಇವರು ಸಿಕ್ಕಿದ್ದಾರೆ ಈ ಆಶ್ರಮ ಯಾ ಪೋಲೀಸ್ ಸ್ಟೇಷನ್ನಲ್ಲಿ ಇದ್ದಾರೆ. ಅನಾಥ ಮಕ್ಕಳು ಇವೆ, ಮುಂತಾದವುಗಳನ್ನು ಮುಂದೊತ್ತಿಸುವ ಮುನ್ನ ವಿಚಾರಣೆ ಮಾಡಿದಾಗ ಅವರೆಲ್ಲರೂ ತಮ್ಮ ನಿವಾಸಕ್ಕೆ ತಲುಪಿರುವ ಮಾಹಿತಿ ದೊರೆತು ನಾನು ಬಹಳ ಸಂತಸಪಟ್ಟೆ.

ಕೆಲವೇ ದಿನಗಳ ಹಿಂದೆ ಬೆಂಗಳೂರು ನಗರದ ಕೆಂಗೇರಿ ಸ್ಯಾಟಲೈಟ್ ಟೌನ್‌ನ ಒಂದು ನಿರಾಶ್ರಿತರ ಆಶ್ರಮದಲ್ಲಿ ಮಾತನಾಡಲು ತೊಂದರೆ ಇರುವ ಮರೆವು ಕಾಯಿಲೆಯ ಒಬ್ಬ ಮುದುಕನ ವಿಡಿಯೋ ನೋಡಿ ಕೂಡಲೇ ಆ ವಿಡಿಯೋ ದಲ್ಲಿ ಕಂಡ ಸಂಖ್ಯೆಗೆ ಫೋನ್ ಮಾಡಿದಾಗ ವಾರಗಳ ಹಿಂದೆ ಆ ವ್ಯಕ್ತಿಯನ್ನು ಮನೆಯವರು ಕರೆದುಕೊಂಡು ಹೋಗಿರುವುದಾಗಿ ತಿಳಿದು ಬಂದಿತು. ಈ ವಿಡಿಯೋ ಈಗಲೂ ಎಲ್ಲೆಲ್ಲಿಯೋ ತಿರುಗಾಡುತ್ತಿರಬಹುದು.

ಆದುದ್ದರಿಂದ ನಿಮಗೆಲ್ಲರಿಗೂ ನನ್ನ ವಿನಂತಿ ಏನೆಂದರೆ ಯಾವುದೇ ಮಾಹಿತಿ ಮುಂದೊತ್ತುವ ಮೊದಲು 5–10 ನಿಮಿಷ ಯೋಚಿಸಿ. ಸತ್ಯಾಸತ್ಯತೆಯ ಬಗ್ಗೆ ತನಿಖೆ ಮಾಡಿ. ಬಹಳಷ್ಟು ರಾಜಕೀಯ ಪ್ರಚಾರ–ಅಪಪ್ರಚಾರದ ವಿಡಿಯೋಗಳು ಸುಳ್ಳೆಂದು ನಿಮಗೆ ತಿಳಿಯಬಹುದು. ಬಿಟ್ಟ ಬಾಣವನ್ನು ನಿಲ್ಲಿಸಲು ಪ್ರಯತ್ನಿಸಿ.

***

ನಮ್ಮ ಕುವೆಂಪು

– ಮಾನಸ ಕೆ.ಕೆ.

ಪಚ್ಚೆ ನೆರಿಗೆಯೊಡಲಲಿ ಜನಿಸಿ
ನಲಿದು ಕುಣಿದ ಹಿತಮನ
ಗಿರಿ ಗರಿಯ ಸಾಲಿನ ರಮ್ಯ ಮನೋಹರ
ಸೊಬಗ ಹೊತ್ತ ತಾಣದ ಹೂ ಬನ

ಅರಳಿದ ಹೃದಯಕ್ಕೂ ಶ್ರೀಗಂಧ ಪಸರಿಸಿತ್ತು
ಕವಿಯ ಮನ
ತೇಲಿ ಸಾಗುತಿಹ ಸೌಂದರ್ಯ ರಾಶಿಯೇ ನವಗಾನ
ಮಿಂಚಿ, ಮಿರುಗಿ, ಮೇಳ್ದನಿ ಉದಯಿಸಿತ್ತು
ಹೊಸ ಋತುಗಾನ

ಚಿಗುರೊಡೆದು ಚದುರಿದ್ದವು ಕಾವ್ಯ ಕುಸುಮಗಳು
ಕವಿಶೈಲದ ಪರಿಸರದ ನಡುವೆ
ಹಸಿರ ಪಡಸಾಲಿನ ನಡುವೆ
ಕೂಸಿನ ಕಾವ್ಯ ಕಸೂತಿಯ
ರಾಶಿ ರಾಶಿ ಮುತ್ತುಗಳೋ.... ಆಹಾ!
ಎಂತಹ ಸುವರ್ಣವು

ಪ್ರಕೃತಿ ಮಡಿಲ ಸೊಬಗಿನ ಧರೆಯ ರಮ್ಯತಾಣ
ಕಣ್ಮನ ತಣಿಸಿ, ಮೆಲ್ಲನೆ
ಝುರಿ ಝುರಿಯಾಗಿ ಅಣಿಯಾಗಿತ್ತು
ಪದಗಳ ಪೋಣಿಸಲು ಕವಿ ಮನ

ರಂಗೇರಿಸಿತ್ತು ರಸಋಷಿಯ ಕಾವ್ಯಧಾರೆ
ಪಸರಿಸಿಯೇ ಬಿಟ್ಟು ಕಟ್ಟಿದ್ದವೋ ಪ್ರಶಸ್ತಿಗಳ ಸರಮಾಲೆ
ನಾಡು, ನುಡಿ, ಸಂಸ್ಕೃತಿಯ ವೈಭೋಗ ಸಿರಿ
ಸದಾ ಕನ್ನಡ ನಾಡಿನಲ್ಲಿ ಪ್ರಜ್ವಲಿಸಿದೆ
ಹಚ್ಚ ಹಸಿರಾಗಿ

ಸಾಹಿತ್ಯ ದಾಸೋಹ 225

ಅಧ್ಯಕ್ಷೀಯ ನುಡಿಗಳು



–ಪೂರ್ಣಿಮಾ ಭಗವಾನ್

ಎಲ್ಲರಿಗೂ ನಮಸ್ಕಾರ. ನೋಡಿಯೋ ಸಾಹಿತ್ಯ ದಾಸೋಹದ 225ನೆಯ ಕಾರ್ಯಕ್ರಮಕ್ಕೆ ನನ್ನನ್ನು ಅಧ್ಯಕ್ಷಳನ್ನಾಗಿ ಆರಿಸಿರುವುದಕ್ಕೆ ಸಂಚಾಲಕ ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ವಂದನೆಗಳು. ಕಾರ್ಯಕ್ರಮದ ಆರಂಭದಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಪ್ರಧಾನ ಸಂಚಾಲಕರಾದ ಬೆಂ ಶ್ರೀ ರವೀಂದ್ರರವರು ತಮ್ಮ ಪ್ರಾಸ್ತಾವಿಕ ನುಡಿಗಳಿಂದ ಶುಭ ಕೋರಿದ್ದಾರೆ. ಸಹೃದಯಿ, ಕವಯಿತ್ರಿ, ಶ್ರೀಮತಿ ಶೀಲಾ ಅರಕಲಗೂಡುರವರು ಎಲ್ಲರಿಗೂ ಸ್ವಾಗತ ಕೋರಿ ನನ್ನ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅವರಿಗೂ ನನ್ನ ವಂದನೆಗಳು.

ಈ ವೇದಿಕೆಯಲ್ಲಿರುವ ಹಲವಾರು ಪ್ರತಿಭಾವಂತ ಲೇಖಕರು ಇಂದು ಪ್ರಸ್ತುತಪಡಿಸಿರುವ ಲೇಖನಗಳ ಸೂಕ್ಷ್ಮ ಪರಿಚಯದೊಂದಿಗೆ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತೇನೆ. ಇಂದಿನ ದಾಸೋಹದಲ್ಲಿ ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತ ಪಡಿಸಲು ಒಟ್ಟು 21 ಜನ ಸದಸ್ಯರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದರು. ಅಷ್ಟೂ ಮಂದಿ ತಮ್ಮ ಬರಹವನ್ನು ಮುಂಚಿತವಾಗಿ ನನಗೆ ಕಳುಹಿಸಿದ್ದಾರೆ. ಆದರೆ ಒಟ್ಟು 18 ಮಂದಿ ಮಾತ್ರ ದಾಸೋಹದಲ್ಲಿ ತಮ್ಮ ಪ್ರಸ್ತುತಿಯನ್ನು ಮಂಡಿಸಿದ್ದಾರೆ. ಒಟ್ಟು 21 ಬರಹಗಳಲ್ಲಿ ಏಳು ಕವನಗಳು, ಆರು ಲೇಖನಗಳು, ಮೂರು ಸಣ್ಣ ಕಥೆಗಳು, ಎರಡು ಪ್ರವಾಸ ಕಥನಗಳು, ಒಂದು ಪುಸ್ತಕ ಪರಿಚಯ, ಒಂದು ಪುಸ್ತಕ ವಿಮರ್ಶೆ, ಒಂದು ಲಲಿತ ಪ್ರಬಂಧ ಮತ್ತು ಅವುಗಳ ಜೊತೆಯಲ್ಲಿ ನನ್ನದೊಂದು ಮುಕ್ತಕ ಸರಣಿ ಪ್ರಸ್ತುತವಾಗಿವೆ.

1. 'ನಮ್ಮ ಕುವೆಂಪು' (ಕವನ) – ಮಾನಸ ಕೆ.ಕೆ.

ಮೊಟ್ಟ ಮೊದಲಿಗೆ, ಹಲವಾರು ಕವಿಗೋಷ್ಠಿಗಳಲ್ಲಿ ಸಂಘಟಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕವಯಿತ್ರಿಯಾದ ಶ್ರೀಮತಿ ಮಾನಸ ಕೆ.ಕೆ.ರವರು 'ನಮ್ಮ ಕುವೆಂಪು' ಎಂಬ ಕವನವನ್ನು ಪ್ರಸ್ತುತಪಡಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ ವಿಜೇತ ರಸಋಷಿಯವರ ನೆಚ್ಚಿನ ತಾಣವಾದ ಕವಿಶೈಲದ ರಮಣೀಯ ಸೌಂದರ್ಯದ ಆಸ್ವಾದದಲ್ಲಿ ಚಿಗುರೊಡೆದು ಚದುರಿದವು ಕಾವ್ಯ ಕುಸುಮಗಳು ಎಂದು ಬಣ್ಣಿಸಿದ್ದಾರೆ. ನಾಡು ನುಡಿ ಸಂಸ್ಕೃತಿಯ ವೈಭೋಗ ಸಿರಿಕನ್ನಡ ನಾಡಿನಲ್ಲಷ್ಟೇ ಅಲ್ಲದೆ ವಿಶ್ವದಾದ್ಯಂತ ಹಚ್ಚಹಸಿರಾಗಿ ಪಸರಿಸಲಿ ಎಂಬ ಆಶಯ.

2. 'ಲಂಕೆಯ ನಿಷ್ಕಳಂಕಳು' – ಸ್ನೇಹ ಶಶಿಧರ್

ಎರಡನೆಯವರಾಗಿ, ಲೇಖಕಿ ಸ್ನೇಹ ಶಶಿಧರ್‌ರವರು 'ಲಂಕೆಯ ನಿಷ್ಕಳಂಕಳು' ಎಂಬ ಸಣ್ಣ ಕಥೆಯನ್ನು ಪ್ರಸ್ತುತಪಡಿಸಿದ್ದಾರೆ. ಪಂಚ ಮಹಾ ಪ್ರತಿವ್ರತೆಯರಲ್ಲಿ ಒಬ್ಬಳಾದ ಮಂಡೋದರಿಯ ಬಾಲ್ಯ, ವಿವಾಹದ ಪ್ರಸಂಗ, ತಂದೆ ಮಯಾಸುರ ಮತ್ತು ತಾಯಿ ಹೇಮರ ದಾಂಪತ್ಯ ಎಲ್ಲವನ್ನೂ ಕುತೂಹಲಕರವಾಗಿ ಬಿಡಿಸಿಟ್ಟಿದ್ದಾರೆ.

ಶ್ರೀಮತಿ ಪೂರ್ಣಿಮಾ ಭಗವಾನ್

ಪೂರ್ಣಿಮಾ ಭಗವಾನ್‌ರವರು ಕೊಡಗಿನ ರಾಮಸ್ವಾಮಿ ಕಣಿವೆಯ ಕೆ.ಎಸ್.ಭಗವಾನ್ ಮತ್ತು ಬಿ. ನೇತ್ರಾವತಿ ದಂಪತಿಗಳ ಪುತ್ರಿ. ಕಣಿವೆ ಸೂರ್ಯನಾರಾಯಣ ಶೆಟ್ಟಿಯವರ ಹಿರಿಯ ಮೊಮ್ಮಗಳು. ಮೈಸೂರಿನ ಚಂದ್ರಿಕಾ ಪಾಠಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದು, ಮಹಾರಾಣಿ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂಎಸ್ಸಿ ಸ್ನಾತಕೋತ್ತರ ಪದವಿ ಗಳಿಸಿದರು. ಹೊಳೆನರಸೀಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಕಾಲ ಸೇವೆ ಸಲ್ಲಿಸಿದ ನಂತರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಉದ್ಯೋಗಿಯಾಗಿ ನೇಮಕಗೊಂಡರು.

ಎಳವೆಯಿಂದಲೇ ಓದು, ಬರೆಹ, ಅಂಚೆ ಚೀಟಿ ಸಂಗ್ರಹದಂತಹ ಹವ್ಯಾಸ ಹಾಗೂ ನಾಟಕ, ನೃತ್ಯ, ಸಂಗೀತ ಕಾರ್ಯಕ್ರಮಗಳತ್ತ ಒಲವು ಹರಿಸಿದ ಪೂರ್ಣಿಮಾ ಅವರು, ಶಾಲಾ ದಿನಗಳಿಂದಲೂ ಹಲವು ಬಹುಮಾನಗಳಿಗೆ ಭಾಜನರಾಗಿದ್ದಾರೆ. ಇವರ ಕವನ, ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂತರ್ಜಾಲದ ಅನೇಕ ವಾಟ್ಸಾಪ್ ಬಳಗಗಳಲ್ಲಿ ಕನ್ನಡ ಕವಿತೆಗಳು, ಮುಕ್ತಕಗಳು, ಚಿತ್ರಕವನ, ಚುಟುಕು, ವಚನ, ಲೇಖನ, ಕಿರುಗತೆ ಇತ್ಯಾದಿಗಳನ್ನು ಪ್ರಕಟಿಸಿ ಬಹಳಷ್ಟು ಸ್ಪರ್ಧೆಗಳಲ್ಲಿ ಬಹುಮಾನಿತರಾಗಿದ್ದಾರೆ.

ಶ್ರೀಮತಿ ಪೂರ್ಣಿಮಾ ಭಗವಾನ್ ಅವರ 'ಸಂಚಲನ – ಸಂವಹನ' ಮತ್ತು 'ಸಂವಹನ – ಸಂವರ್ಧನ' ಎಂಬ ಎರಡು ಸ್ವರಚಿತ ಕವನ ಸಂಕಲನಗಳು ಕಥಾಬಿಂದು ಪ್ರಕಾಶನದಿಂದ ಲೋಕಾರ್ಪಣೆಗೊಂಡಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಇವರು ಕಲಿಕೆಗೆ ಕೊನೆಯಿಲ್ಲ ಎಂಬ ಮಾತಿನಂತೆ ಬ್ಯಾಂಕ್ ಉದ್ಯೋಗದಿಂದ ನಿವೃತ್ತಿಯ ನಂತರವೂ ಸಂಸ್ಕೃತ ಅಧ್ಯಯನದಲ್ಲಿ ತೊಡಗಿದ್ದು, ಹಲವು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿರುವ ಶ್ರೀಮತಿ ಪೂರ್ಣಿಮಾ ಭಗವಾನ್ ಅವರು ಸಾಹಿತ್ಯ ದಾಸೋಹ 225ರ ಅಧ್ಯಕ್ಷತೆ ವಹಿಸಿ, ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಎಲ್ಲಾ ಬರಹಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಮಂಡೋದರಿಯ ನೆನಪಿನ ಪುಟಗಳ ಚಿತ್ರಣವು ಓದುಗರ/ಕೇಳುಗರ ಕಣ್ಣಮುಂದೆ ಬಂದು ನಿಲ್ಲುತ್ತದೆ. ಸುಂದರ ನಿರೂಪಣೆ. ವರನ ಹೆಸರು ಕೇಳಿ ಅಂಗಾಲು ಮಂಜಿನಲ್ಲಿ ರಂಗೋಲಿ ಹಾಕಿದ ಉಪಮೆ ಬಹಳ ಸುಂದರ. ರಾವಣನ ಸಾಂಸಾರಿಕ ಜೀವನದ ಮತ್ತೊಂದು ಮುಖವನ್ನು ಮಂಡೋದರಿಯ ನುಡಿಗಳಲ್ಲಿ ಪರಿಚಯಿಸಿದ್ದಾರೆ. ಅವರಿಂದ ಮತ್ತಷ್ಟು ಸುಂದರ ಬರಹಗಳು ಮೂಡಿಬರಲಿ.

3. 'ಕುಶಲ ಕೊತ್ವಾಲ ವಿದ್ಯೆ' – ವಿಠ್ಠಲ್ ಇಜೇರಿ

ಮೂರನೆಯವರಾಗಿ ಸ.ಸ.ಕ.ಸ ವೇದಿಕೆಯ ಅತ್ಯಂತ ಹಿರಿಯ ಸದಸ್ಯರಾದ, ಎರಡು ದಶಕಗಳ ಹಿಂದೆಯೇ ಪ್ರಥಮ ದಾಸೋಹವನ್ನು ತಮ್ಮ ಮನೆಯಲ್ಲಿಯೇ ಆಯೋಜಿಸಿದ್ದ ಶ್ರೀಯುತ ವಿಠ್ಠಲ್ ಇಜೇರಿಯವರು, ಅಲಕಾ ಕಟ್ಟೆಮನೆಯವರ ಸಂಪಾದಿತ ಕೃತಿ 'ಅಮ್ಮ ಹೇಳುವ ಚಂದದ ಕಥೆಗಳು' ಪುಸ್ತಕದ ಒಂದು ಸಣ್ಣ ಕಥೆಯಾದ 'ಕುಶಲ ಕೊತ್ವಾಲ ವಿದ್ಯೆ' ಯನ್ನು ಪರಿಚಯಿಸಿದ್ದಾರೆ. ಬದುಕಿನ ವಾಸ್ತವಿಕ ಸತ್ಯವನ್ನು ಅರುಹುವ ಖಲೀಲ್ ಗಿಬ್ರಾನ್‌ರವರು ಮಕ್ಕಳನ್ನು ಕುರಿತು ಹೇಳುವ ಮಾತುಗಳನ್ನು ನಮ್ಮ ಮುಂದಿರಿಸಿದ್ದಾರೆ. ದೇವರು ಹಾರುವ ಬಾಣವನ್ನು

ಪ್ರೀತಿಸುವಂತೆ ಸದೃಢವಾದ ಬಿಲ್ಲನ್ನೂ ಪ್ರೀತಿಸುತ್ತಾನೆ. ಎಂತಹ ಸುಂದರ ಸಾಲುಗಳು. ಮಕ್ಕಳ ಸಂತೋಷಕ್ಕೆ ಸೃಜನಶೀಲತೆಗೆ ಪೂರಕವಾದ ಕುತೂಹಲಭರಿತ ಕಥೆ. ಹಿರಿಯ ಲೇಖಕರಾದ ಇವರು ಪ್ರತಿ ದಾಸೋಹದಲ್ಲೂ ಭಾಗವಹಿಸುತ್ತಿದ್ದಾರೆ. ಅಭಿನಂದನೆಗಳು ಸರ್.

4. 'ಮತದಾನದ ಮಜಾಗಳು' – ರೇಣುಕಾ ದೇಸಾಯಿ

ಹಾಸ್ಯಲೇಖನ, ಲಲಿತ ಪ್ರಬಂಧಗಳ ರಚನೆಯಿಂದ ಮನಸೆಳೆಯುತ್ತಿರುವ ಉದಯೋನ್ಮುಖ ಬರಹಗಾರ್ತಿ ಶ್ರೀಮತಿ ರೇಣುಕಾ ದೇಸಾಯಿಯವರು ನಾಲ್ಕನೆಯವರಾಗಿ ತಮ್ಮ ವಿಡಂಬನಾ ಲೇಖನ 'ಮತದಾನದ ಮಜಾಗಳು' ಮಂಡಿಸಿದ್ದಾರೆ. ಇತ್ತೀಚೆಗಷ್ಟೇ ಲೋಕಸಭಾ ಚುನಾವಣೆ ನಡೆದಿದೆ. ಅಲ್ಲಿ ರೇಣುಕಾರವರು ತಮ್ಮ ಅನುಭವಕ್ಕೆ ಬಂದ ಹಲವು ಘಟನೆಗಳನ್ನು ವಿಶ್ಲೇಷಿಸಿದ್ದಾರೆ. ಸುದ್ದಿ ಮಾಧ್ಯಮದವರ ಕಣ್ಣಿಗೆ ಗೋಚರವಾಗುವುದು ನಾಣ್ಯದ ಒಂದು ಮುಖ ಮಾತ್ರ. ಇನ್ನೊಂದು ಮುಖವನ್ನು ನಾವುಗಳೇ ಹುಡುಕಿಕೊಳ್ಳಬೇಕು ಎಂಬುದು ನನ್ನ ಅನಿಸಿಕೆ. ವೃದ್ಧರಿಗೆ, ಅಸಹಾಯಕರಿಗೆ ಅವರಿರುವ ಸ್ಥಳದಲ್ಲೇ ಮತದಾನ ಮಾಡುವ ವ್ಯವಸ್ಥೆಯನ್ನು ಸರ್ಕಾರ ಕಲ್ಪಿಸಿರುವುದು ಎಷ್ಟು ಜನರ ಅರಿವಿಗೆ ನಿಲುಕಿದೆಯೋ ತಿಳಿದಿಲ್ಲ. ನಿಗದಿತ ದಿನಾಂಕದೊಳಗೆ ನೋಂದಣಿ ಮಾಡಿಕೊಂಡಿದ್ದವರ ಮನೆಗಳಿಗೆ ಚುನಾವಣಾ ಸಿಬ್ಬಂದಿ ಎರಡು ಮೂರು ದಿನಗಳ ಮೊದಲೇ ಹೋಗಿ ಅವರಿಂದ ಮತದಾನ ಮಾಡಿಸಿಕೊಂಡಿದ್ದರು. ಮೊದಲೇ ಮತದಾನ ಮಾಡಿ ನಂತರದ ಎರಡು ಮೂರು ದಿನಗಳಲ್ಲಿ ಅಂದರೆ ನಿಗದಿತ ಚುನಾವಣಾ ದಿನಾಂಕದ ಮೊದಲೇ ಮತದಾನ ಮಾಡಿದ ವ್ಯಕ್ತಿ ಮೃತರಾದರೆ ಅವರ ಮತವು ಸಿಂಧುವೆ ಎನ್ನುವುದು ಮತ್ತೊಂದು ಪ್ರಶ್ನೆ. ಅದನ್ನೆಲ್ಲಾ ಪರಿಶೀಲಿಸಲಾಗುವುದೇ. ಪ್ರಸಕ್ತ ಸಾಮಾಜಿಕ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ 'ಮತದಾನದ ಮಜಾಗಳು' ಬೆಳಕು ಚೆಲ್ಲಿವೆ. ಲೇಖನಗಳ ಮೂಲಕ ಸಾಮಾಜಿಕ ಅವ್ಯವಸ್ಥೆಗಳನ್ನು ತೊಡೆಯುವ ಯತ್ನ ಹೀಗೆಯೇ ಮುಂದುವರೆಯಲಿ.

5. 'ಉಪ್ಪು' – ಸಿ.ಆರ್. ಕಮಲಾಕ್ಷಿ

ಲೇಖಕಿ ಶ್ರೀಮತಿ ಕಮಲಾಕ್ಷಿಯವರು 'ಉಪ್ಪು' ಎಂಬ ಲಲಿತ ಪ್ರಬಂಧವನ್ನು ಪ್ರಸ್ತುತಪಡಿಸಿದ್ದಾರೆ. ತಾಯಿ ಮಗನ ಸಂಭಾಷಣೆಯೊಂದಿಗೆ ಆರಂಭಿಸಿ, ಹಾಸ್ಯವನ್ನು ಬೆರೆಸಿ ಉಪ್ಪಿನ ಮಹತ್ವ ತಿಳಿಸಿದ್ದಾರೆ. ಉಪ್ಪಿನ ಬಗ್ಗೆ ಹಲವು ಚಾರಿತ್ರಿಕ ವಿಷಯಗಳನ್ನೂ ಅರುಹಿ, ಉಪ್ಪಿಗೂ ಹಣಕ್ಕೂ ಹೋಲಿಕೆ ಮಾಡಿದ್ದಾರೆ. ಹಣ, ಉಪ್ಪು ಎರಡೂ ಹಿತಮಿತವಾಗಿರಬೇಕೆಂಬ ಕಿವಿಮಾತು ಇದರಲ್ಲಿ ಅಡಗಿದೆ. ಉಪ್ಪಿಲ್ಲದ ಊಟವನ್ನು ಊಹಿಸಲೂ ಅಸಾಧ್ಯ. ಷಡ್ರಸಗಳಲ್ಲಿ ಅತಿ ಮುಖ್ಯವಾದದ್ದು ಲವಣ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಅಂತಹ ಉಪ್ಪಿನ ಬಗ್ಗೆ ಸರಳ ಪದಗಳಲ್ಲಿ ಗಾದೆಗಳ ಉದಾಹರಣೆಯೊಂದಿಗೆ ಉಪ್ಪಿನ ಮಹತ್ವವನ್ನು ತಿಳಿಸಿದ್ದಾರೆ. ಭಾರತದ ಸ್ವತಂತ್ರ ಸಂಗ್ರಾಮದಲ್ಲಿಯೂ ಉಪ್ಪಿನ ಸತ್ಯಾಗ್ರಹದ ಕಾಣಿಕೆ ಮಹತ್ತರ. ಸರ್ವಂ ಲವಣಂ ಜಗಂ ಎಂದಿರುವ ಕಮಲಾಕ್ಷಿಯವರು ಉಪ್ಪು ಎಲ್ಲರ ಬದುಕಿನಲ್ಲಿ ಮೊದಲಿನಿಂದ ಕೊನೆಯವರೆಗೆ ವಹಿಸುವ ಪಾತ್ರವನ್ನು ತೆರೆದಿಟ್ಟಿದ್ದಾರೆ. ಇವರಿಂದ ಮತ್ತಷ್ಟು ಸುಂದರ ಬರಹಗಳು ಮೂಡಿಬರಲಿ.

6. 'ರಾಗ-ಕವನ-ಮಿಲನ' ಮತ್ತು 'ನಮ್ಮಪ್ಪ' (ಎರಡು ಕವನಗಳು) – ಶೀಲಾ ಅರಕಲಗೂಡು

ನಿವೃತ್ತ ಪ್ರಾಧ್ಯಾಪಕಿ, ಉತ್ತಮ ಲೇಖಕಿ, ಕವಿಯಿತ್ರಿಯೂ ಆಗಿರುವ ಶೀಲಾ ಅರಕಲಗೂಡು ಅವರು ಹಲವು ಬಹುಮಾನಗಳನ್ನು ಬರಸೆಳೆಯುತ್ತಿದ್ದಾರೆ. ಇವರ ಕವನಗಳು ಎಲ್ಲಾ ವಿಷಯ ವಸ್ತುಗಳ ಸುತ್ತ ಹರಿದಾಡುತ್ತವೆ. ಅತ್ಯಾಕರ್ಷಕ ಪದಪಂಜಗಳಲ್ಲಿ ಸರಾಗವಾಗಿ ಸುಂದರವಾದ ಕವನಗಳನ್ನು ರಚಿಸಿ ಪ್ರಸ್ತುತಪಡಿಸುವ ಕುಶಲಿ ಈಕೆ.

ಇವರು ಮೊದಲಿಗೆ ಪ್ರಸ್ತುತಪಡಿಸಿದ ತಮ್ಮ 'ರಾಗ-ಕವನ-ಮಿಲನ' ಕವನದಲ್ಲಿ ಇನಿಯನ ಬರುವಿಕೆಯನ್ನು ಕಾತುರದಿಂದ ಕಾಯುತ್ತಿರುವ ಯುವತಿಯ ಆಂತರ್ಯವನ್ನು ಸುಂದರ ಉಪಮೆಗಳೊಂದಿಗೆ ತೆರೆದಿಟ್ಟಿದ್ದಾರೆ. ಮನಸೆಳೆವ ರಾಗದ ಸವಿ ಕವನದ ಛವಿ.

ಇವರ ಎರಡನೆಯ ಕವನ 'ನಮ್ಮಪ್ಪ'. 94 ವರ್ಷಗಳ ಕಾಲ ಬದುಕಿ ಬಾಳಿದ ದೀರ್ಘಾಯುಷಿ ತಮ್ಮ ತಂದೆಯ ಗುಣಗಾನವನ್ನು, ಬದುಕಿನ ನೈಜತೆಯನ್ನು ಬಿಂಬಿಸುವ ಆದಿಪ್ರಾಸವುಳ್ಳ ಸುಂದರ ಕವನ. ಬಾಲ್ಯದ ಸವಿ ನೆನಪುಗಳೊಂದಿಗೆ ಅಮೋಘವಾಗಿ ಚಿತ್ರಿಸಿದ್ದಾರೆ. ಪದಪ್ರಯೋಗ ಬಹು ಆಕರ್ಷಣೀಯ. ಇವರ ಕವನ ಸಂಕಲನಕ್ಕಾಗಿ ಎದುರು ನೋಡೋಣ.

7. 'ಬೆರಗು' (ಕವನ) – ಹು.ವಾ. ಶ್ರೀಪ್ರಕಾಶ್

ವೇದಿಕೆಯ ಕಾರ್ಯಕ್ರಮಗಳನ್ನು ಕ್ಷಣಮಾತ್ರದಲ್ಲಿ ವರದಿ ಮಾಡುವ ಶ್ರೀ ಹು.ವಾ.ಶ್ರೀಪ್ರಕಾಶ್‌ರವರು ಯಕ್ಷಗಾನ, ನಾಟಕ, ಕವಿತಾ ರಚನೆ, ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಆಸಕ್ತರು. ಕೆಲವು ಬರಹ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇಂದಿನ ದಾಸೋಹದಲ್ಲಿ 'ಬೆರಗು' ಎಂಬ ಕವನವನ್ನು ಪ್ರಸ್ತುತಪಡಿಸಿದ್ದಾರೆ. ನಕ್ಷತ್ರಗಳು, ಪಂಚಭೂತಗಳು, ಜೀವಿಗಳು, ಹೂವುಹಣ್ಣು, ಗರ್ಭ, ಗರ್ಭದ ಬೆಳವಣಿಗೆ, ಮನಸ್ಸಿನ ಭಾವನೆಗಳು, ಎಲ್ಲವೂ ಬೆರಗು ಎಂಬುದಾಗಿ ಪಟ್ಟಿ ಮಾಡಿದ್ದಾರೆ. ಪ್ರಕೃತಿದತ್ತವಾದ ಎಲ್ಲವೂ ವಿಸ್ಮಯವೇ ಸರಿ. ಮಾನವರು ಎಷ್ಟೇ ಬುದ್ಧಿವಂತರಾದರೂ ಸೃಷ್ಟಿ ರಹಸ್ಯವನ್ನು ಭೇದಿಸಲು ಆಗದು, ಅರಿಯಲಾಗದು, ಪುನಃ ಸೃಷ್ಟಿಸಲಾಗದು. ಹಲವಾರು ವಿಸ್ಮಯಗಳಿಂದ ಕೂಡಿರುವ ಈ ಜಗತ್ತು ಒಂದು ಅದ್ಭುತವೇ ಸರಿ.

8. 'ಅಂಜದಿರು ಮನವೇ' (ಗಾಯತ್ರಿ ಮೂರ್ತಿಯವರ ಪುಸ್ತಕ ಪರಿಚಯ) – ಜಿ.ವಿ. ನಿರ್ಮಲ

ಲೇಖಕಿ ಶ್ರೀಮತಿ. ಜಿ.ವಿ. ನಿರ್ಮಲರವರು ಶ್ರೀಮತಿ ಗಾಯತ್ರಿ ಮೂರ್ತಿವರು ಬರೆದಿರುವ 'ಅಂಜದಿರು ಮನವೇ' ಪುಸ್ತಕದ ವಿಮರ್ಶೆ ಮಾಡಿದ್ದಾರೆ. ಬಂದದ್ದೆಲ್ಲ ಬರಲಿ ಗೋವಿಂದನ ದಯವಿರಲಿ ಎಂದು ಮೂರನೇ ಹಂತದಲ್ಲಿದ್ದ ದೊಡ್ಡ ಕರುಳಿನ ಕ್ಯಾನ್ಸರ್ ಗಡ್ಡೆಯ ಜೊತೆ ದಿಟ್ಟ ಹೋರಾಟ ನಡೆಸಿದ ತಮ್ಮ ಬಾಲ್ಯದ ಗೆಳತಿ ಗಾಯತ್ರಿ ಮೂರ್ತಿಯವರ ಮನೋಧೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಂಜದಿರು ಮನವೇ ಕೃತಿಗೆ ಪ್ರಸಿದ್ಧ ವೈದ್ಯರು ಹಾಗೂ ವಿಜ್ಞಾನ ಲೇಖಕರರೂ ಆದ ಶ್ರೀ ಪಿ.ಎಸ್. ಶಂಕರ್‌ರವರು ಮುನ್ನುಡಿ ಬರೆದಿದ್ದಾರೆ. ಧನಾತ್ಮಕ ಚಿಂತನೆ, ಆತ್ಮವಿಶ್ವಾಸ, ಮನೆಯವರೆಲ್ಲರ ಸಹಕಾರ ಕಾಯಿಲೆಯ ತೀವ್ರತೆಯನ್ನು ಕಡಿಮೆ ಮಾಡುವುದರಲ್ಲಿ, ರೋಗಿಯ ಚೇತರಿಕೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಅರ್ಬುದ ರೋಗದ ಬಗ್ಗೆ ಬಹಳಷ್ಟು ವಿಷಯಗಳನ್ನು ಒಳಗೊಂಡಿರುವ ಪುಸ್ತಕದ ಪರಿಚಯ ಸೊಗಸಾಗಿದೆ. ಕ್ಲಿಷ್ಟಕರ ಗಂಭೀರ ಪರಿಸ್ಥಿತಿಯಲ್ಲೂ ಹಾಸ್ಯಪ್ರಜ್ಞೆ ಮೆರೆಯುವ

ಲೇಖಕಿ ಗಾಯತ್ರಿ ಮೂರ್ತಿಯವರ ಮನೋದಾರ್ಢ್ಯ ಅನುಕರಣೀಯ. ಆದರೆ ಅಂತಹ ಸ್ಥಿತಿ ಮತ್ಯಾರಿಗೂ ಬಾರದಿರಲಿ ಎಂದು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

9. 'ಜಪಾನೀಯರ ಪವಿತ್ರ ಪರ್ವತ ಫ್ಯೂಜಿಯಾಮ' – ನಾಗರತ್ನ ಚಂದ್ರಶೇಖರ್

ಹವ್ಯಾಸಿ ಬರಹಗಾರ್ತಿ, ಪತ್ರಕರ್ತೆ, ಲೇಖಕಿಯರ ಸಂಘದ ಮಾಜಿ ಕಾರ್ಯದರ್ಶಿಯಾದ ಶ್ರೀಮತಿ ನಾಗರತ್ನ ಚಂದ್ರಶೇಖರ್ ರವರು ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಪ್ರವಾಸ ಪ್ರಿಯೆಯಾಗಿರುವ ಅವರು ಇಂದು 'ಜಪಾನೀಯರ ಪವಿತ್ರ ಪರ್ವತ ಫ್ಯೂಜಿಯಾಮ' ಎಂಬ ತಮ್ಮ ಪ್ರವಾಸ ಕಥನವನ್ನು ತೆರೆದಿಟ್ಟಿದ್ದಾರೆ.

ಬಹಳ ಅಚ್ಚುಕಟ್ಟಾದ ಕ್ರಿಯಾಶೀಲತೆಗೆ ಹೆಸರಾದ ಜಪಾನಿನ ರಮಣೀಯ ಸೌಂದರ್ಯ ಎಲ್ಲರನ್ನೂ ಆಕರ್ಷಿಸುತ್ತದೆ. ಏಷ್ಯಾದ ಗ್ರೇಟ್ ಬ್ರಿಟನ್ ಎಂದು ಕರೆಯಲ್ಪಡುವ ಜಪಾನ್ ಸಹ ಮುಖ್ಯ ಭೂಖಂಡದಿಂದ ಪ್ರತ್ಯೇಕಿಸಲ್ಪಟ್ಟ ದ್ವೀಪ. ಜಪಾನಿನ ಎತ್ತರವಾದ ಪರ್ವತ ಮೌಂಟ್ ಫ್ಯೂಜಿಯಾಮದ ಸವಿವರವನ್ನು ಅಂಕೆ ಸಂಖ್ಯೆಗಳ ದಾಖಲೆ ಸಹಿತ ವಿವರಿಸಿದ್ದಾರೆ. ಜಪಾನ್ ಪ್ರವಾಸ ಕೈಗೊಳ್ಳಲು ಉದ್ಯುಕ್ತರಾಗಿರುವವರಿಗೆ ಒಂದಷ್ಟು ಮಾಹಿತಿ ದೊರಕುತ್ತದೆ. ಪ್ರವಾಸದ ಜೊತೆಗೆ ಪ್ರವಾಸಿ ತಾಣಗಳ ಸೂಕ್ಷ್ಮ ಪರಿಚಯ, ಭೌಗೋಳಿಕ ಇತಿಹಾಸ, ಚರಿತ್ರೆ ಎಲ್ಲವನ್ನೂ ಒಟ್ಟಾಗಿಸಿದ್ದಾರೆ. ಇವರ ಬರಹಗಳಿಂದ ಎಲ್ಲರಿಗೂ ಮತ್ತಷ್ಟು ಸ್ಥಳಗಳ ಮಾಹಿತಿ ದೊರಕಲಿ.

10. 'ಅಂಗಾಂಗ ದಾನ ಮತ್ತು ಕಸಿ – ಒಂದು ನೋಟ' – ಕೆ.ಆರ್. ವೆಂಕಟೇಶ್

'ಮನೋಹಂಸ' ಎಂಬ ಕಾವ್ಯನಾಮ ಹೊಂದಿರುವ ಲೇಖಕ, ಕಾದಂಬರಿಕಾರರೂ ಆದ ಶ್ರೀ ಕೆ.ಆರ್.ವೆಂಕಟೇಶ್ ರವರು 2023ರಲ್ಲಿ 'ಪ್ರಕ್ಷುಬ್ಧ ಅಲೆಗಳು' ಕಾದಂಬರಿಯನ್ನು ಬಿಡುಗಡೆಗೊಳಿಸಿದ್ದಾರೆ. ಅವರು ಇಂದು 'ಅಂಗಾಂಗ ದಾನ ಮತ್ತು ಕಸಿ–ಒಂದು ನೋಟ" ಎಂಬ ಲೇಖನವನ್ನು ಪ್ರಸ್ತುತಪಡಿಸಿದ್ದಾರೆ. ಅಂಗ ಕಸಿ ಮತ್ತು ಅಂಗಾಂಶ ಕಸಿಯಲ್ಲಿ ಹುದುಗಿರುವ ಹಲವಾರು ವಿಷಯಗಳನ್ನು, ಸತ್ಯಾಂಶಗಳನ್ನು, ಕಾನೂನು ರೀತ್ಯಾ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿದ್ದಾರೆ. ಯಾರೆಲ್ಲ ಅಂಗದಾನ ಮಾಡಬಹುದು, ತೆಗೆದ ಅಂಗಗಳನ್ನು ಎಷ್ಟು ಗಂಟೆಗಳ ಒಳಗೆ ಉಪಯೋಗಿಸಬೇಕು, ಪ್ರಚಲಿತ ಮೂಢನಂಬಿಕೆಗಳು, ಈ ಎಲ್ಲಾ ಅಂಶಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಸ್ವತಃ ವೈದ್ಯರಲ್ಲದೇ ಇದ್ದರೂ ಸಹ ವೈದ್ಯಲೋಕದಲ್ಲಿ ಪ್ರವೇಶಿಸಿ ಜನಜಾಗೃತಿ ಉಂಟು ಮಾಡುತ್ತಿರುವುದು ಶ್ಲಾಘನೀಯ. ಇವರಿಂದ ಮತ್ತಷ್ಟು ವೈಚಾರಿಕ ಲೇಖನಗಳು ಹೊರಬರಲಿ.

11. 'ಜೈಲು ಕಂಬಿಗಳಿಗೆ ಕಿವಿ ಇದ್ದಿದ್ದರೆ' (ಕವನ) – ಎಲ್. ಗಿರಿಜಾ ರಾಜ್

ಹಿರಿಯ ಲೇಖಕಿಯಾದ ಶ್ರೀಮತಿ. ಎಲ್. ಗಿರಿಜಾ ರಾಜ್ ರವರು ಇಂದು 'ಜೈಲು ಕಂಬಿಗಳಿಗೆ ಕಿವಿ ಇದ್ದಿದ್ದರೆ' ಎಂಬ ತಮ್ಮ ಕವನವನ್ನು ಪ್ರಸ್ತುತಿಪಡಿಸಿದ್ದಾರೆ. ತಾವು ಮಾಡಿದ ಅಪರಾಧದ ಅರಿವಾದ ನಂತರ ಕೈದಿಗಳು ಅನುಭವಿಸಬಹುದಾದ ಮನೋವೇದನೆಯನ್ನು ಚಿತ್ರಿಸಿದ್ದಾರೆ. ಯಾವುದೋ ಕೆಟ್ಟ ಘಳಿಗೆಯಲ್ಲಿ ತಪ್ಪೆಸಗಿ ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಾ ಸೆರೆಮನೆಯಲ್ಲಿ ಬಂಧಿಯಾಗಿ ಪರಿತಪಿಸುತ್ತಾ, ಮನೆಯವರ ಆಗಮನವನ್ನು ನಿರೀಕ್ಷಿಸುತ್ತಾ ಕಂಬನಿಗರೆಯುವ ದೃಶ್ಯ ಮನ ಕಲಕುತ್ತದೆ. ತಪ್ಪನ್ನು ಎಸಗುವ ಮೊದಲು ಮೆದುಳಬಳ್ಳಿ ಚಿಂತನೆ

ಮಾಡಿದ್ದರೆ ಬಂಧಿಯಾಗಿ ನರಳುವ ಪರಿಸ್ಥಿತಿಯೇ ಬರುತ್ತಿರಲಿಲ್ಲ ಎನ್ನುವುದು ಕವನದ ಪ್ರಮುಖ ಸಾಲುಗಳು. ಯಾವುದೇ ಕೆಲಸವಾಗಲಿ ಮೊದಲು ಯೋಚಿಸಿ ನಂತರ ಕೆಲಸ ಮಾಡಬೇಕು ಎನ್ನುವ ಕಿವಿಮಾತು ಹೇಳಿದ್ದಾರೆ.

12. 'ವರ ಪರೀಕ್ಷೆ' – ಮಾಧುರಿ ಕೃಷ್ಣ

ನೈಜ ಘಟನೆಗಳನ್ನು ಆಕರ್ಷಕವಾಗಿ ಬರೆದು ಸುಲಲಿತವಾಗಿ ಓದಿಸಿಕೊಂಡು ಹೋಗುವ ಜಾಣ್ಮೆ ಸಿದ್ಧಿಸಿರುವ ಲೇಖಕಿ ಮಾಧುರಿ ಕೃಷ್ಣರವರು ತಮ್ಮ 'ಟ್ರಯಲ್ ಅಂಡ್ ಎರರ್ಸ್' ಲೇಖನ ಮಾಲೆಯಲ್ಲಿ, 'ವರಪರೀಕ್ಷೆ'ಯನ್ನು ಪ್ರಸ್ತುತಿಪಡಿಸಿದ್ದಾರೆ.

ವರನ ಜಾತಕ ಹೊಂದಾಣಿಕೆಯಾಗುತ್ತದೆ ಎಂದ ತಕ್ಷಣ ವಧುವನ್ನು ಕರೆದುಕೊಂಡು ಜಾತಕ ನೀಡಿದವರ ಮನೆಗೆ ಧಾವಿಸಿ, ಅಲ್ಲಿ ಮನೆಯವರನ್ನೇ ಪರಕೀಯರನ್ನಾಗಿ ಮಾಡಿದ ಪ್ರಸಂಗ, ವರನು ಮನೆಯ ಒಳಗೆ ಬಾರದೆ ಹಾಗೆಯೇ ಹಿಂತಿರುಗಿ ಹೋಗಲಿ ಎನ್ನುವ ಲೇಖಕಿಯ ಆಸೆ, ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಹೆಣ್ಣು ಹೆತ್ತವರ ಆತಂಕ, 'ಹತ್ತಿರದಲ್ಲೇ ಬಂದಿದ್ದೆವು. ಅದಕ್ಕಾಗಿ ಇಂದೇ ವರನನ್ನು ನೋಡಲು ನಿಮ್ಮ ಮನೆಗೆ ಬರುತ್ತೇವೆ' ಎಂದು ಅನಿರೀಕ್ಷಿತ ಆಗಮನ, ಬೀಗ ತೆರೆದ ತಕ್ಷಣ ಮನೆ ಒಳಗೆ ನುಗ್ಗಿ ಅಲ್ಲಿ ನಡೆಸಿದ ದಾಕ್ಷಿಣ್ಯರಹಿತವಾದ ವರ್ತನೆ, ನಗರವಾಸಿಗಳಿಗೆ ಗ್ರಾಮೀಣ ಜನರ ನಡವಳಿಕೆಯ ದರ್ಶನವನ್ನು ಮಾಡಿಸುತ್ತದೆ. ಕುತೂಹಲಕರ ಘಟ್ಟದಲ್ಲಿ ಲೇಖನಕ್ಕೆ ತೆರೆ ಎಳೆದಿದ್ದಾರೆ.

13. 'ಮರು ಜನ್ಮ' (ಕವನ) – ಅನ್ನಪೂರ್ಣ ಸುಬ್ಬರಾವ್

ವಿಶ್ವ ತಾಯಂದಿರ ದಿನಾಚರಣೆಯ ಅಂಗವಾಗಿ ಎಲ್ಲರಿಗೂ ಶುಭ ಕೋರುತ್ತಾ ಲೇಖಕಿ ಶ್ರೀಮತಿ ಅನ್ನಪೂರ್ಣ ಸುಬ್ಬರಾವ್ ಅವರು ತಮ್ಮ 'ಮರುಜನ್ಮ' ಕವನವನ್ನು ಪ್ರಸ್ತುತಿಪಡಿಸಿದ್ದಾರೆ. ಮಗುವಿಗೆ ಜನ್ಮ ಕೊಟ್ಟು ಮರುಜನ್ಮ ಪಡೆದ ಎಲ್ಲಾ ತಾಯಂದಿರಿಗೆ ಕವನವನ್ನು ಸಮರ್ಪಿಸಿದ್ದಾರೆ. ಗರ್ಭಾವಸ್ಥೆಯ ಆರಂಭಿಕ ದಿನಗಳಲ್ಲಿ ಗರ್ಭಿಣಿಯ ಮಾನಸಿಕ, ದೈಹಿಕ ತುಮುಲ, ಸುತ್ತಲಿನವರ ಕಾಳಜಿಯ ಜೊತೆಗೆ ಕೆಲವೊಮ್ಮೆ ಗರ್ಭಿಣಿಗೆ ವಾಂತಿಯಿದ್ದಾಗ ಆಗುವ ದೈಹಿಕ ಬದಲಾವಣೆಗಳು ಎಲ್ಲವನ್ನೂ ಸರಳವಾಗಿ ಚಿತ್ರಿಸಿದ್ದಾರೆ. ಬಾವಿಯ ಕಪ್ಪೆಯಂತೆ ಬದುಕಲಾಗದೆ ಹೊರಬರಲು ತವಕಿಸುವ ಭ್ರೂಣಕ್ಕೆ, ನೀನಿನ್ನು ಹೊರಪ್ರಪಂಚಕ್ಕೆ ಬರಲು ಅಣಿಯಾಗಿಲ್ಲಾ, ಸಮಯ ಬಂದಾಗ ಹೊರಗೆ ಕರೆತರುವೆನೆಂದು ಸಮಾಧಾನ ಮಾಡಿ ಹೆರಿಗೆಯ ನಂತರ ಮುದ್ದು ಮಗುವನ್ನು ನೋಡಿ ಗರ್ಭಿಣಿಯಾಗಿ ಈ ಹಿಂದೆ ಪಟ್ಟಿದ್ದ ಎಲ್ಲಾ ನೋವನ್ನು ಮರೆಯುವ ತಾಯ್ತನದ ವಾಸ್ತವತೆಯನ್ನು ತೆರೆದಿಟ್ಟಿದ್ದಾರೆ.

14. 'ಎಲೆಕ್ಷನ್ನೂ.. ಪ್ರೇಮನ ಕಾಲು ಚೈನೂ..' – ಟಿ.ಎಸ್. ಶ್ರವಣ ಕುಮಾರಿ

ಹಿರಿಯ ಸಾಹಿತಿ, ಸಣ್ಣ ಕಥೆಗಳ ರಚನೆಯಲ್ಲಿ ಮುಂಚೂಣಿಯಲ್ಲಿರುವ ಶ್ರೀಮತಿ ಟಿ.ಎಸ್.ಶ್ರವಣಕುಮಾರಿಯವರು 'ಎಲೆಕ್ಷನ್ನೂ, ಪ್ರೇಮನ ಕಾಲು ಚೈನೂ' ಎಂಬ ಸಣ್ಣ ಕಥೆಯನ್ನು ಇಂದು ಪ್ರಸ್ತುಪಡಿಸಿದ್ದಾರೆ. ಇತ್ತೀಚೆಗಷ್ಟೇ ಲೋಕಸಭಾ ಚುನಾವಣೆಯು ಮುಗಿದಿದೆ. ಚುನಾವಣೆಯಲ್ಲಿ ನಡೆಯುವ ಅಕ್ರಮ, ಆಮಿಷದ ಬಗ್ಗೆ ಬೆಳಕು ಚೆಲ್ಲುವ ಸುಂದರ ಪ್ರಸ್ತುತಿ. ದೈನಂದಿನ ಘಟನೆಗಳನ್ನು ಅತ್ಯಾಕರ್ಷಕವೆನ್ನಿಸುವ ರೀತಿಯಲ್ಲಿ, ಸರಳ ಪದಗುಚ್ಛಗಳಲ್ಲಿ ಅದ್ಭುತವಾಗಿ ಹೆಣೆದಿದ್ದಾರೆ. ಜ್ವಲಂತ ಸಾಮಾಜಿಕ, ರಾಜಕೀಯ ಸಮಸ್ಯೆಯ ನೈಜ ಚಿತ್ರಣ ಇಲ್ಲಿದೆ. ಕೆಲಸದವಳ

ಜಾಣ್ಮೆ, ಅವಳ ತಾಯಿಯ ಮುಂದಾಲೋಚನೆ, ಮತದಾನ ಮಾಡುವ ಜಾಗೃತಿ, ಎಲ್ಲವನ್ನೂ ಹಾಸ್ಯಪ್ರಜ್ಞೆಯೊಂದಿಗೆ ಮಿಳಿತಗೊಳಿಸಿದ್ದಾರೆ. ಮನಸೆಳೆಯುವ ಕತೆ. ಅವರ ಮುಂದಿನ ಕಥೆಗಾಗಿ ಎದುರು ನೋಡೋಣ.

15. 'ಬಾಲಗೋಪಾಲ' ಹಾಗೂ 'ಸ್ವಲ್ಪ ಬದಲಾಗೋಣ' (ಎರಡು ಕವನಗಳು)–ಮಾಲತಿ ಶ್ರೀನಿವಾಸನ್

ನಿವೃತ್ತ ಪ್ರಾಧ್ಯಾಪಕಿ, ಗಾಯಕಿ, ಹಿರಿಯ ಸಾಹಿತಿಯೂ ಆಗಿರುವ ಶ್ರೀಮತಿ ಮಾಲತಿ ಶ್ರೀನಿವಾಸನ್‌ರವರು ಸಸಕಸ ವೇದಿಕೆಯ ಹಿರಿಯ ಸದಸ್ಯೆ. ಅವರು ಇಂದು 'ಬಾಲಗೋಪಾಲ' ಹಾಗೂ 'ಸ್ವಲ್ಪ ಬದಲಾಗೋಣ' ಎಂಬ ತಮ್ಮೆರಡು ಕವನಗಳನ್ನು ಪ್ರಸ್ತುತಪಡಿಸಿದ್ದಾರೆ.

ತಮ್ಮ ಮೊದಲನೆಯ ಕವನ 'ಬಾಲಗೋಪಾಲ'ದಲ್ಲಿ ತುಂಟ ನಗೆಯ ಬಲೆ ಬೀಸಿ ಎಲ್ಲರ ಮನವನ್ನು ಸೆಳೆಯುವ ಮೋಹಕ ಕಲೆ ಒಲಿದಿರುವ ಬಾಲಗೋಪಾಲನ ಸುಂದರ ಚಿತ್ರಣವನ್ನು ಮೂಡಿಸಿದ್ದಾರೆ.

ಎರಡನೇ ಕವನ 'ಸ್ವಲ್ಪ ಬದಲಾಗೋಣ'ದಲ್ಲಿ ಜೀವನದ ಸೊಬಗನ್ನು ಸವಿಯುವ ಪರಿಯನ್ನು ಹಂತ ಹಂತವಾಗಿ ಬಿಡಿಸಿದ್ದಾರೆ. ನಿನ್ನೆಗಳನ್ನು ಮರೆತು, ಇಂದಿನ ದಿನದಲ್ಲಿ ಬದುಕುತ್ತಾ, ಹೊಸತನ್ನು ಹುಡುಕೋಣ ಎನ್ನುತ್ತಾರೆ. ಕೋಪದ ನಿಟ್ಟುಸಿರಿನಲ್ಲೂ ಸಾಂತ್ವನತೆಯ ತಂಪನ್ನು ಕಾಣುವ ಭಾವ, ಸುಖ-ದುಃಖಗಳ ಸಮೀಕರಿಸಿ ತಂಬೆಲರ ಹರಿಸುವ ಸದಾಶಯ. ಮುಸ್ಸಂಜೆಯ ಮಬ್ಬಿನಲ್ಲೂ ಒಬ್ಬರಿನ್ನೊಬ್ಬರಿಗೆ ಆಸರೆಯಾಗಿ ನಿಂತ ನೀರಾಗದೆ ಬದಲಾವಣೆಯಲ್ಲಿ ಚಲಿಸುವುದು ಇಂದಿನ ದಿನಗಳಲ್ಲಿ ಅನಿವಾರ್ಯ. ನಾಳೆಗಳನ್ನು ಇಂದೇ ಸಂಭ್ರಮಿಸುವ ಸಕಾರಾತ್ಮಕ ದೃಷ್ಟಿಕೋನ ಎಲ್ಲರಲ್ಲೂ ಮೂಡಿ ಬರಲಿ, ಬದಲಾವಣೆ ಒಳಿತಿಗಾಗಿ ಇರಲಿ.

16. 'ತಾಂಬೂಲ ಎಲೆ ಅಡಿಕೆ' – ಶಾಂತಾ ನಾಗಮಂಗಲ

ಗಮಕ ವ್ಯಾಖ್ಯಾತೃ ಮತ್ತು ಲೇಖಕಿಯೂ ಆಗಿರುವ ಶ್ರೀಮತಿ ಶಾಂತಾ ನಾಗಮಂಗಲರವರು ಇಂದು ತಮ್ಮ 'ತಾಂಬೂಲ ಎಲೆ ಅಡಿಕೆ' ಲೇಖನವನ್ನು ಪ್ರಸ್ತುತಿಪಡಿಸಿದ್ದಾರೆ. ವೀಳೆಯದಲ್ಲಿ ಮುಖ್ಯವಾಗಿರುವ ವೀಳ್ಯದೆಲೆಯ ಪೂರ್ವ ಇತಿಹಾಸವನ್ನು ಶಾಸನಗಳು, ಚಿತ್ರಗಳು, ಗ್ರಂಥಗಳ ಆಧಾರ ಸಮೇತ ವಿಶದವಾಗಿ ತಿಳಿಸಿದ್ದಾರೆ. ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಬಹುಪಯೋಗಿ ವೀಳಯದ ಎಲೆಯ ಬಳಕೆ ಗುಪ್ತರ ಕಾಲದಿಂದ ಆರಂಭವಾಗಿದೆ ಎನ್ನುತ್ತಾರೆ. ವಿದೇಶಿ ಮೂಲದ ಎಲೆ ಅಡಿಕೆಗಳು ಇಂದು ಭಾರತೀಯ ಸಂಸ್ಕೃತಿಯಲ್ಲಿ ಸೇರಿಹೋಗಿವೆ. ಹಲವಾರು ಗ್ರಂಥಗಳನ್ನು ಅವಲೋಕಿಸಿ ಬಹಳಷ್ಟು ಶ್ಲೋಕಗಳನ್ನು ಉದಾಹರಿಸಿ ಲೇಖನವನ್ನು ಮೂಡಿಸಿರುವ ಪರಿ ಸಾಮಾನ್ಯರಿಗೆ ನಿಲುಕುವುದಿಲ್ಲ. ವೀಳೆಯದ ರುಚಿಯನ್ನು ಆಸ್ವಾದಿಸಲು ಅದನ್ನು ಜಗಿದು ತಿನ್ನಬೇಕು. ಹಾಗೆಯೇ ಪ್ರಬುದ್ಧ ಬರಹಗಾರ್ತಿ ಶ್ರೀಮತಿ ಶಾಂತರವರ ಲೇಖನಗಳನ್ನು ನಿಧಾನವಾಗಿ ಓದಿಯೇ ಆಸ್ವಾದಿಸಬೇಕು. ಅನಂತಾನಂತ ವಂದನೆಗಳು ಮೇಡಂ.

17. 'ಓಹೋ ಹಿಮಾಲಯ' – ಮಹಾಬಲ

ಸಸಕಸ ವೇದಿಕೆಯ ಸಂಚಾಲಕರೂ, ತಮ್ಮ ಪ್ರಬುದ್ಧ ಲೇಖನಗಳಿಂದ ಜನಪ್ರಿಯರೂ ಆಗಿರುವ ಶ್ರೀಯುತ ಕೆ.ಎನ್. ಮಹಾಬಲರವರ ಲಲಿತ ಪ್ರಬಂಧಗಳು, ಲೇಖನಗಳು ಮುದ ನೀಡುತ್ತವೆ. ಹಿಮಾಲಯ ಎಂದೊಡನೆ ಎಂತಹ

ಚಳಿಯಲ್ಲೂ ಸಹ ಮೈ ನವಿರೇಳುವುದು. ಅಂತಹ ವಿಶೇಷತೆ ಅಡಗಿದೆ ಹಿಮಾಲಯದಲ್ಲಿ. ಶ್ರೀಯುತ ಮಹಾಬಲರು 'ಓಹೋ ಹಿಮಾಲಯ' ಎಂಬ ತಮ್ಮ ಪ್ರವಾಸ ಕಥನವನ್ನು ಇಂದು ಪ್ರಸ್ತುತಿಪಡಿಸಿದ್ದಾರೆ. ಕಳೆದ ವರ್ಷದ ತಮ್ಮ ನೇಪಾಳ ಪ್ರವಾಸದ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಅನೇಕ ಮಾಹಿತಿಯನ್ನು ಒದಗಿಸಿದ್ದಾರೆ. ಪರ್ವತ ಶ್ರೇಣಿಯ ವೀಕ್ಷಣೆಯ ಭಾಗ್ಯ ಹವಾಮಾನವನ್ನು ಅವಲಂಬಿಸಿದೆ. ಕೆಲವೇ ಭಾಗ್ಯವಂತರಿಗೆ ಮಾತ್ರ ಲಭ್ಯವಾಗುತ್ತದೆ. ಜೋಡಿಸಿಟ್ಟ ಸಕ್ಕರೆಯಚ್ಚಿನ ಹಾಗೆ ಕಾಣುವ ಪರ್ವತ ಶ್ರೇಣಿಯ ವೀಕ್ಷಣೆ ರಮಣೀಯ. ಅಂತಹ ಸುಂದರ ದೃಶ್ಯವನ್ನು ಕಣ್ತುಂಬಿಕೊಳ್ಳಲು ಮನವು ಕಾತರಿಸುತ್ತಿದೆ. ಅವರ ಪ್ರವಾಸ ಕಥನ ಮುಂದಿನ ದಿನಗಳಲ್ಲಿ ನೇಪಾಳ ಪ್ರವಾಸ ಕೈಗೊಳ್ಳಲು ಉತ್ಸುಕರಾಗಿರುವವರಿಗೆ ಕೈಪಿಡಿ ಆಗಿರುತ್ತದೆ. ಧನ್ಯವಾದಗಳು ಸರ್.

18. 'ಬಿಟ್ಟ ಬಾಣ ಮುಂದೊತ್ತು' – ವೆಂಕಟೇಶ ಕಾಮತ್

ಪ್ರಸಕ್ತ ಪರಿಸ್ಥಿತಿಯ ಸುಂದರ ಅವಲೋಕನವನ್ನು ಮಾಡಿರುವ ಹಿರಿಯ ಲೇಖಕರಾದ ಶ್ರೀಯುತ ವೆಂಕಟೇಶ್ ಕಾಮತ್ ರವರು ತಮ್ಮ ಲೇಖನ 'ಬಿಟ್ಟ ಬಾಣ ಮುಂದೊತ್ತು'ವನ್ನು ಇಂದು ಪ್ರಸ್ತುತಪಡಿಸಿದ್ದಾರೆ. ತಂತ್ರಜ್ಞಾನದ ಆವಿಷ್ಕಾರದ ಫಲವಾಗಿ ಜನರ ಬಹಳಷ್ಟು ಸಮಯವನ್ನು ಕಸಿದುಕೊಳ್ಳುತ್ತಿರುವ ವಾಟ್ಸಾಪ್ ವಿಶ್ವವಿದ್ಯಾಲಯದ ಒಳಿತು ಕೆಡಕುಗಳನ್ನು ತೂಗಿ ವಿಶ್ಲೇಷಿಸಿದ್ದಾರೆ. ಋಷಿಮುನಿಗಳ ಶಾಪದಂತೆ ಬ್ರಹ್ಮಾಸ್ತ್ರದಂತೆ ಎಂಬ ಹೋಲಿಕೆ ನೀಡಿದ್ದಾರೆ. ಒಮ್ಮೆ ಬಂದ ಸಂದೇಶ ಮತ್ತೊಮ್ಮೆ ಅದೇ ಚರವಾಣಿ ಸಂಖ್ಯೆಗೆ ಬಾರದಂತೆ ಹೊಸ ಆವಿಷ್ಕಾರ ಮಾಡಿ ಶೀಘ್ರದಲ್ಲೇ ಜನರ ಸಮಯದ ಉಳಿತಾಯವಾಗಲಿ ಎಂಬ ಆಶಯ ಎಲ್ಲರದು.

ನನಗೆ ಈ ಅವಕಾಶ ಒದಗಿಸಿದ್ದಕ್ಕಾಗಿ ಮತ್ತೊಮ್ಮೆ ಸಸಕಸ ವೇದಿಕೆಯ ಸಂಚಾಲಕರಿಗೂ, ಎಲ್ಲ ಪ್ರಸ್ತುತಿಕಾರರಿಗೂ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 225 ನಡೆದ ದಿನಾಂಕ: 11 ಮೇ 2024

ಸಂಚಿಕೆಯ ಬಿಡುಗಡೆ ದಿನಾಂಕ: 08 ಜೂನ್ 2024 – ಶನಿವಾರ